# ಕಮಲ ಪತ್ರ

RNI No.:KARKAN/2023/84034 | ಸಂಪುಟ : 01 | ಸಂಚಿಕೆ : 09 | ಡಿಸೆಂಬರ್ 2023 | ಬೆಂಗಳೂರು | ₹ 10/-




## ಮೋದಿ ನಾಯಕತ್ವಕ್ಕೆ ಮತ್ತೊಮ್ಮೆ ಮನ್ನಣೆ...




ಹಿಮಾಚಲ ಪ್ರದೇಶದ ಲೆಪ್ಚಾದಲ್ಲಿ ಸೈನಿಕರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ದೀಪಾವಳಿ ಸಂಭ್ರಮಾಚರಣೆ



ಜಾರ್ಖಂಡ್ ರಾಂಚಿಯ ಬುಡಕಟ್ಟು ಜನಾಂಗದ ಸ್ವಾತಂತ್ರ್ಯ ಹೋರಾಟಗಾರ ದಿ. ಬಿರ್ಸಾ ಮುಂಡಾ ಅವರ ಜನ್ಮ ದಿನದಂದು ಪ್ರಧಾನಿ ಶ್ರೀ ಮೋದಿಯವರಿಂದ ಪುಷ್ಪನಮನ



ವರ್ಚುವಲ್ ಜಿ-20 ಸಭೆಯಲ್ಲಿ ಪ್ರಧಾನಿ ಶ್ರೀ ಮೋದಿಯವರಿಂದ ಉದ್ಘಾಟನಾ ಭಾಷಣ



ಪ್ರಧಾನಿ ಶ್ರೀ ನರೇಂದ್ರ ಮೋದಿರವರಿಂದ ಸ್ವದೇಶಿ ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ



ವರ್ಚುವಲ್ ಮೂಲಕ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯ ಫಲಾನುಭವಿಗಳೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಸಂವಾದ




ದುಬೈನಲ್ಲಿ ಆಯೋಜಿಸಿದ್ದ ಸಿಒಪಿ-28 ಶೃಂಗ ಸಭೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




ಸಂಸತ್ತಿನ ವಿಶೇಷ ಅಧಿವೇಶನ ಆರಂಭಕ್ಕೂ ಮುನ್ನ ಮಾಧ್ಯಮದೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ

# ವಿರೋಧಿಗಳಿಗೆ ಭ್ರಮನಿರಸನ, ಬಿಜೆಪಿಗೆ ಪೂರಕ ವಾತಾವರಣ

**ಐ**ದು ರಾಜ್ಯಗಳ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ. ಈ ಐದು ರಾಜ್ಯಗಳ ಪೈಕಿ ಮೂರು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವುದರ ಜೊತೆಗೆ ತೆಲಂಗಾಣದಲ್ಲಿ ಮತ ಹಾಗೂ ಸ್ಥಾನಗಳೆರಡರ ಗಳಿಕೆಯ ಪ್ರಮಾಣವೂ ಹೆಚ್ಚಳವಾಗಿರುವುದರಿಂದ ಸಹಜವಾಗಿ ಬಿಜೆಪಿಯ ಕಾರ್ಯಕರ್ತರ ಉತ್ಸಾಹ ಇಮ್ಮಡಿಯಾಗಿದೆ. ಎಲ್ಲಾ ಸಮೀಕ್ಷೆಗಳನ್ನು ಸುಳ್ಳಾಗಿಸಿದ ಈ ಫಲಿತಾಂಶ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿಕೊಟ್ಟಿದೆ.

ಕರ್ನಾಟಕದ ಚುನಾವಣಾ ಫಲಿತಾಂಶದಿಂದ ಹಿಗ್ಗಿಹೋಗಿದ್ದ ಕಾಂಗ್ರೆಸ್ ಹಾಗೂ ಮತ್ತಿತರ ವಿರೋಧ ಪಕ್ಷಗಳು ಪ್ರಧಾನಿ ಶ್ರೀ ನರೇಂದ್ರಮೋದಿಯವರ ಜನಪ್ರಿಯತೆಯ ಬಗ್ಗೆ ಸಂಶಯ ಪಡುತ್ತಿದ್ದುದು ಮಾತ್ರವಲ್ಲದೆ, ರಾಜಸ್ಥಾನ ಹೊರತು ಪಡಿಸಿ ಇನ್ನೆಲ್ಲಾ ರಾಜ್ಯಗಳಲ್ಲೂ ಅಧಿಕಾರದ ಕನಸು ಕಂಡಿದ್ದವು. ಮೋದಿಯವರನ್ನು ಮಣಿಸಲು ಸಮನ್ವಯವೇ ಇಲ್ಲದ ಸಂಘಟನೆಗಳೆಲ್ಲಾ ಒಟ್ಟಾಗಿ ಒಕ್ಕೂಟ ರಚಿಸಿಕೊಂಡಿದ್ದವು. ಆದರೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ವಿರೋಧಪಕ್ಷಗಳಿಗೆ ಭ್ರಮನಿರಸನ ಉಂಟು ಮಾಡಿದೆ.

ಕರ್ನಾಟಕದಲ್ಲಿ ಗ್ಯಾರಂಟಿಗಳ ಆಮಿಷಗಳೊಂದಿಗೆ ಚುನಾವಣೆಯಲ್ಲಿ ಸಾಧಿಸಿದ ಗೆಲುವು ಇನ್ನಿತರ ರಾಜ್ಯಗಳಲ್ಲೂ ಪುನರಾವರ್ತನೆಯಾಗುತ್ತದೆ ಎಂಬ ವಿರೋಧಪಕ್ಷಗಳ ನಂಬಿಕೆಯನ್ನು ಐದು ರಾಜ್ಯಗಳ ಮತದಾರ ಹುಸಿ ಮಾಡಿದ್ದಾನೆ. ದೇಶದ ಬಗೆಗೊಂದು ದೃಷ್ಟಿಕೋನ, ಅಭಿವೃದ್ಧಿಗೊಂದಿಷ್ಟು ಯೋಚನೆ, ಯೋಜನೆಗಳಾವುದನ್ನೂ ಪ್ರಸ್ತಾಪಿಸದೆ, ಮೋದಿ ವಿರೋಧಿಸುವುದನ್ನೇ ಕಾಯಕ ಮಾಡಿಕೊಂಡು ಪ್ರಚಾರ ಮಾಡಿದ ಕಾಂಗ್ರೆಸ್ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳಿಗೆ, ಜನತೆ ನೀಡಿರುವ ತೀರ್ಪು ಒಂದು ಪಾಠವೆಂದು ಹೇಳಬಹುದು. ಈ ಫಲಿತಾಂಶ ಬಿಜೆಪಿಯಲ್ಲಿ ಉತ್ಸಾಹದ ವಾತಾವರಣವನ್ನು ಸೃಷ್ಟಿಸಿರುವುದರ ಜೊತೆಗೆ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ವ್ಯಕ್ತವಾಗಬಹುದಾದ ಜನತೆಯ ನಿಲುವಿನ ದಿಕ್ಸೂಚಿಯೂ ಆಗಿದೆ. ಆರ್ಥಿಕ ಪರಿಸ್ಥಿತಿಯ ಅಧಃಪತನಕ್ಕೆ ಕಾರಣವಾಗಬಹುದಾದ ವಿರೋಧ ಪಕ್ಷಗಳ ಆಮಿಷಗಳ ಗ್ಯಾರಂಟಿಗಿಂತ ದೇಶದ ಹಿತ ಚಿಂತನೆಯ ಮೋದಿ ಗ್ಯಾರಂಟಿಯೇ ಲೇಸು ಎಂಬುದು ಪ್ರತೀ ಮತದಾರನ ಇಂಗಿತ ಎಂಬುದು ಈ ಫಲಿತಾಂಶದಿಂದ ವೇದ್ಯವಾಗುತ್ತದೆ.

**ಸಂಪಾದಕೀಯ**

ರಾಜ್ಯದ ಬಿಜೆಪಿ ನೂತನ ಅಧ್ಯಕ್ಷರ ಎಡಬಿಡದ ಪ್ರವಾಸ ಬಿಜೆಪಿಯಲ್ಲಿ ಚಟುವಟಿಕೆಗಳು ತೀವ್ರಗೊಳ್ಳಲು ಕಾರಣವಾಗಿದೆ. ಅದರಲ್ಲೂ ಪ್ರತೀ ಪ್ರವಾಸದಲ್ಲೂ ಬೂತ್ ಅಧ್ಯಕ್ಷರ ಮನೆಗೆ ಭೇಟಿ ಕೊಡುತ್ತಿರುವ ರಾಜ್ಯ ಅಧ್ಯಕ್ಷರ ನಡೆ ಕೆಳಹಂತದ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿದೆ. ಪೂರ್ಣ ಪ್ರಮಾಣದ ತಂಡದ ರಚನೆಯ ನಂತರ ಬಿಜೆಪಿಯಲ್ಲಿ ಮತ್ತಷ್ಟು ಚಟುವಟಿಕೆಗಳು ಗರಿಗೆದರಲು ಕಾರಣವಾಗಬಹುದು.

ರಾಜ್ಯದಲ್ಲಿ ಕಾಂಗ್ರೆಸ್‌ನ ಮುಖ್ಯಮಂತ್ರಿ ಮತ್ತೆ ತುಷ್ಟೀಕರಣದ ಹಾದಿಯಲ್ಲಿಯೇ ಸಾಗುತ್ತಿದ್ದಾರೆ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಹತ್ತು ಸಾವಿರ ಕೋಟಿ ರೂಗಳನ್ನು ಮೀಸಲಿಡುವುದಾಗಿ ಘೋಷಿಸಿರುವ ಸಿದ್ದರಾಮಯ್ಯನವರು ಬರ ಪರಿಹಾರಕ್ಕೆ ಹಾಗೂ ರೈತರ ನೆರವಿಗೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಹಿಂದೇಟು ಹಾಕುತ್ತಿರುವುದು ಅವರ ರಾಜಕೀಯ ದ್ವಿಮುಖ ನೀತಿಗಳಿಗೆ ಸ್ಪಷ್ಟ ಉದಾಹರಣೆ ಎನ್ನಬಹುದು.

ಇಂಧನ ಸಚಿವ ಕೆ.ಜೆ. ಜಾರ್ಜ್‌ರವರು ಟ್ರಾನ್ಸ್‌ಫಾರ್ಮರ್ ಖರೀದಿಗೆ ಕೇರಳ ಸಂಸ್ಥೆಯೊಂದರ ಜೊತೆ ಮಾಡಿಕೊಂಡಿರುವ ಒಪ್ಪಂದ ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಝಮೀರ್ ಅಹಮದ್‌ರವರು ಸ್ಪೀಕರ್ ಸ್ಥಾನದ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ರಾಜ್ಯ ಸರ್ಕಾರ ಡಿ.ಕೆ. ಶಿವಕುಮಾರ್‌ರವರ ಮೇಲಿನ ಪ್ರಕರಣಗಳ ಬಗ್ಗೆ ಸಿಬಿಐ ತನಿಖೆ ಯನ್ನು ಹಿಂಪಡೆದುಕೊಂಡಿದೆ. ರಾಜ್ಯದೆಲ್ಲೆಡೆ ಭೀಕರ ಬರಗಾಲ ರೈತರಲ್ಲಿ ಆತಂಕವನ್ನು ಸೃಷ್ಟಿಸಿದೆ. ಸಂಕಷ್ಟದಲ್ಲಿ ರೈತರಿಗೆ ನೆರವಾಗದ ಕಾಂಗ್ರೆಸ್ ಸರಕಾರದ ವಿರುದ್ಧ ವಿಧಾನಸಭೆಯಲ್ಲಿ ಪ್ರತಿಪಕ್ಷವಾದ ಬಿಜೆಪಿ ತನ್ನ ಹೋರಾಟವನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದೆ. ಹದಗೆಟ್ಟಿರುವ ರಾಜ್ಯದ ಆಡಳಿತ ಬಿಜೆಪಿಗೆ ಕಾಂಗ್ರೆಸ್ ವಿರುದ್ಧದ ಯುದ್ಧಕ್ಕೆ ಸಮರ್ಥವಾದ ವೇದಿಕೆಯನ್ನು ಒದಗಿಸಿಕೊಟ್ಟಿದೆ. ಐದು ರಾಜ್ಯಗಳ ಫಲಿತಾಂಶ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಮೂಡಿಸಿರುವುದರ ಜೊತೆಗೆ ಉತ್ಸಾಹ ಇಮ್ಮಡಿಯಾಗಲು ಕಾರಣವಾಗಿದೆ. ನೂತನ ರಾಜ್ಯ ಅಧ್ಯಕ್ಷರ ಮತ್ತು ವಿರೋಧಪಕ್ಷ ಅಧ್ಯಕ್ಷರ ಆಯ್ಕೆಯೂ ಆಗಿದೆ. ಈ ಎಲ್ಲಾ ಸಕಾರಾತ್ಮಕ ಅಂಶಗಳೊಂದಿಗೆ ಹತ್ತಿರದಲ್ಲೇ ಎದುರಾಗಲಿರುವ ಲೋಕಸಭಾ ಚುನಾವಣೆಗಳಿಗೆ ತಂತ್ರ, ಪ್ರತಿತಂತ್ರಗಳನ್ನು ರೂಪಿಸಿ ಮತ್ತೊಮ್ಮೆ ಮೋದಿಯವರನ್ನು ಪ್ರಧಾನಿಯಾಗಿಸುವ ಚಟುವಟಿಕೆಗಳಿಗೆ ಕ್ರಿಯಾಶೀಲತೆಯಿಂದ ವೇಗ ಕೊಡುವುದೊಂದೇ ಬಾಕಿ ಉಳಿದಿದೆ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್
ಮೊ : 9513447961

## ಸುಭಾಷಿತ



**ನಾನು ಬದುಕಿದ್ದರೂ ಭಾರತಕ್ಕಾಗಿಯೇ ಸತ್ತರೂ ಭಾರತಕ್ಕಾಗಿಯೇ, ಸತ್ತ ಮೇಲೆ ಗಂಗಾ ನದಿಯಲ್ಲಿ ಬಿಟ್ಟ ನನ್ನ ಅಸ್ತಿಯನ್ನು ಕಿವಿಗೆ ಹಿಡಿದು ಕೇಳಿದರೂ 'ಭಾರತ ಮಾತಾ ಕೀ ಜೈ' ಎಂದು ಹೇಳುತ್ತದೆ**

**– ಅಟಲ್ ಬಿಹಾರಿ ವಾಜಪೇಯಿ**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ




**07 ಮೋದಿ ನಾಯಕತ್ವಕ್ಕೆ ಮತ್ತೊಮ್ಮೆ ಮನ್ನಣೆ**



**11 ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಪ್ರವಾಸ**

- **ದೀವಟಿಗೆ :** ಅಪ್ರತಿಮ ಮದನ್ ಮೋಹನ್ ಮಾಳವೀಯ ...................... 05
- ತಮ್ಮ ಭದ್ರತಾ ಪಡೆಗಳ ಕುರಿತು ವಿಶೇಷ ಕಾಳಜಿ ವಹಿಸಿದ್ದ ವಾಜಪೇಯಿ ...........06
- ಪ್ರಧಾನಮಂತ್ರಿ ಸ್ವ-ನಿಧಿಯಿಂದ ಸಮೃದ್ಧಿಯವರೆಗೆ ಜಾಗೃತಿ ಸಮಾವೇಶ..........17
- ವಿಪಕ್ಷ ನಾಯಕರಾಗಿ ಶ್ರೀ ಆರ್. ಅಶೋಕ........................................23
- ಬರ ಅಧ್ಯಯನ ಪ್ರವಾಸ ....................................................24
- ಬೆಳಗಾವಿ ಸುವರ್ಣ ಸೌಧದಲ್ಲಿ ವಿಧಾನಮಂಡಲ ಅಧಿವೇಶನ .....................27
- ಕಾರ್ಯಾಚರಣೆ, ಕಾರ್ಮಿಕರ ರಕ್ಷಣೆ...............................................30
- ರಾಜ್ಯ ಬಿಜೆಪಿ ಒಬಿಸಿ ಮೋರ್ಚಾ ವಿಶೇಷ ಸಭೆ....................................34
- ವಿಕಸಿತ ಭಾರತ ಸಂಕಲ್ಪ ಯಾತ್ರೆ.................................................36
- ಹಿರಿಯ ಕಾರ್ಯಕರ್ತರ ಪರಿಚಯಮಾಲೆ : ಚಂದಪ್ಪಾ ಸಮಗಾರ................37
- **ಮನ್ ಕಿ ಬಾತ್** – ವಿದೇಶಗಳಲ್ಲಿ ಮದುವೆ ಬೇಡ ... ............................. 38

ದೀವಟಿಗೆ

ಹರೀಶ್ ಆತ್ರೇಯ
ಬಿಜೆಪಿ ಕಾರ್ಯಕರ್ತರು



## ಅಪ್ರತಿಮ ವ್ಯಕ್ತಿತ್ವ
# ಮದನ್ ಮೋಹನ್ ಮಾಳವೀಯ
**(ಡಿಸೆಂಬರ್ 25, 1861 – ನವೆಂಬರ್ 12, 1946)**

ಮದನ್ ಮೋಹನ್ ಮಾಳವೀಯ ಅವರು ಭಾರತದ ಇತಿಹಾಸದಲ್ಲಿ ಅಪ್ರತಿಮ ವ್ಯಕ್ತಿಯಾಗಿ, ಅವರ ಬಹುಮುಖಿ ಕೊಡುಗೆಗಳನ್ನು ಕೊಟ್ಟವರಾಗಿ ಗುರುತಿಸಲ್ಪಟ್ಟವರು. ಪ್ರಸ್ತುತ ಸನ್ನಿವೇಶದಲ್ಲಿಯೂ ಸಹ, ಮಾಳವೀಯರ ವಿಶಿಷ್ಟತೆ ಮತ್ತು ಪ್ರಾಮುಖ್ಯತೆಯು ಹಲವಾರು ಕಾರಣಗಳಿಗಾಗಿ ಮಹತ್ವದ್ದಾಗಿದೆ.

**ಶೈಕ್ಷಣಿಕ ಕ್ಷೇತ್ರದ ದಾರ್ಶನಿಕ ವ್ಯಕ್ತಿ :** ಮಾಳವೀಯರವರು ಎಲ್ಲರಿಗೂ ಶಿಕ್ಷಣವನ್ನು ಕೊಡುವ ಸಮಾಜವನ್ನು ಕಟ್ಟುವ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ಏಷ್ಯಾದ ಅತಿದೊಡ್ಡ ವಸತಿ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಬನಾರಸ್ ಹಿಂದೂ ವಿಶ್ವವಿದ್ಯಾಲಯವನ್ನು (BHU) ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಶಿಕ್ಷಣಕ್ಕಾಗಿ ಅವರ ದೃಷ್ಟಿ ಸಾಂಪ್ರದಾಯಿಕ ಭಾರತೀಯ ಕಲಿಕೆ ಮತ್ತು ಆಧುನಿಕ ಶಿಕ್ಷಣದ ಮಿಶ್ರಣವನ್ನು ಒಳಗೊಂಡಿದ್ದು, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಅದರ ಪಾತ್ರವನ್ನು ಒತ್ತಿಹೇಳುತ್ತದೆ. ಇಂದಿನ ಸಂದರ್ಭದಲ್ಲಿ, ಸಮಗ್ರ ಶಿಕ್ಷಣ ಮತ್ತು ಸಾಂಪ್ರದಾಯಿಕ ಮತ್ತು ಆಧುನಿಕ ಜ್ಞಾನ ವ್ಯವಸ್ಥೆಗಳ ಏಕೀಕರಣಕ್ಕೆ ಅವರ ಒತ್ತು ಗಮನಾರ್ಹವಾಗಿದೆ.

**ಸಮಾಜ ಸುಧಾರಣೆಯ ಮುಂಚೂಣಿಯ ನಾಯಕ:** ಅವರು ಸಮಾಜ ಸುಧಾರಣಾ ಚಳುವಳಿಗಳನ್ನು ವಿಶೇಷವಾಗಿ ವರ್ಗೀಯ ಸಮಾನತೆ ಮತ್ತು ಮಹಿಳಾ ಹಕ್ಕುಗಳ ಬಗೆಗಿನ ಚಳುವಳಿಗಳನ್ನು ಬೆಂಬಲಿಸಿದರು. ಮಾಳವೀಯ ಅವರ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಸಬಲೀಕರಣದ ತತ್ವಗಳು ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಎಲ್ಲರಿಗೂ ಸಮಾನ ಅವಕಾಶಗಳ ಕುರಿತು ಸಮಕಾಲೀನ ಚರ್ಚೆಗಳಲ್ಲಿ ಬಲವಾಗಿ ಪ್ರತಿಧ್ವನಿಸುತ್ತದೆ.

**ರಾಜಕೀಯ ನಾಯಕತ್ವ:** ಮಾಳವೀಯ ಅವರು ಭಾರತದ ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಪ್ರಮುಖ ರಾಜಕೀಯ ವ್ಯಕ್ತಿಯಾಗಿದ್ದರು. ಭಾರತದ ರಾಜಕೀಯ ವ್ಯವಸ್ಥೆಯನ್ನು ರೂಪಿಸುವಲ್ಲಿ ಅವರ ಪಾತ್ರ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಅವರ ಅಚಲವಾದ ಬದ್ಧತೆಯು ಪ್ರಜಾಪ್ರಭುತ್ವದ ಮೌಲ್ಯಗಳು, ರಾಷ್ಟ್ರೀಯ ಸಮಗ್ರತೆ ಮತ್ತು ಸನ್ಮಾರ್ಗದ ಆಡಳಿತದ ಅನ್ವೇಷಣೆಯಲ್ಲಿ ನಾಯಕರು ಮತ್ತು ನಾಗರಿಕರನ್ನು ಪ್ರೇರೇಪಿಸುತ್ತದೆ.

**ಪತ್ರಿಕೋದ್ಯಮದಲ್ಲಿ ಮಾಳವೀಯ:** ಮಾಳವೀಯರವರು ಪತ್ರಿಕಾ ಶಕ್ತಿಯನ್ನು ಬಳಸಿಕೊಂಡು ಮಾಹಿತಿಯನ್ನು ಪ್ರಸಾರ ಮಾಡಲು, ಸಾಮಾಜಿಕ ಬದಲಾವಣೆಯನ್ನು ಪ್ರತಿಪಾದಿಸಲು ಮತ್ತು ರಾಷ್ಟ್ರೀಯತೆಯ ಉತ್ಸಾಹವನ್ನು ಉತ್ತೇಜಿಸಿದರು. ಮಾಹಿತಿ ಪ್ರಸರಣ ಮತ್ತು ಮಾಧ್ಯಮದ ಪ್ರಭಾವದ ಪ್ರಸ್ತುತ ಯುಗದಲ್ಲಿ, ಪತ್ರಿಕೋದ್ಯಮದ ನೈತಿಕತೆ ಮತ್ತು ಜವಾಬ್ದಾರಿಯ ಬಗ್ಗೆ ಅವರ ಬದ್ಧತೆಯನ್ನು ಓದಿದಾಗ/ತಿಳಿದುಕೊಂಡಾಗ ಅವರಿತ್ತ ಮಾರ್ಗದರ್ಶನವು ದಾರಿದೀಪವಾಗಿ ನಿಂತಿದೆ.

**ದೇಶಭಕ್ತಿ ಮತ್ತು ರಾಷ್ಟ್ರೀಯತೆಯ ಶಕ್ತಿಕೇಂದ್ರ:** ಮಾಳವೀಯ ಅವರು ದೇಶಭಕ್ತಿ ಮತ್ತು ರಾಷ್ಟ್ರೀಯತೆಯ ಚೈತನ್ಯವನ್ನು ಬಿಂಬಿಸಿದವರು. ರಾಷ್ಟ್ರದ ಕಲ್ಯಾಣಕ್ಕಾಗಿ ಅವರ ಅಚಲವಾದ ಸಮರ್ಪಣೆ, ಸಾಂಸ್ಕೃತಿಕ ಹೆಮ್ಮೆಯ ಆಳವಾದ ಪ್ರಜ್ಞೆಯು, ಇಂದಿನ ವೈವಿಧ್ಯಮಯ ಮತ್ತು ವಿಕಾಸಗೊಳ್ಳುತ್ತಿರುವ ಸಮಾಜದಲ್ಲಿ ಏಕತೆ, ಸಮಗ್ರತೆ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರಾಮುಖ್ಯತೆಯನ್ನು ನೆನಪಿಸುತ್ತದೆ.

**ಸಹಿಷ್ಣುತೆ ಮತ್ತು ಸಾಮರಸ್ಯದ ಮೌಲ್ಯಗಳು:** ಮಾಳವೀಯರವರು ತಮ್ಮ ಜೀವನದುದ್ದಕ್ಕೂ ವಿವಿಧ ಸಮುದಾಯಗಳ ನಡುವೆ ಸಹಿಷ್ಣುತೆ, ಸಾಮರಸ್ಯ ಮತ್ತು ಪರಸ್ಪರ ಗೌರವದ ಮೌಲ್ಯಗಳನ್ನು ಎತ್ತಿ ಹಿಡಿದರು. ಸಮಕಾಲೀನ ಸಂದರ್ಭದಲ್ಲಿ, ಶಾಂತಿಯುತ ಸಹಬಾಳ್ವೆಗೆ ಸಾಮಾಜಿಕ ಸಾಮರಸ್ಯ ಮತ್ತು ಸಹಿಷ್ಣುತೆ ನಿರ್ಣಾಯಕವಾಗಿದೆ, ಅವರ ಬೋಧನೆಗಳು ಅಪಾರ ಪ್ರಸ್ತುತತೆಯನ್ನು ಹೊಂದಿವೆ. ಪ್ರಸ್ತುತ ಸನ್ನಿವೇಶದಲ್ಲಿ ಮದನ್ ಮೋಹನ್ ಮಾಳವೀಯ ಅವರ ಅನನ್ಯತೆ ಮತ್ತು ಮಹತ್ವವು ಅವರ ಜ್ಞಾನಸಾಗರದಲ್ಲಿನ ಶೈಕ್ಷಣಿಕ ದಾರ್ಶನಿಕತೆ, ಸಮಾಜ ಸುಧಾರಣೆ, ರಾಜಕೀಯ ಧೀಮಂತಿಕೆ, ಪತ್ರಕರ್ತ ಮೌಲ್ಯ, ದೇಶಪ್ರೇಮ ಮತ್ತು ಭಾರತದ ಸಾಮಾಜಿಕ ರಚನೆಯನ್ನು ರೂಪಿಸಲು ಮುಂದುವರಿಯುವ ಮೌಲ್ಯಗಳ ಪ್ರತಿಪಾದಕರಾಗಿದ್ದಾರೆ. ಅವರ ತತ್ವಗಳು ಮತ್ತು ಆದರ್ಶಗಳು ಆಧುನಿಕ ಭಾರತ ಎದುರಿಸುತ್ತಿರುವ ಸವಾಲುಗಳು ಮತ್ತು ಅವಕಾಶಗಳನ್ನು ಉಪಯೋಗಿಸಿಕೊಳ್ಳುವಂತೆ ಮಾಡಲು ಅನಿಯಮಿತ ದಿಕ್ಸೂಚಿಯನ್ನು ಒದಗಿಸುತ್ತವೆ.

# ತಮ್ಮ ಭದ್ರತಾ ಪಡೆಗಳ ಕುರಿತು ವಿಶೇಷ ಕಾಳಜಿ ವಹಿಸುತ್ತಿದ್ದ
# ಅಟಲ್ ಬಿಹಾರಿ ವಾಜಪೇಯಿ



**ಸುಬ್ಬ ನರಸಿಂಹ**
**ರಾಜ್ಯ ಕೋಶಾಧ್ಯಕ್ಷರು, ಬಿಜೆಪಿ**

'**ಯಾ**ರೂ ಆಲಂಗಿಸಲಾಗದಷ್ಟು ಎತ್ತರಕ್ಕೆ ನನ್ನ ಏರಿಸದಿರು' ಎನ್ನುವ ವಾಜಪೇಯಿಯವರ ಈ ಮಾತುಗಳನ್ನು ಅವರ ಒಡನಾಡಿಗಳು ಒಮ್ಮೆಯಾದರೂ ನೆನಪಿಸಿಕೊಳ್ಳುತ್ತಾರೆ. ಬಿಜೆಪಿ ಕಾರ್ಯಕರ್ತರ ಪಕ್ಷ, ಇಲ್ಲಿ ನಾಯಕ ಮತ್ತು ಒಬ್ಬ ಸಾಮಾನ್ಯ ಕಾರ್ಯಕರ್ತನ ನಡುವೆ ಅಂತರ ಬಹಳ ಕಡಿಮೆ, ಪ್ರತಿಯೊಬ್ಬ ನಾಯಕರು ಎತ್ತರಕ್ಕೆ ಬೆಳೆದಷ್ಟೂ ಅವರಿಗೆ ಪಕ್ಷದ ಕಾರ್ಯಕರ್ತರ ಜೊತೆಗೆ ಹಿಂದಿನಷ್ಟು ಸುಲಭವಾಗಿ ಮತ್ತು ಮುಕ್ತವಾಗಿ ಬೆರೆಯಲು ಕಷ್ಟವಾಗುತ್ತದೆ ಎನ್ನುವ ಒಂದು ನೋವು ಸದಾ ಇತ್ತು. ಕಾರ್ಯಕರ್ತರ ನಡುವಿನ ಸಂಪರ್ಕ ಕಷ್ಟಸಾಧ್ಯವಾದರೆ ಅವರಿಗೂ ತೊಂದರೆ ನಮಗೂ ತೊಂದರೆ. ಅಂತಹ ಎಲ್ಲ ಸಂದರ್ಭದಲ್ಲಿ ವಾಜಪೇಯಿಯವರ ಈ ಮಾತುಗಳನ್ನು ಒಂದಲ್ಲಾ ಒಂದು ಸಂದರ್ಭದಲ್ಲಿ ನೆನಪಿಸಿಕೊಂಡು ತಮ್ಮ ತುಮುಲಗಳನ್ನು ಹೊರಗೆ ಹಾಕುತ್ತಾರೆ.

ಅಟಲ್ ಬಿಹಾರಿ ವಾಜಪೇಯಿಯವರು ಬಿಜೆಪಿ ಕಾರ್ಯಕರ್ತರ ಅಚ್ಚುಮೆಚ್ಚಿನ ನಾಯಕ. ಅವರು ಯಾವುದೇ ಸಭೆ ಸಮಾರಂಭಗಳಿಗೆ ಹೋದರೂ ಬೆಲ್ಲಕ್ಕೆ ಇರುವೆ ಮುತ್ತಿಕೊಳ್ಳುವ ಹಾಗೆ ಕಾರ್ಯಕರ್ತರು ವಾಜಪೇಯಿಯವರ ಸುತ್ತ ಮುತ್ತಿಕೊಳ್ಳುತ್ತಿದ್ದರು. ಅವರ ಜೊತೆಗೆ ಒಂದರೆಡು ಮಾತು, ಫೋಟೋ ತೆಗೆಸಿಕೊಳ್ಳುವುದಕ್ಕೆ ಸದಾ ಕಾಯುತ್ತಿದ್ದರು. ವಾಜಪೇಯಿಯವರಿಗೂ ಅದು ಒಂದು ರೀತಿ ಖುಷಿ ಕೊಡುವ ಸಂಗತಿ. ಹೀಗಿದ್ದ ವಾಜಪೇಯಿಯವರಿಗೆ ಭದ್ರತೆ ಒದಗಿಸುವ ಕಾರಣಕ್ಕೆ ಎಸ್‌ಪಿಜಿಯನ್ನು ಸರ್ಕಾರ ನಿಯೋಜನೆ ಮಾಡುತ್ತದೆ. ಅವರು ದೇಶದ ಉದ್ದಗಲಕ್ಕೆ ಎಲ್ಲೇ ಪ್ರಯಾಣ ಮಾಡಿದರೂ ಅವರ ಭದ್ರತೆಯ ಜವಾಬ್ದಾರಿ ಈ ವಿಶೇಷ ಭದ್ರತಾ ದಳದ್ದೇ ಆಗಿರುತ್ತದೆ. ಇದು ಭದ್ರತೆಯ ದೃಷ್ಟಿಯಿಂದ ಮುಖ್ಯವಾದರೂ ಒಬ್ಬ ರಾಜಕಾರಣಿಯಾಗಿ ಕಾರ್ಯಕರ್ತರಿಗೆ ಅತ್ಯಂತ ಸುಲಭವಾಗಿ ಸಿಗುತ್ತಿದ್ದ ಅವರಿಗೆ ಈ ಭದ್ರತಾ ವ್ಯವಸ್ಥೆ ನಿಜಕ್ಕೂ ಬೇಸರವಾಗಿತ್ತಾದರೂ ಅದರ ಅಗತ್ಯವಂತೂ ಇತ್ತು. ಒಂದಷ್ಟು ಕಾರ್ಯಕರ್ತರು ಪರಿಸ್ಥಿತಿಯನ್ನು ಅರಿತು ನಡೆದರೆ, ಇನ್ನೊಂದಷ್ಟು ಕಾರ್ಯಕರ್ತರು ಭದ್ರತಾ ಸಿಬ್ಬಂದಿಗಳ ಜೊತೆಗೆ ಜಗಳಕ್ಕೇ ಬೀಳುತ್ತಿದ್ದರು. ಇವೆಲ್ಲವನ್ನೂ ವಾಜಪೇಯಿಯವರೂ ಗಮನಿಸುತ್ತಿದ್ದರು ಮತ್ತು ಇಂತಹ ಪರಿಸ್ಥಿತಿಯನ್ನು ಅತ್ಯಂತ ಪ್ರಭುದ್ಧವಾಗಿ ನಿಭಾಯಿಸುತ್ತಿದ್ದರು.

ಹೀಗಿರುವಾಗ ವಾಜಪೇಯಿಯವರು ಒಮ್ಮೆ ಕಾರ್ಯಕ್ರಮದ ನಿಮಿತ್ತ ಬೆಂಗಳೂರಿಗೆ ಬಂದಿದ್ದರು. ಎಂದಿನಂತೆ ಅವರು ಬೆಂಗಳೂರಿನ ಕುಮಾರ ಕೃಪ ಅತಿಥಿ ಗೃಹದಲ್ಲೇ ಉಳಿದಿದ್ದರು. ವಾಜಪೇಯಿರವರು ಬಂದಿರುವುದು ತಿಳಿದು ಪಕ್ಷದ ಒಬ್ಬ ಹಿರಿಯ ಕಾರ್ಯಕರ್ತೆ ಅವರನ್ನು ಭೇಟಿ ಮಾಡಲು ಬಂದರು. ಆ ಸಂದರ್ಭದಲ್ಲಿ ವಾಜಪೇಯಿಯವರು ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದರು. ಮಹಿಳಾ ಕಾರ್ಯಕರ್ತೆಯೊಬ್ಬರನ್ನು ಭದ್ರತಾ ಸಿಬ್ಬಂದಿಗಳು ತಡೆದು ನಿಲ್ಲಿಸಿ ತಪಾಸಣೆ ಮಾಡಿ ಅನೇಕ ಪ್ರಶ್ನೆ ಕೇಳಿದರು. ಭದ್ರತಾ ಪಡೆಯ ಸಿಬ್ಬಂದಿಗಳು ಅಟಲ್‌ಜೀಯವರನ್ನು ನೋಡಲು ಬಿಡದ ಕಾರಣ ಕಾರ್ಯಕರ್ತೆ ಜಗಳಕ್ಕೆ ಬಿದ್ದರು. ಇದನ್ನು ಗಮನಿಸಿದ ವಾಜಪೇಯಿಯವರು ಅವರನ್ನು ಒಳಗೆ ಬಿಡಲು ಹೇಳಿ ಅವರೊಂದಿಗೆ ಮಾತನಾಡಿದರು. ಕಾರ್ಯಕರ್ತೆ ಭದ್ರತಾ ಸಿಬ್ಬಂದಿಗಳ ಬಗ್ಗೆ ದೂರುತ್ತಾ ತಮ್ಮ ಅಸಮಧಾನ ಹೇಳಿಕೊಂಡರು.

ಆಗ ವಾಜಪೇಯಿಯವರು ಅವರನ್ನು ಪಕ್ಕದಲ್ಲಿ ಕೂರಿಸಿಕೊಂಡು ಅತ್ಯಂತ ಸಮಾಧಾನದಿಂದ ಪರಿಸ್ಥಿತಿಯನ್ನು ವಿವರಿಸಿದರು. ನೋಡಿ ಇದು ಸರ್ಕಾರ ಕೊಟ್ಟಿರುವುದು ನನ್ನ ಭದ್ರತೆಗೆ, ನಾಳೆ ನನ್ನ ಭದ್ರತೆಯಲ್ಲಿ ಏನೇ ವ್ಯತ್ಯಯ, ಲೋಪಗಳಾದರೂ ಅದಕ್ಕೆ ಅವರೇ ಉತ್ತರ ಕೊಡಬೇಕು. ಹಾಗಾಗಿ ಅವರಿಗೆ ಸಂಪೂರ್ಣ ಸಹಕಾರ ಕೊಡಬೇಕಾಗಿರುವುದು ನಮ್ಮ ಕರ್ತವ್ಯ. ಆ ಕಾರಣಕ್ಕೆ ಸಹಕರಿಸಲೇಬೇಕು. ಅವರು ನಮ್ಮ ಶತ್ರುಗಳಲ್ಲ, ನಮ್ಮ ರಕ್ಷಣೆಗೆ ಇರುವವರು ಎಂದು ಸಮಜಾಯಿಷಿ ನೀಡಿ, ಭದ್ರತಾ ಸಿಬ್ಬಂದಿಗಳನ್ನೂ ಬಿಟ್ಟುಕೊಡದೇ, ಇವರಿಗೂ ನೋವಾಗದಂತೆ ಪರಿಸ್ಥಿತಿಯನ್ನು ನಿಭಾಯಿಸಿದರು.

ವಾಜಪೇಯಿವರಿಗೆ ಭದ್ರತಾ ಸಿಬ್ಬಂದಿಗಳ ಬಗ್ಗೆ ವಿಶೇಷ ಕಾಳಜಿ ಇತ್ತು. ಎಲ್ಲೇ ಹೋದರೂ ಅವರ ಊಟೋಪಚಾರ, ವಿಶ್ರಾಂತಿ, ವಸತಿ ಬಗ್ಗೆ ಅವರು ವಿಚಾರಿಸುತ್ತಿದ್ದರು. ತಮ್ಮ ಭದ್ರತಾ ಸಿಬ್ಬಂದಿಗಳು ಊಟ ಮಾಡಿದ ಮೇಲೆ ಅವರು ಊಟ ಮಾಡುತ್ತಿದ್ದರು. ಹೀಗೆ ವಾಜಪೇಯಿಯವರು ಕಾರ್ಯಕರ್ತರು ಪಕ್ಷದ ಚಟುವಟಿಕೆ ಮತ್ತು ಭದ್ರತಾ ವ್ಯವಸ್ಥೆಯ ಒತ್ತಡವೆಲ್ಲವನ್ನೂ ಅತ್ಯಂತ ಚಾಕಚಕ್ಯತೆಯಿಂದ ನಿಭಾಯಿಸುತ್ತಿದ್ದರು.



# ಮೋದಿ ನಾಯಕತ್ವಕ್ಕೆ ಮತ್ತೊಮ್ಮೆ ಮನ್ನಣೆ

## ಸಮೀಕ್ಷೆಗಳ ಬುಡಮೇಲು ಮಾಡಿದ ಫಲಿತಾಂಶ



**ಬಿದರೆ ಪ್ರಕಾಶ್**
ಸಂಪಾದಕರು, ಕಮಲಪಥ

### ಚಾರಿತ್ರಿಕ ಫಲಿತಾಂಶ

ಇದೊಂದು ಚಾರಿತ್ರಿಕ ಮತ್ತು ಅಷ್ಟೇ ಅಭೂತಪೂರ್ವ ಫಲಿತಾಂಶ. ಈ ಚುನಾವಣೆಯಲ್ಲಿ ಜಾತಿ ಆಧಾರದಲ್ಲಿ ದೇಶವನ್ನೊಡೆವ ಪ್ರಯತ್ನಗಳಾದವು. ಆದರೆ ತನಗೆ ನಾರೀಶಕ್ತಿ, ಯುವಶಕ್ತಿ, ರೈತರು ಹಾಗೂ ಬಡವರ್ಗಗಳು ಮಾತ್ರ ನಾಲ್ಕು ಪ್ರಧಾನ ಜಾತಿಗಳಾಗಿವೆ ಎಂದರು. ಇದು ಸಂಪನ್ನ ಭಾರತ ನಿರ್ಮಾಣ ಕರೆಗೆ ಲಭಿಸಿದ ಜಯ. ಅವಕಾಶ ವಂಚಿತರಿಗೆ ಪ್ರಾಧಾನ್ಯತೆ ನೀಡುವ ಚಿಂತನೆಗೆ ಜಯ ಸಂದಿದೆ. ದೇಶದ ಅಭಿವೃದ್ಧಿಗಾಗಿ ರಾಜ್ಯಗಳು ಅಭಿವೃದ್ಧಿಯಾಗಬೇಕೆಂಬ ಚಿಂತನೆ ಜಯಿಸಿದೆ. ಪ್ರಾಮಾಣಿಕತೆ, ಪಾರದರ್ಶಿತ್ವ, ಉತ್ತಮ ಆಡಳಿತ ನೀತಿಗೆ ವಿಜಯಮಾಲೆ ಲಭಿಸಿದೆ ಎಂದರು. ಕಡು ಬಡ ವ್ಯಕ್ತಿ ಕೂಡ ತಾನು ಚುನಾವಣೆ ಗೆದ್ದೆ ಎಂಬ ಸಂತಸದಿಂದ ಬೀಗುತ್ತಿದ್ದಾರೆ. ಪ್ರತಿಯೋರ್ವ ಅವಕಾಶ ವಂಚಿತರಲ್ಲೂ ಇದೇ ಹರ್ಷದ ಚಿಂತನೆ ಗಟ್ಟಿಯಾಗಿದೆ. ನಾವು ಚುನಾವಣೆಯನ್ನು ಗೆದ್ದೇ ಬಿಟ್ಟೆವೆಂದು ಪ್ರತಿಯೋರ್ವ ರೈತಬಂಧು ಎದೆತಟ್ಟಿ ಹೇಳುತ್ತಿದ್ದಾರೆ. ಚುನಾವಣಾ ವಿಜಯ ನಮಗಾಗಿದೆ ಎಂಬುದು ಬುಡಕಟ್ಟು ಸಮುದಾಯದ ಪ್ರತಿಯೋರ್ವ ಸೋದರ-ಸೋದರಿಯರ ಸಂಭ್ರಮ. ಇಂದಿನ ಅಭೂತಪೂರ್ವ ವಿಜಯಕ್ಕೆ ತನ್ನ ಚೊಚ್ಚಲ ಮತದಾನ ಕಾರಣವೆಂದು ಪ್ರಥಮವಾಗಿ ಮತ ಚಲಾಯಿಸಿರುವ ಪ್ರತಿ ಯುವಶಕ್ತಿ ಸಂತಸ ವ್ಯಕ್ತಪಡಿಸುತ್ತಿದ್ದಾರೆ. ಭಾರತದ ಜನರು ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ರಾಜಕೀಯದೊಂದಿಗೆ ದೃಢವಾಗಿ ಇದ್ದಾರೆಂಬುದನ್ನು ಸೂಚಿಸುತ್ತದೆ.

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

## 90 ಛತ್ತೀಸ್‌ಘಡ್

| | | |
|---|---|---|
| ಬಿಜೆಪಿ | ಭಾರತೀಯ ಜನತಾ ಪಾರ್ಟಿ | 54 |
| ಐಎನ್‌ಸಿ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 35 |
| ಜಿಜಿಪಿ | ಗೊಂಡವನ ಗಣತಂತ್ರ ಪಾರ್ಟಿ | 01 |

## 230 ಮಧ್ಯಪ್ರದೇಶ

| | | |
|---|---|---|
| ಬಿಜೆಪಿ | ಭಾರತೀಯ ಜನತಾ ಪಾರ್ಟಿ | 163 |
| ಐಎನ್‌ಸಿ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 66 |
| ಬಿಎಪಿ | ಭಾರತೀಯ ಆದಿವಾಸಿ ಪಾರ್ಟಿ | 01 |

## 199 ರಾಜಸ್ಥಾನ

| | | |
|---|---|---|
| ಬಿಜೆಪಿ | ಭಾರತೀಯ ಜನತಾ ಪಾರ್ಟಿ | 115 |
| ಐಎನ್‌ಸಿ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 69 |
| ಬಿಎಪಿ | ಭಾರತೀಯ ಆದಿವಾಸಿ ಪಾರ್ಟಿ | 03 |
| ಬಿಎಸ್‌ಪಿ | ಬಹುಜನ್ ಸಮಾಜ ಪಾರ್ಟಿ | 02 |
| ಇತರೆ | (ಪಕ್ಷೇತರ, ರಾಷ್ಟ್ರೀಯ ಲೋಕದಳ ರಾಷ್ಟ್ರೀಯ ಲೋಕತಂತ್ರ ಪಾರ್ಟಿ) | 10 |

## 119 ತೆಲಂಗಾಣ

| | | |
|---|---|---|
| ಐಎನ್‌ಸಿ | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 64 |
| ಬಿಹೆಚ್‌ಆರ್‌ಎಸ್ | ಭಾರತ ರಾಷ್ಟ್ರ ಸಮಿತಿ | 39 |
| ಬಿಜೆಪಿ | ಭಾರತೀಯ ಜನತಾ ಪಾರ್ಟಿ | 08 |
| ಇತರೆ | ಎಐಎಂಐಎಂ, ಸಿಪಿಐ | 08 |

## 40 ಮೀಜೋರಾಂ

| | | |
|---|---|---|
| ಜೆಡ್‌ಪಿಎಂ | ಜೋರಾಂ ಪೀಪಲ್ಸ್ ಮೂವ್‌ಮೆಂಟ್ | 27 |
| ಎಂಎನ್‌ಎಫ್ | ಮೀಜೋ ನ್ಯಾಷನಲ್ ಫ್ರಂಟ್ | 10 |
| ಬಿಜೆಪಿ | ಭಾರತೀಯ ಜನತಾ ಪಾರ್ಟಿ | 02 |
| ಕಾಂಗ್ರೆಸ್ | ಎಐಎಂಐಎಂ, ಸಿಪಿಐ | 01 |

**ಲೋ**ಕಸಭಾ ಚುನಾವಣೆಯ ಸೆಮಿಫೈನಲ್ ಎಂದೇ ಬಿಂಬಿಸಲಾಗಿದ್ದ ಐದು ರಾಜ್ಯಗಳ ಚುನಾವಣಾ ಫಲಿತಾಂಶ ವಿಶ್ವ ನಾಯಕ ಶ್ರೀ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಮತ್ತೊಮ್ಮೆ ಮನ್ನಣೆ ನೀಡಿದೆ. ಮಾಧ್ಯಮಗಳ ಸಮೀಕ್ಷೆಗಳನ್ನು ಬುಡಮೇಲು ಮಾಡಿದ ಈ ಫಲಿತಾಂಶ ಮೋದಿಯವರ ಕುಗ್ಗದ ಜನಪ್ರಿಯತೆಗೆ  ಹಾಗೂ ಬಿಜೆಪಿ ಕಾರ್ಯಕರ್ತರ ಕ್ಷಮತೆ, ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಈ ಫಲಿತಾಂಶ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪೂರಕವಾಗಿರಲಿದೆ ಹಾಗೂ ದೇಶದೆಲ್ಲೆಡೆ ಬಿಜೆಪಿಯ ಚಟುವಟಿಕೆಗಳಿಗೆ ವೇಗವರ್ಧಕವಾಗಲಿದೆ.

ಇಡೀ ದೇಶ ಮಾತ್ರವಲ್ಲ, ಇಡೀ ವಿಶ್ವವೇ ಈ ಚುನಾವಣೆಯನ್ನು ಎದುರು ನೋಡುತ್ತಿತ್ತು. ಅದರಲ್ಲೂ ಕಳೆದ ಕರ್ನಾಟಕ ವಿಧಾನಸಭಾ ಚುನಾವಣೆ ಫಲಿತಾಂಶದದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದ್ದ ಅಂಶವನ್ನೇ ಪ್ರಾಧಾನ್ಯ ಮಾಡಿಕೊಂಡು ಇಡೀ ದೇಶದ ಮಾಧ್ಯಮಗಳು ಮೋದಿಯವರ ಜನಪ್ರಿಯತೆ ಕಡಿಮೆಯಾಗುತ್ತಿದೆ ಎಂದು ಬಿಂಬಿಸುತ್ತಿದ್ದವು.  ಮುಂದಿನ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎಗೆ ಪರ್ಯಾಯವಾಗಿ ಕಾಂಗ್ರೆಸ್ ನೇತೃತ್ವದ ವಿರೋಧಪಕ್ಷಗಳೇ ಅಧಿಕಾರದ ಚುಕ್ಕಾಣಿ ಹಿಡಿಯಬಹುದು ಎಂಬ ವರದಿಗಳೂ ಪ್ರಕಟವಾಗಿ ಆಂತರಿಕವಾಗಿ ಬಿಜೆಪಿಯಲ್ಲೂ ಆತಂಕದ ಸ್ಥಿತಿಯನ್ನು ನಿರ್ಮಾಣ ಮಾಡಿ ಬಿಟ್ಟಿತ್ತು. ಆದರೆ ಈ ಐದು ರಾಜ್ಯಗಳ ಪೈಕಿ ಮೂರು ರಾಜ್ಯಗಳಲ್ಲಿ ಅಭೂತ ಪೂರ್ವ ಜಯಭೇರಿ ಬಾರಿಸಿದ ಬಿಜೆಪಿಯ ಸಾಧನೆ ವಿರೋಧಿಗಳ ಬಾಯಿ ಬಂದ್ ಮಾಡಿಸುವಲ್ಲಿ ಯಶಸ್ವಿಯಾಗಿದೆ. ಅಷ್ಟೇ ಅಲ್ಲ, ಗ್ಯಾರಂಟಿಗಳ ಆಮಿಷಗಳನ್ನು ನೀಡಿ ಅಧಿಕಾರ ಗಿಟ್ಟಿಸಿದ ಕರ್ನಾಟಕದ ತಂತ್ರಗಾರಿಕೆಯನ್ನೇ ಪ್ರಯೋಗಿಸಿ ಯಶದ ಕನಸು ಕಾಣುತ್ತಿದ್ದ ಕಾಂಗ್ರೆಸ್‌ಗೇ ಐದು ರಾಜ್ಯಗಳ ಜನತೆ ಆಮಿಷಗಳ

### ದೇಶದಲ್ಲಿ ಒಂದೇ ಗ್ಯಾರಂಟಿ, ಅದು ಮೋದಿ ಗ್ಯಾರಂಟಿ



ದೇಶದಲ್ಲಿ ಒಂದೇ ಒಂದು ಗ್ಯಾರಂಟಿ ಇದೆ, ಅದು ಮೋದಿಯವರ ಗ್ಯಾರಂಟಿ ಎಂಬುದನ್ನು ಈ ಚುನಾವಣೆಗಳು ಸ್ಪಷ್ಟಪಡಿಸಿವೆ. ಎನ್‌ಡಿಐಎ ಮೈತ್ರಿ ಕೂಟ ಜಾತೀಯತೆಯನ್ನು ಹರಡಲು, ಸಮಾಜವನ್ನು ವಿಭಜಿಸಲು ಮತ್ತು ತುಷ್ಟೀಕರಣದ ರಾಜಕೀಯದಲ್ಲಿ ತೊಡಗಿದೆ. ಆದರೆ ದೇಶವು ಅಭಿವೃದ್ಧಿಯನ್ನು ಆರಿಸಿಕೊಂಡಿದೆ

ಪ್ರತಿಪಕ್ಷ ಐಎನ್‌ಡಿಐಎ ಮೈತ್ರಿ ದೇಶವನ್ನು ಜಾತಿ ಆಧಾರದ ಮೇಲೆ ವಿಭಜಿಸಲು ಯತ್ನಿಸುತ್ತಿದೆ  ಆದರೆ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಗ್ಯಾರಂಟಿ ಮಾತ್ರ ಭಾರತದಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ವಿಧಾನಸಭಾ ಚುನಾವಣಾ ಫಲಿತಾಂಶಗಳು ಸಾಬೀತುಪಡಿಸಿವೆ. ವಿರೋಧ ಪಕ್ಷಗಳು ಇತರ ಹಿಂದುಳಿದ ವರ್ಗಗಳ (ಒಬಿಸಿ) ಬಗ್ಗೆ ಮಾತನಾಡಬಹುದಾದರೂ, ಮೋದಿ ಅವರು ದೇಶದ ಅತಿದೊಡ್ಡ ಒಬಿಸಿ ನಾಯಕರಾಗಿ ಉಳಿದಿದ್ದಾರೆ.

**– ಜೆಪಿ ನಡ್ಡಾ , ರಾಷ್ಟ್ರೀಯ ಬಿಜೆಪಿ ಅಧ್ಯಕ್ಷರು**

ಗ್ಯಾರಂಟಿಗಿಂತ ಮೋದಿ ಗ್ಯಾರಂಟಿಯೇ ದೇಶಕ್ಕೆ ಅತ್ಯಗತ್ಯ ಎಂಬ ಸಂದೇಶವನ್ನು ಸ್ಪಷ್ಟವಾಗಿ ಸಾರಿದ್ದಾರೆ.

ಮಧ್ಯಪ್ರದೇಶದಲ್ಲಿ ಬಿಜೆಪಿ ಅಭೂತ ಪೂರ್ವ ಗೆಲುವು ಸಾಧಿಸಿದೆ. 17 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಮುಖ್ಯಮಂತ್ರಿ ಶ್ರೀ ಶಿವರಾಜ್‌ಸಿಂಗ್ ಚೌಹಾಣ್ ರವರಿಗೆ 2018 ರ ಚುನಾವಣೆಯಲ್ಲಿ ಅಲ್ಪ ಮಟ್ಟಿನ ಹಿನ್ನಡೆಯಾಗಿತ್ತು. ಆದರೆ ಈಗ ರಾಜ್ಯದ ಜನತೆ ಮತ್ತೊಮ್ಮೆ ಮನ್ನಣೆ ನೀಡಿದ್ದಾರೆ. ಈ ಗೆಲುವಿನಲ್ಲಿ ಕಾಂಗ್ರೆಸ್‌ನ ಗ್ಯಾರಂಟಿಗಳ ತಂತ್ರಗಳಿಗೆ ಪ್ರತಿಯಾಗಿ ಬಿಜೆಪಿ ಪ್ರಯೋಗಿಸಿದ ಪಂಚತಂತ್ರ ಗ್ಯಾರಂಟಿ ಫಲ ನೀಡಿದೆ. ಕಳೆದ ಬಾರಿ ಕಾಂಗ್ರೆಸ್ ಕೈನಿಂದ ತಂತ್ರಗಾರಿಕೆಯಿಂದ ಅಧಿಕಾರ ಹಿಡಿದಿದ್ದ ಬಿಜೆಪಿಗೆ ಈ ಗೆಲುವು ಅತ್ಯಗತ್ಯವಾಗಿತ್ತು. ಮೋದಿಯವರ ನೇತೃತ್ವ, ಪಂಚತಂತ್ರದ ತಂತ್ರಗಾರಿಕೆ, ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರ ಸಾರಥ್ಯಕ್ಕೆ ಮಧ್ಯಪ್ರದೇಶದ ಜನತೆ ಆಶೀರ್ವಾದ ನೀಡಿದ್ದಾರೆ. ಶ್ರೀ ಶಿವರಾಜ್‌ಸಿಂಗ್ ಚೌಹಾಣ್‌ರವರು ಅತ್ಯಧಿಕ ಮತಗಳ ಅಂತರದಿಂದ ಜಯಗಳಿಸಿರುವುದನ್ನೂ ಇಲ್ಲಿ ಉಲ್ಲೇಖಿಸಬಹುದು. ಅತ್ಯಧಿಕ ಲೋಕಸಭಾ ಸ್ಥಾನಗಳನ್ನು ಹೊಂದಿರುವ ರಾಜ್ಯಗಳಲ್ಲಿ ಒಂದಾದ ಈ ರಾಜ್ಯದ ಪ್ರಸಕ್ತ ಫಲಿತಾಂಶ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪೂರಕವಾದ ವಾತಾವರಣ ನಿರ್ಮಿಸಲಿದೆ. 230 ಸದಸ್ಯ ಬಲದ ಮಧ್ಯಪ್ರದೇಶ ವಿಧಾನಸಭೆಯಲ್ಲಿ ಬಿಜೆಪಿ 160 ಸ್ಥಾನ (ಹಿಂದಿನ ಅವಧಿಯಲ್ಲಿ 109)ಪಡೆದರೆ , ಹಿಂದಿನ ಅವಧಿಯಲ್ಲಿ 114ಸ್ಥಾನಗಳನ್ನು ಹೊಂದಿದ್ದ ಕಾಂಗ್ರೆಸ್ ಬಲ 69ಕ್ಕೆ ತೀವ್ರವಾಗಿ ಕುಸಿದಿದೆ. ರಾಜ್ಯದಲ್ಲಿ 35ಪರಿಶಿಷ್ಟ ಜಾತಿಯವರಿಗೆ ಸೇರಿದ ಮತ್ತು 47ಪರಿಶಿಷ್ಟ ವರ್ಗದವರಿಗೆ ಮೀಸಲಾದ ಕ್ಷೇತ್ರಗಳಿದ್ದು, ದಲಿತ, ಬುಡಕಟ್ಟು, ಹಿಂದುಳಿದ ವರ್ಗಗಳ ಕ್ಷೇತ್ರಗಳಲ್ಲಿ ಬಿಜೆಪಿ ಸಂಪೂರ್ಣ ಪಾರಮ್ಯ ಸಾಧಿಸಿದೆ ಎಂಬುದು ಗಮನಾರ್ಹ.

ರಾಜಸ್ಥಾನದ ಫಲಿತಾಂಶ ಗೆಹ್ಲೋಟ್ ಆಡಳಿತ ವಿರೋಧಿ ಅಲೆಗೆ ಸ್ಪಷ್ಟ ಸಾಕ್ಷಿಯಾಗಿದೆ. ರಾಜಸ್ಥಾನದಲ್ಲಿ ಮೊದಲಿನಿಂದಲೇ ಬಿಜೆಪಿಗೆ ಪೂರಕವಾದ ವಾತಾವರಣ ಇದೆಯೆಂದು ಹೇಳಲಾಗುತ್ತಿದ್ದರೂ ಮಾಧ್ಯಮಗಳು ಈ ರಾಜ್ಯದ ಫಲಿತಾಂಶವೂ ಬಿಜೆಪಿಯ ಪರವಾಗಿರುವುದರ ಬಗ್ಗೆ ಅನುಮಾನ ವ್ಯಕ್ತ ಪಡಿಸಿದ್ದವು. ಆದರೆ ಇಲ್ಲಿಯೂ ಬಿಜೆಪಿ ಜಯಭೇರಿ ಬಾರಿಸಿದೆ. ಇಡೀ ರಾಜ್ಯದಲ್ಲಿ ಹೆಚ್ಚಿದ ಮಹಿಳಾ ದೌರ್ಜನ್ಯಗಳು, ಹಿಂದುತ್ವ ವಿರೋಧಿ ಧೋರಣೆಗಳೂ, ಕನ್ಹಯ್ಯಲಾಲ್ ಹತ್ಯೆ ಕೇಸ್‌ನಂತಹ ಸಂಗತಿಗಳ ಜೊತೆಗೆ ರಾಜಸ್ಥಾನದಲ್ಲಿ ಬಿಜೆಪಿಯನ್ನು ಚುನಾವಣೆಯಲ್ಲಿ ಗೆಲುವಿನ ದಡ ಸೇರಿಸುವಲ್ಲಿ ಯಶಸ್ವಿಯಾಗಿದೆ. 200 ಸದಸ್ಯ ಬಲದ ರಾಜಸ್ಥಾನ ವಿಧಾನಸಭೆಯಲ್ಲಿ ಬಿಜೆಪಿ ಹಿಂದಿನ ಅವಧಿಯಲ್ಲಿ 73 ಸ್ಥಾನ ಹೊಂದಿದ್ದರೆ ಈ ಬಾರಿ 113 ಸ್ಥಾನ ಗಳಿಸಿ ಅಧಿಕಾರಕ್ಕೇರಿದೆ. ಕಾಂಗ್ರೆಸ್ ಕಳೆದ ಅವಧಿಯಲ್ಲಿ 100 ಸ್ಥಾನ ಗಳಿಸಿ ಅಧಿಕಾರಕ್ಕೇರಿದ್ದರೆ ಈ ಬಾರಿ 72 ಸ್ಥಾನಗಳಿಗೆ ಕುಸಿದಿದೆ.

ರಾಜಕೀಯ ವಿಶ್ಲೇಷಕರಾಗಲೀ, ಮಾಧ್ಯಮಗಳಾಗಲೀ ಯಾವುದೇ ಸಂದರ್ಭದಲ್ಲಿ ಛತ್ತೀಸ್‌ಘಢ್‌ನಲ್ಲಿ ಬಿಜೆಪಿಯ ಗೆಲುವನ್ನು ನಿರೀಕ್ಷಿಸಿರಲಿಲ್ಲ. ಆದರೆ ಛತ್ತೀಸ್‌ಗಢದಲ್ಲಿನ 90 ವಿಧಾನಸಭೆ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 54ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಇದರೊಂದಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ನೇತೃತ್ವದ ಸರ್ಕಾರವನ್ನು ಜನ ತಿರಸ್ಕರಿಸಿದೆ. ಆ ಮೂಲಕ ವಿವಿಧ ಮತಗಟ್ಟೆ ಸಮೀಕ್ಷೆಗಳು ಬುಡಮೇಲಾಗಿದೆ. ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ಹತ್ತಿಕ್ಕುವ ಬಗ್ಗೆ ಬಿಜೆಪಿ ನೀಡಿದ ಭರವಸೆ ಹಾಗೂ ಬಿಜೆಪಿ ಮೇಲಿನ ನಂಬಿಕೆ ಬಿಜೆಪಿಯ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದೆ. ನಕ್ಸಲ್ ಪೀಡಿತ ಬುಡಕಟ್ಟು ಬಸ್ತಾರ್‌ನಲ್ಲಿ ಬಿಜೆಪಿ ಒಟ್ಟು 12 ಸ್ಥಾನಗಳ ಪೈಕಿ ಒಂಬತ್ತು ಸ್ಥಾನಗಳಲ್ಲಿ ಜಯಿಸಿ ಪ್ರಬಲ ಪುನರಾಗಮನ ಮಾಡಿದೆ. ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್35ಕ್ಷೇತ್ರಗಳಲ್ಲಿ ಮಾತ್ರ ಜಯ ತನ್ನದಾಗಿಸಿಕೊಂಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಒಬಿಸಿ ಸಮುದಾಯಕ್ಕೆ ಹೆಚ್ಚಿನ ಒತ್ತು ನೀಡಿ, ಜಲ್ ಜಂಗಲ್ ಜಮೀನ್ ಬುಡಕಟ್ಟು ಸಮಸ್ಯೆಗಳನ್ನು ನಿರ್ಲಕ್ಷಿಸಿತ್ತು. ಜತೆಗೆ ಬಸ್ತಾರ್ ಮತ್ತು ಸುರ್ಗುಜಾ ಬುಡಕಟ್ಟು ಪ್ರದೇಶದಲ್ಲಿ ಉದ್ಭವಿಸಿದ ಮೀಸಲಾತಿ ಸಮಸ್ಯೆಯೂ ಕಾಂಗ್ರೆಸ್ ಸೋಲಿಗೆ ಪ್ರಮುಖ ಕಾರಣವಾಗಿದೆ.

ತೆಲಂಗಾಣದಲ್ಲಿಯೂ ಬಿಜೆಪಿ ಸಾಧನೆ ಅತ್ಯಂತ ತೃಪ್ತಿಕರವಾಗಿದೆ. ನಿರೀಕ್ಷೆಗೆ ತಕ್ಕಂತ ಸ್ಥಾನಗಳು ಲಭ್ಯವಾಗದಿದ್ದರೂ ಗಳಿಸಿದ ಸ್ಥಾನಗಳನ್ನು 3 ರಿಂದ 9 ಕ್ಕೆ ಹೆಚ್ಚಿಸಿಕೊಂಡಿರುವುದರ ಜೊತೆಗೆ ಮತಗಳಿಕೆಯ ಪ್ರಮಾಣವೂ ಹೆಚ್ಚಿದೆ. ಕೆಆರ್‌ಎಸ್ ಪಕ್ಷದ ಚಂದ್ರಶೇಖರರಾವ್ ಪಾಯಗಾರಿಕೆ ಆಡಳಿತದ ವಿರುದ್ಧ ಸಿಡಿದೆದ್ದ ಜನತೆಯ ಆಕ್ರೋಶದ ಲಾಭವನ್ನು ಕಾಂಗ್ರೆಸ್ ಪಡೆಯುವಲ್ಲಿ ಕೆಲಸ ಮಾಡಿದೆ. ಕಾಂಗ್ರೆಸ್ ಮೇಲಿನ ಪ್ರೀತಿಗಿಂತ ಬಿಆರ್‌ಎಸ್ ಪಕ್ಷದ ದುರಾಡಳಿತವೇ ಪ್ರಸಕ್ತ ಫಲಿತಾಂಶಕ್ಕೆ ಕಾರಣ ಎಂದು ಸ್ಪಷ್ಟವಾಗಿ ಹೇಳಬಹುದು.

ಐಎನ್‌ಡಿಐಎ ಮೈತ್ರಿಕೂಟ ರಚಿಸಿಕೊಂಡು, ಬಿಜೆಪಿ ಸೋಲಿಸಲು ಹೊರಟಿದ್ದ ಪಕ್ಷಗಳಿಗೆ ಮತದಾರ ಭಾರಿ ಏಟು ನೀಡಿದ್ದಾನೆ. ಲೋಕಸಭೆ ಚುನಾವಣೆಗೂ ಆರು ತಿಂಗಳು ಮೊದಲೇ ನಡೆದಿರುವ ಈ ರಾಜ್ಯಗಳ ಚುನಾವಣೆಯ ಪರಿಣಾಮ ಲೋಕಸಭೆ ಚುನಾವಣೆಯ ಮೇಲಾಗುತ್ತದೆ ಎಂಬ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಈ ಫಲಿತಾಂಶ ಬಿಜೆಪಿಯಲ್ಲಿ ಹುಮ್ಮಸ್ಸು ಇಮ್ಮಡಿಗೊಳಿಸಲಿದೆ.

### ನೇತೃತ್ವಕ್ಕೆ ಸಂದ ಜಯ



ಪಂಚರಾಜ್ಯಗಳ ಚುನಾವಣೆಯಲ್ಲಿ ಮೂರರಲ್ಲಿ ಜನತೆಯ ಆಶೀರ್ವಾದ ನಮಗೆ ಸಿಕ್ಕಿದೆ. ಮೋದಿಯವರ ನೇತೃತ್ವವು ಈ ಗೆಲುವಿಗೆ ಕಾರಣವಾಗಿದೆ. ಮೋದಿಯವರು ನೀಡಿದ ಜನಪರ ಕಾರ್ಯಕ್ರಮ ಮೆಚ್ಚಿ ಮತದಾರರು ಮನ್ನಣೆ ನೀಡಿದ್ದಾರೆ. ಇದರಿಂದ ಪಕ್ಷದ ಕಾರ್ಯಕರ್ತರ ಆತ್ಮವಿಶ್ವಾಸ ಇಮ್ಮಡಿಯಾಗಿದೆ. ದೇಶದ ಜನತೆಗೆ ಧನ್ಯವಾದಗಳು.

**– ಪ್ರಹ್ಲಾದ ಜೋಶಿ, ಕೇಂದ್ರ ಸಚಿವರು**



## ಎಲ್ಲಾ ಸಮಸ್ಯೆಗಳಿಗೆ ಹಿಂದೂಗಳ ಒಗ್ಗಟ್ಟೊಂದೇ ಸಮಾಧಾನ ಅನ್ನೋದಕ್ಕೆ, ಇದೆ ಸ್ಪಷ್ಟ ನಿದರ್ಶನ....

ಇಲ್ಲಿ ಹಿರಿಯರೊಬ್ಬರು ಫೋಟೋವೊಂದನ್ನು ಕೈಯಲ್ಲಿ ಹಿಡಿದುಕೊಂಡಿರೋದನ್ನು ನೀವು ನೋಡಬಹುದು. ಫೋಟೋದಲ್ಲಿರುವ ಹುಡುಗ ಛತ್ತೀಸ್‌ಗಢದ ಬಿರಾನ್‌ಪುರ ಊರಿನ ಭುವನೇಶ್ವರ್ ಸಾಹು. ಈತ ಕೆಲ ತಿಂಗಳ ಹಿಂದೆ ಮತಾಂಧ ಜಿಹಾದಿಗಳಿಂದ ಹತ್ಯೆಯಾಗುತ್ತಾನೆ. ಅಲ್ಲಿನ ಸ್ಥಳೀಯ ಕಾಂಗ್ರೆಸ್ ಸರ್ಕಾರ ಆ ಹುಡುಗನ ಕುಟುಂಬಕ್ಕೆ ಸಹಾಯ ಮಾಡುವ ಬದಲು ಆರೋಪಿಗಳನ್ನು ರಕ್ಷಿಸಲು ಪ್ರಯತ್ನಿಸಿತು. ಈ ಘಟನೆ ರಾಜ್ಯದಲ್ಲಷ್ಟೇ ಅಲ್ಲದೇ ದೇಶವ್ಯಾಪಿ ಭಾರಿ ಸುದ್ದಿ ಮಾಡಿತ್ತು, ರಾಜ್ಯಸರ್ಕಾರದ ವಿರುದ್ಧ ಹಿಂದೂ ಕಾರ್ಯಕರ್ತರು ಬೀದೀಗಿಳಿದು ತೀವ್ರ ಹೋರಾಟ ಹಮ್ಮಿಕೊಂಡಿದ್ದರು. ಇಲ್ಲಿ ಫೋಟೋ ಹಿಡಿದುಕೊಂಡಿರುವ ಸಾಹು ಅವರ ತಂದೆಯನ್ನು, ಆ ಊರಿನ ಜನರನ್ನು ಸಾಂತ್ವನ ಭೇಟಿ ಮಾಡಿದ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ಅವರು ವಿಧಾನ ಸಭಾ ಚುನಾವಣೆಗೆ ನಿಮ್ಮನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡುವುದಾಗಿ ಮಾತು ಕೊಟ್ಟಿದ್ದರು. ಬಿಜೆಪಿ ಕೊಟ್ಟ ಮಾತಿನಂತೆ ದಿ. ಭುವನೇಶ್ವರ್‌ನ ತಂದೆ ಶ್ರೀ ಈಶ್ವರ್ ಸಾಹುಗೆ ಸಾಜಾ ಕ್ಷೇತ್ರದಿಂದ ವಿಧಾನಸಭಾ ಚುನಾವಣೆಗೆ ಬಿಜೆಪಿ ಟಿಕೆಟ್ ನೀಡಿತು. ಇಂದು ಅವರು ಕಾಂಗ್ರೆಸ್‌ನ ಸಚಿವ ಹಾಗೂ ಸಾಜಾ ವಿಧಾನ ಸಭಾ ಕ್ಷೇತ್ರದಲ್ಲಿ ಸತತ 7 ಬಾರಿ ಜಯಗಳಿಸಿದ್ದ ಶ್ರೀ ರವೀಂದ್ರ ಚೌಬೆ ಅವರನ್ನು 5,013 ಸಾವಿರ ಮತಗಳ ಅಂತರದಿಂದ ಸೋಲಿಸುವ ಮೂಲಕ ಇತಿಹಾಸ ಬರೆದಿದ್ದಾರೆ.

### ಬಿಜೆಪಿ ಅಲೆ



ದೇಶದಲ್ಲಿ ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಮಂತ್ರಿ ಆಗಬೇಕೆಂಬ ಆಸೆ ಜನತೆಯಲ್ಲಿದೆ ಎಂಬುದು ಈ ಚುನಾವಣಾ ಫಲಿತಾಂಶದಿಂದ ಗೊತ್ತಾಗಿದೆ. ಇದು ಒಂದು ರೀತಿಯ ಸೆಮಿಫೈನಲ್ ಎಂದು ವಿಶ್ಲೇಷಿಸಲಾಗುತ್ತಿತ್ತು. ಸುನಾಮಿ ರೀತಿಯಲ್ಲಿ ಬಿಜೆಪಿ ಅಲೆ ಎದ್ದಿದೆ. ದೇಶದ ಜನರು ದೇಶರಕ್ಷಣೆಯ ಗ್ಯಾರಂಟಿ ಬಯಸುತ್ತಿದ್ದಾರೆಯೇ ಹೊರತು ಅಧಿಕಾರ ಕಬಳಿಸುವ ಆಮಿಷದ ಗ್ಯಾರಂಟಿಗಳನ್ನಲ್ಲ ಎಂಬುದು ಸ್ಪಷ್ಟವಾಗಿದೆ.

**- ಬಿ.ವೈ.ವಿಜಯೇಂದ್ರ,**
ಬಿಜೆಪಿ ರಾಜ್ಯಾಧ್ಯಕ್ಷರು

## ವಿಶ್ವ ಮೆಚ್ಚಿದ ನಾಯಕ ಮೋದಿ




**ಜಾ**ಗತಿಕ ನಾಯಕರ ಪಟ್ಟಿಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಶೇ. 7, ರೇಟಿಂಗ್‌ನೊಂದಿಗೆ ಮತ್ತೆ ಅಗ್ರ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಪ್ರಧಾನಿ ಶ್ರೀ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರನ್ನು ಹಿಂದಿಕ್ಕಿ ಜಗತ್ತಿನ ಮೆಚ್ಚಿನ ನಾಯಕರೆನಿಸಿಕೊಂಡಿದ್ದಾರೆ. ಮಾರ್ನಿಂಗ್ ಕನ್ಸಲ್ಟ್ ನಡೆಸಿದ ಸಮೀಕ್ಷೆಯ ಪ್ರಕಾರ, ಪ್ರಧಾನಿ ಶ್ರೀ ಮೋದಿ 5.76 ನೊಂದಿಗೆ ವಿಶ್ವ ನಾಯಕರಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಅಮೆರಿಕ ಮೂಲದ ಕನ್ಸನ್ಸಿ ಸಂಸ್ಥೆಯ ಗೋಬಲ್ ಲೀಡರ್ ಅಪ್ರೂವಲ್ ರೇಟಿಂಗ್ ಟ್ರ್ಯಾಕರ್ ವರದಿ ಪ್ರಕಾರ ಭಾರತದಲ್ಲಿ ಶೇ.76ರಷ್ಟು ಜನರು ಮೋದಿಯವರ ನಾಯಕತ್ವ ಅನುಮೋದಿ ಸಿದ್ದಾರೆ. ಪ್ರಧಾನಿ ಶ್ರೀ ಮೋದಿ ನಂತರ ಶೇ. 66 ರೇಟಿಂಗ್ ಗಳಿಸಿರುವ ಮೆಕ್ಸಿಕೋ ಅಧ್ಯಕ್ಷ ಆಂಡ್ರೆಸ್ ಮ್ಯಾನುಯೆಲ್ ಒಬ್ರಡಾರ್ ಜಗತ್ತಿನ 2ನೇ ನಾಯಕರಾಗಿ ಹೊರಹೊಮ್ಮಿದ್ದಾರೆ. ಆದರೆ, ಮೊದಲ ಹಾಗೂ ಎರಡನೇ ಸ್ಥಾನದ ನಡುವೆ ಭಾರಿ ಅಂತರವಿದೆ ಎನ್ನುವುದು ಗಮನಾರ್ಹ. ಇನ್ನು ಶೇ. 58 ರೇಟಿಂಗ್‌ನೊಂದಿಗೆ ಮೂರನೇ ಸ್ಥಾನ ಸಿಟ್ವರ್ಲೆಂಡ್ ಅಧ್ಯಕ್ಷ ಅಲೈನ್ ಬರ್ಸೆಟ್ ಅವರಿಗೆ ಲಭ್ಯವಾಗಿದೆ.

**ಜಗತ್ತಿನ ಇತರ ನಾಯಕರಿಗೆ ಶೇ.40ಕ್ಕಿಂತ ಕಡಿಮೆ ರೇಟಿಂಗ್:** ಅಮೆರಿಕ ಅಧ್ಯಕ್ಷ ಜೋ ಬೈಡನ್ ನಾಯಕತ್ವಕ್ಕೆ ಶೇ.37 ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಪರ ಶೇ.31, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಪರವಾಗಿ ಶೇ.25 ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ನಾಯಕತ್ವಕ್ಕೆ ಕೇವಲ ಶೇ.24 ರಷ್ಟು ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



## ಚರ್ಚೆಗೊಂದು ಸಾಲು...

### ಸಂಘಟನೆಗಳು ಸಂಖ್ಯಾತ್ಮಕವಾಗಿ ಬೆಳೆಯಬೇಕು, ಸಂಘಟನಾತ್ಮಕವಾಗಿ ಸಶಕ್ತವಾಗಬೇಕು



# ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಪ್ರವಾಸ




ಅಶ್ವಿನಿ ಶಂಕರ್
ಸದಸ್ಯರು
ರಾಜ್ಯ ಪ್ರಕಾಶನ ಪ್ರಕೋಷ್ಠ


ವಿಶ್ವದ ಅತಿದೊಡ್ಡ ವಿಶ್ವಮಾನ್ಯವಾದಂತಹ ರಾಜಕೀಯ ಪಕ್ಷವಾದ ಬಿಜೆಪಿಯ ರಾಜ್ಯಾಧ್ಯಕ್ಷರಾಗಿ ನಿಯುಕ್ತಿಯಾಗಿರುವ ನೆಚ್ಚಿನ ಸನ್ಮಾನ್ಯ ಶ್ರೀ ಬಿ.ವೈ. ವಿಜಯೇಂದ್ರರವರು ಚುಕ್ಕಾಣಿ ಹಿಡಿದ ತಕ್ಷಣವೇ ಪಕ್ಷದ ಸಂಘಟನೆಯನ್ನು ಚುರುಕುಗೊಳಿಸಿ, ಪಕ್ಷದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹುರಿದುಂಬಿಸುವ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಇದರ ಸಲುವಾಗಿ ರಾಜ್ಯಾಧ್ಯಕ್ಷರು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಮಠಾಧಿಪತಿಗಳು, ಹಿರಿಯ ಸಾಹಿತಿಗಳು, ಚಿಂತಕರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರು ಹಾಗೂ ಪಕ್ಷದ ಎಲ್ಲ ಹಿರಿಯ ನಾಯಕರ ನಿವಾಸಕ್ಕೆ ಭೇಟಿ ನೀಡಿ ಅವರೊಂದಿಗೆ ಚರ್ಚಿಸಿ ಮುಂದಿನ ಕಾರ್ಯಚಟುವಟಿಕೆಗಳು, ಮುಂಬರುವ ಲೋಕಸಭಾ ಚುನಾವಣೆಯ ತಯಾರಿ ಕುರಿತಾಗಿ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಕಾರ್ಯಕರ್ತರೊಂದಿಗೆ ಸಜ್ಜಾಗಿದ್ದಾರೆ.



**ತುಮಕೂರು :** ಬಿಜೆಪಿ ಕರ್ನಾಟಕದ ನೂತನ ಸಾರಥ್ಯ ವಹಿಸಿಕೊಂಡ ಮಾರನೆಯ ದಿನವೇ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ತಮ್ಮ ಮನೆದೇವರು ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ದೇವಾಲಯಕ್ಕೆ ಕುಟುಂಬ ಸಮೇತ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಇದಕ್ಕೂ ಮುನ್ನ ಬೆಳಿಗ್ಗೆ ತುಮಕೂರಿನ ಶ್ರೀ ಸಿದ್ದಗಂಗಾ ಮಠಕ್ಕೆ ತೆರಳಿ ಲಿಂಗೈಕ್ಯರಾದ ಡಾ. ಶಿವಕುಮಾರ ಸ್ವಾಮೀಜಿಯವರ ಗದ್ದುಗೆ ದರ್ಶನ ಪಡೆದು ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿಯವರ ಆಶೀರ್ವಾದ ಪಡೆದರು. ತಮ್ಮ ಮನೆದೇವರಾದ ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯವರ ಆಶೀರ್ವಾದ ಪಡೆದರು. ಇದೇ ವೇಳೆ ರಾಜ್ಯಾಧ್ಯಕ್ಷರ ಅಭಿಮಾನಿಗಳು 100 ತೆಂಗಿನಕಾಯಿಗಳನ್ನು ಒಡೆದು ಅವರ ಹರಕೆ ನೆರವೇರಿಸಿ ದೇವರಿಗೆ ತಮ್ಮ ಸೇವೆಯನ್ನು ಸಲ್ಲಿಸಿದರು.

**ಕೋಲಾರ :** ನವೆಂಬರ್ 14 ರಂದು ರಾಜ್ಯಾಧ್ಯಕ್ಷರು ತಮ್ಮ ನೂತನ ಜವಾಬ್ದಾರಿ ಸ್ವೀಕರಿಸಿದ ನಂತರ ಮೊದಲನೆಯ ಬಾರಿಗೆ ಮುಳಬಾಗಿಲು ತಾಲೂಕಿನ ಪುರಾಣ ಪ್ರಸಿದ್ಧ ಗಣಪತಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಮಾಧ್ಯಮದೊಂದಿಗೆ ಮಾತನಾಡುತ್ತಾ ಪಕ್ಷದ ಎಲ್ಲಾ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದಾಗಿ ತಿಳಿಸಿದರು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ಸೇರಿದಂತೆ ಆಂಧ್ರದಲ್ಲಿ ಹೆಚ್ಚಿನ ಸಂಸದರನ್ನು ಗೆಲ್ಲಿಸುವ ಮೂಲಕ ಪ್ರಧಾನಿ ಶ್ರೀ ಮೋದಿಯವರ ಕೈ ಬಲಪಡಿಸಬೇಕಾಗಿದೆ, ದೇಶಕ್ಕೆ ಮೋದಿಯವರ ನಾಯಕತ್ವದ ಅಗತ್ಯವಿದೆ ಎಂದು ತಿಳಿಸಿದರು. ಭಾರತ ಇಂದು ವಿಶ್ವಮಾನ್ಯವಾಗಲು ಪ್ರಧಾನಿ ಶ್ರೀ ಮೋದಿಯವರ ಕಾರ್ಯಗಳೇ ಕಾರಣವಾಗಿದ್ದು, ಭಾರತ ಮತ್ತಷ್ಟು ಅಭಿವೃದ್ಧಿ ಪಥದತ್ತ ಸಾಗಲು ಅವರ ನಾಯಕತ್ವದ ಅವಶ್ಯಕತೆಯಿದೆ ಎಂದು ತಿಳಿಸಿದರು.

ನಂತರ ಮಲ್ಲಸಂದ್ರ, ಬಿಜೆಪಿ ಬೂತ್ ಅಧ್ಯಕ್ಷರಾದ ಶ್ರೀ ಮೂರ್ತಿರವರ ನಿವಾಸಕ್ಕೆ ತೆರಳಿ ಕಾರ್ಯಕರ್ತರು ವಿಧಾನಸಭೆ ಸೋಲಿಗೆ ಧೃಡಿಗೆಡುವ ಅಗತ್ಯವಿಲ್ಲ. ಲೋಕಸಭಾ ಚುನಾವಣೆಯಲ್ಲಿ ನಾವು ನಮ್ಮ ಶಕ್ತಿ ತೋರಿಸಬೇಕೆಂದು ಕಾರ್ಯಕರ್ತರಿಗೆ ಚುನಾವಣೆಗೆ ಸನ್ನದ್ಧರಾಗಲು ಹುರಿದುಂಬಿಸಿದರು. ಈ ಸಂದರ್ಭದಲ್ಲಿ ಕೋಲಾರದ ಸಂಸದರಾದ ಶ್ರೀ ಮುನಿಸ್ವಾಮಿ, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಪಿ.ಸಿ. ಮೋಹನ್, ವಿಧಾನ ಪರಿಷತ್ ಸದಸ್ಯರಾದ ಡಾ. ವೈ.ಎ. ನಾರಾಯಣಸ್ವಾಮಿ, ಮಾಜಿ ಶಾಸಕರಾದ ಶ್ರೀ ವರ್ತೂರು ಪ್ರಕಾಶ್, ಮುಖಂಡರಾದ ಶ್ರೀ ಡಿ.ಎಸ್. ವೀರಯ್ಯ, ಶ್ರೀ ಬಿ.ಪಿ. ವೆಂಕಟಮುನಿಯಪ್ಪ, ಶ್ರೀ ತಮ್ಮೇಗೌಡ, ಶ್ರೀ ವೈ. ಸಂಪಂಗಿ, ಶ್ರೀ ಚಿಂತಾಮಣಿ ಗೋಪಿ, ಶ್ರೀ ಸೀಕಲ್ ರಾಮಚಂದ್ರೇಗೌಡ, ಶ್ರೀ ಶಿಡ್ಲಘಟ್ಟ ರಾಜಣ್ಣ, ಶ್ರೀ ಸೀಗೇಹಳ್ಳಿ ಸುಂದರ್, ದಿಶಾ ಸಮಿತಿಯ ಸದಸ್ಯರಾದ ಶ್ರೀ ಅಪ್ಪಿ ನಾರಾಯಣಸ್ವಾಮಿ, ಶ್ರೀ ಪಿ.ಎಸ್. ಸತ್ಯನಾರಾಯಣರಾಜ್, ಶ್ರೀ ವಿನಯ್‌ಕುಮಾರ್, ಶ್ರೀ ಎಸ್.ಬಿ. ಮುನಿವೆಂಕಟಪ್ಪ, ಶ್ರೀ ಓಂಶಕ್ತಿ ಚಲಪತಿ, ಶ್ರೀ ತಿಮ್ಮರಾಯಪ್ಪ, ಗಾಂಧಿನಗರ ವೆಂಕಟೇಶ್, ಶ್ರೀ ಓಹಿಲೇಶ್ ಹಾಗೂ ಶ್ರೀ ಬಿ.ವಿ. ಮಹೇಶ್ ಮತ್ತು ಇತರರು ಉಪಸ್ಥಿತರಿದ್ದರು.



**ಬೆಂಗಳೂರು :** 15 ನವೆಂಬರ್ 2023 ರಂದು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ, ಬಿಜೆಪಿ ಕರ್ನಾಟಕದ ನೂತನ ರಾಜ್ಯಾಧ್ಯಕ್ಷರಾಗಿ ಶ್ರೀ ಬಿ.ವೈ. ವಿಜಯೇಂದ್ರರವರು ಅಧಿಕೃತವಾಗಿ ಪದಗ್ರಹಣ ಮಾಡಿದರು. ಈ ಸಂದರ್ಭದಲ್ಲಿ ನಿಕಟಪೂರ್ವ ರಾಜ್ಯಾಧ್ಯಕ್ಷರು, ಸಂಸದರಾದ ಶ್ರೀ ನಳಿನ್‌ಕುಮಾರ್ ಕಟೀಲ್‌ರವರು ನೂತನ ಅಧ್ಯಕ್ಷ ಶ್ರೀ ವಿಜಯೇಂದ್ರರವರಿಗೆ ಶಾಲು ಹೊದಿಸಿ ಸನ್ಮಾನಿಸಿ, ಅಭಿನಂದನೆ ಸಲ್ಲಿಸಿ ಶುಭ ಕೋರಿದರು. ನೂತನ ರಾಜ್ಯಾಧ್ಯಕ್ಷರಿಗೆ ಬಿಜೆಪಿ ಧ್ವಜವನ್ನು ನೀಡುವ ಮೂಲಕ ವಿದ್ಯುಕ್ತವಾಗಿ ರಾಜ್ಯಾಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟು ಶುಭ ಹಾರೈಸಿದರು. ನನ್ನ ಮೇಲೆ ವರಿಷ್ಠರು ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಂಡು ಹೋಗುತ್ತೇನೆ. ನಮ್ಮ ಪಕ್ಷದ ಯಾರೂ ತಲೆತಗ್ಗಿಸುವಂಥ ಕೆಲಸಕ್ಕೆ ಎಂದಿಗೂ ಅವಕಾಶ ಕೊಡುವುದಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 6 ತಿಂಗಳುಗಳು ಕಳೆದಿದ್ದು, ಹಗಲು ದರೋಡೆ, ಭ್ರಷ್ಟಾಚಾರ ಮೇರೆ ಮೀರಿದೆ. ಲೋಕಸಭೆ ಚುನಾವಣೆಯಲ್ಲಿ ಈ ಭ್ರಷ್ಟ ಸರ್ಕಾರಕ್ಕೆ ತಕ್ಕ ಉತ್ತರ ನೀಡುವುದೇ ಪ್ರಥಮ ಗುರಿ ಎಂದು ಅಲ್ಲಿ ನೆರೆದಿದ್ದ ಸಾವಿರಾರು ಪಕ್ಷದ ಕಾರ್ಯಕರ್ತರಿಗೆ ಮುಂಬರುವ ದಿನಗಳಲ್ಲಿ ಪಕ್ಷದ ಕೆಲಸ ಮಾಡಲು ಪ್ರೇರೇಪಿಸಿದರು.

**ಚಿತ್ರದುರ್ಗ:** 16 ನವೆಂಬರ್ 2023 ರಂದು ರಾಜ್ಯಾಧ್ಯಕ್ಷರು ಚಿತ್ರದುರ್ಗ ಜಿಲ್ಲೆಯ ಮುರುಘಾ ಮಠಕ್ಕೆ ಭೇಟಿ ನೀಡಿ ಮಠದ ಉಸ್ತುವಾರಿಗಳಾದ ಶ್ರೀ ಬಸವಪ್ರಭು ಸ್ವಾಮೀಜಿಯವರನ್ನು ಭೇಟಿ ಮಾಡಿ ನಂತರ ಮಾದಾರ ಗುರು ಪೀಠಕ್ಕೆ ಭೇಟಿ ನೀಡಿ ಶ್ರೀ ಚೆನ್ನಯ್ಯ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಶ್ರೀ ಎ. ನಾರಾಯಣಸ್ವಾಮಿ ಮತ್ತು ಮಾಜಿ ಸಚಿವರಾದ ಶ್ರೀ ಗೋವಿಂದ ಕಾರಜೋಳರವರು ಉಪಸ್ಥಿತರಿದ್ದರು. ನಂತರ ಭೋವಿ ಗುರು ಪೀಠಕ್ಕೆ ತೆರಳಿ ಇಮ್ಮಡಿ ಸಿದ್ದರಾಮೇಶ್ವರ



ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಅವರೊಂದಿಗೆ ಮಾಜಿ ಸಂಸದರಾದ ಶ್ರೀ ಜನಾರ್ಧನ ಸ್ವಾಮಿ ಉಪಸ್ಥಿತರಿದ್ದರು. ತದನಂತರ ಯಾದವ ಗುರು ಪೀಠಕ್ಕೆ ತೆರಳಿ ಶ್ರೀ ಕೃಷ್ಣಯಾದವಾನಂದ ಸ್ವಾಮೀಜಿಗಳ ಆಶೀರ್ವಾದ ಪಡೆದು ನಂತರ ಸಿರಿಗೆರೆ ತರಳಬಾಳು ಪೀಠಕ್ಕೆ ಭೇಟಿ ನೀಡಿದರು.

ಮಾಜಿ ಶಾಸಕರಾದ ಶ್ರೀ ತಿಪ್ಪಾರೆಡ್ಡಿ ರವರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ 28 ಸ್ಥಾನಗಳನ್ನು ಬಿಜೆಪಿ ಗೆಲ್ಲಿಸಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಕೈ ಬಲಪಡಿಸುವುದಾಗಿ ಹೇಳಿದರು. ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯ್ತಿಗಳ ಚುನಾವಣೆಗಳಲ್ಲಿ ಗೆಲುವು ಸಾಧಿಸಬೇಕಿದೆ ಎಂದು ಹೇಳಿದರು.

ಇಡೀ ಕಾಂಗ್ರೆಸ್ ಸರ್ಕಾರವೇ ವರ್ಗಾವಣೆ ದಂಧೆಯಲ್ಲಿ ಮುಳುಗಿದೆ. ಐಟಿ ದಾಳಿ ವೇಳೆ ವಶ ಪಡಿಸಿಕೊಂಡ ಹಣ ಕಾಂಗ್ರೆಸ್‌ನದ್ದೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಜನರಿಗಾಗಿ ಒಂದು ಹೊಸ ಯೋಜನೆಯನ್ನು ಸಹ ಕಾಂಗ್ರೆಸ್ ಸರ್ಕಾರ ಇದುವರೆಗೂ ಆರು ತಿಂಗಳಾದರೂ ಜಾರಿ ಮಾಡಿಲ್ಲ ಎಂದು ಅಧ್ಯಕ್ಷರು ತಿಳಿಸಿದರು. 150 ಕೋ.ರೂ.ಗಳ ವೆಚ್ಚದಲ್ಲಿ 2013-18ರಲ್ಲಿ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಹಿಂದುಳಿದ ವರ್ಗಗಳ ಜಾತಿ ಗಣತಿಗಾಗಿ ಕಾಂತರಾಜ್ ಆಯೋಗ ನೇಮಿಸಿದ್ದರು. ಅವರು ನೀಡಿದ ವರದಿ ಅರೆಬೆಂದ ವರದಿಯಾಗಿದೆ ಹಾಗೂ ಇದರಿಂದ ಸಮಾಜದಲ್ಲಿ ವೀರಶೈವ ಮತ್ತು ಲಿಂಗಾಯತ ಎಂದು ವಿಭಜಿಸಿ, ಅವರಿಗೆ ಬೆಂಕಿ ಹಚ್ಚುವಂಥ ಕೆಲಸ ಮಾಡಿದ್ದಾರೆಂದು ಆಕ್ಷೇಪಿಸಿದರು. ಅವರೊಂದಿಗೆ ಮಾಜಿ ಶಾಸಕ ಶ್ರೀ ತಿಪ್ಪಾರೆಡ್ಡಿ, ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ.ಎಸ್. ನವೀನ್, ಶ್ರೀ ಎ. ನಾರಾಯಣಸ್ವಾಮಿ, ಮಾಜಿ ಸಚಿವ ಶ್ರೀ ರೇಣುಕಾಚಾರ್ಯ, ಜಿಲ್ಲಾಧ್ಯಕ್ಷರಾದ ಶ್ರೀ ಎ. ಮುರಳಿ, ಮುಖಂಡರಾದ ಶ್ರೀ ಅನಿತ್ ಉಪಸ್ಥಿತರಿದ್ದರು.

ಸಿರಿಗೆರೆಯಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದ ಪಡೆದ ಸಂದರ್ಭದಲ್ಲಿ ನ್ಯಾಯಪೀಠದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡುತ್ತಾ ಪಕ್ಷದ ರಾಷ್ಟ್ರೀಯ ಮುಖಂಡರು ತಮಗೆ ನೀಡಿರುವುದು ಅಧಿಕಾರವಲ್ಲ, ಅದು ಹೊಸತೊಂದು ಜವಾಬ್ದಾರಿ ಎಂದು ತಿಳಿಸಿದರು. ತಪ್ಪು ಹೆಜ್ಜೆ ಇಡದಂತೆ ಎಚ್ಚರಿಕೆಯಿಂದ ಜವಾಬ್ದಾರಿಯನ್ನು ನಿರ್ವಹಿಸಿ, ತಮ್ಮಿಂದ ತಪ್ಪುಗಳೇನಾದರೂ ಆದಲ್ಲಿ ಪೂಜ್ಯ ಶ್ರೀಗಳು ಮಾರ್ಗದರ್ಶನ ಮಾಡಬೇಕೆಂದು ರಾಜ್ಯಾಧ್ಯಕ್ಷರು ಶ್ರೀಗಳಲ್ಲಿ ಕೋರಿದರು.

**ಮೈಸೂರು :** 19 ನವೆಂಬರ್ 2023 ರಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ತವರು ಜಿಲ್ಲೆಗೆ ಭೇಟಿ ನೀಡಿದರು.



ರಾಜ್ಯಾಧ್ಯಕ್ಷರನ್ನು ಸ್ವಾಗತಿಸಲು ಮೈಸೂರಿನ ಸಂಸದರಾದ ಶ್ರೀ ಪ್ರತಾಪ್ ಸಿಂಹ, ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸಾ, ಮಾಜಿ ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ಬಿ. ಹರ್ಷವರ್ಧನ್, ಶ್ರೀ ಎನ್. ಮಹೇಶ್, ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಶ್ರೀ ಎಸ್. ಬಾಲರಾಜು, ಮಾಜಿ ಮೇಯರ್ ಶ್ರೀ ಶಿವಕುಮಾರ್, ನಿಗಮ ಮಂಡಳಿಗಳ ಮಾಜಿ ಅಧ್ಯಕ್ಷರಾದ ಶ್ರೀ ಕೋಟೆ ಎಂ. ಶಿವಣ್ಣ, ಶ್ರೀ ಎಲ್.ಆರ್. ಮಹದೇವಸ್ವಾಮಿ, ಶ್ರೀ ಎಂ. ಅಪ್ಪಣ್ಣ ರಘು, ಶ್ರೀ ಆರ್. ಕೌಟಿಲ್ಯ, ಶ್ರೀ ಎಸ್. ಮಹದೇವಯ್ಯ, ನಗರಪಾಲಿಕೆ ಮಾಜಿ ಸದಸ್ಯರಾದ ಶ್ರೀ ಎಂ. ಸತೀಶ್, ಶ್ರೀ ಎಂ.ಕೆ. ಶಂಕರ್, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ಮಂಗಳಾ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಶ್ರೀ ದೇವನೂರು ಪ್ರತಾಪ್, ಎಂಡಿಎ ಮಾಜಿ ಸದಸ್ಯೆ ಶ್ರೀಮತಿ ಲಕ್ಷ್ಮೀದೇವಿ ಮೊದಲಾದವರು ರಾಜ್ಯಾಧ್ಯಕ್ಷರನ್ನು ಆತ್ಮೀಯವಾಗಿ ಬರಮಾಡಿಕೊಂಡರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ ಹಿರಿಯ ನಾಯಕ, ಸಂಸದ ಶ್ರೀ ವಿ. ಶ್ರೀನಿವಾಸಪ್ರಸಾದ್ ಅವರ ನಿವಾಸಕ್ಕೆ ಭೇಟಿ ನೀಡಿ ಪಕ್ಷದಲ್ಲಿನ ಪ್ರಸಕ್ತ ವಿದ್ಯಮಾನ, ರಾಜಕೀಯ ಬೆಳವಣಿಗೆ ಕುರಿತು ಸಮಾಲೋಚಿಸಿದರು. ನಂತರ ಜೆಎಲ್‌ಬಿ ರಸ್ತೆಯ ಮಾಧವ ಕೃಪಕ್ಕೆ ತೆರಳಿ ಆರ್‌ಎಸ್‌ಎಸ್ ಪ್ರಮುಖ ನಾಯಕರನ್ನು ಭೇಟಿ ಮಾಡಿದರು. ನಂತರ ಮೈಸೂರಿನಲ್ಲೇ ಇದ್ದ ಕೇಂದ್ರ ಸಚಿವೆ ಶ್ರೀಮತಿ ಮೀನಾಕ್ಷಿ ಲೇಖಿ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು. ನಂತರ ನಂಜನಗೂಡು ರಸ್ತೆಯಲ್ಲಿರುವ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಮಾರ್ಗದ ಮಧ್ಯೆ ಸುತ್ತೂರು ಮಠಕ್ಕೆ ತೆರಳಿ ಶ್ರೀ ಶಿವರಾತ್ರಿ ದೇಶಕೇಂದ್ರ ಸ್ವಾಮಿಗಳಿಂದ ಆಶೀರ್ವಾದ ಪಡೆದರು.

ರಾಜ್ಯಾಧ್ಯಕ್ಷರೊಂದಿಗೆ ಬಿಜೆಪಿ ನಗರ ಕಾರ್ಯಾಧ್ಯಕ್ಷ ಶ್ರೀ ಹೆಚ್.ಜಿ. ಗಿರಿಧರ್, ಪ್ರಧಾನ ಕಾರ್ಯದರ್ಶಿ ಶ್ರೀ ವಾಣೀಶ್ ಕುಮಾರ್, ಶ್ರೀ ವಿ. ಸೋಮಸುಂದರ್, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಶ್ರೀ ಜೋಗಿ ಮಂಜು, ನಗರಪಾಲಿಕೆ ಮಾಜಿ

ಸದಸ್ಯರಾದ ಶ್ರೀ ಕೆ.ಜೆ. ರಮೇಶ್, ಶ್ರೀ ಬಿ.ವಿ. ಮಂಜುನಾಥ್, ಮುಖಂಡರಾದ ಶ್ರೀ ಅರುಣ್‌ಕುಮಾರ್‌ಗೌಡ, ಶ್ರೀ ಗೆಜ್ಜವಳ್ಳಿ ಮಹೇಶ್, ಶ್ರೀಮತಿ ರೇಣುಕಾರಾಜ್, ಶ್ರೀ ಕಿರಣ್ ಗೌಡ, ಶ್ರೀ ಗೋಕುಲ್ ಗೋವರ್ಧನ್, ಶ್ರೀ ಜಯರಾಮ್ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**ಮಂಡ್ಯ :** ಮಂಡ್ಯ ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆಯಲ್ಲಿ ರಾಜ್ಯಾಧ್ಯಕ್ಷರಿಗೆ ಅದ್ದೂರಿ ಸ್ವಾಗತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮಾಜಿ ಸಂಸದರಾದ ಶ್ರೀ ಎಲ್.ಆರ್. ಶಿವರಾಮೇಗೌಡರ ಪುತ್ರ ಶ್ರೀ ಎಲ್.ಎಸ್. ಚೇತನ್‌ಗೌಡ, ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷರು ಬಿಜೆಪಿ ಪಕ್ಷಕ್ಕೆ ಕಾರ್ಯಕರ್ತರೇ ದೊಡ್ಡ ಆಸ್ತಿ. ಪ್ರಧಾನಿ ಶ್ರೀ ಮೋದಿ ಅವರ ಕೈ ಬಲಪಡಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಪಕ್ಷವನ್ನು ಮತ್ತಷ್ಟು ಸದೃಢಗೊಳಸಲಾಗುವುದೆಂದು ಹೇಳಿದರು. ಕಳೆದ ಕೆ.ಆರ್.ಪೇಟೆ ಉಪ ಚುನಾವಣೆಯಲ್ಲಿ ಮೊದಲ ಬಾರಿಗೆ ಜಿಲ್ಲೆಯಲ್ಲಿ ಬಿಜೆಪಿ ಗೆಲ್ಲಿಸುವ ಇತಿಹಾಸ ನಿರ್ಮಿಸಿದ್ದೇವೆ. ಅದೇ ರೀತಿ ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಪಕ್ಷದ ಗೆಲುವಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

20 ನವೆಂಬರ್ 2023ರಂದು 'ನಮ್ಮ ಬೂತ್ ನಮ್ಮ ಹೆಮ್ಮೆ'ಯ ಮುಂದುವರೆದ 'ಬೂತ್ ಮಿಲನ' ಕಾರ್ಯಕ್ರಮದ ಪ್ರಯುಕ್ತ ಮಂಡ್ಯ ನಗರದ 8ನೇ ವಾರ್ಡ್‌ನ ಬೂತ್ ಸಂಖ್ಯೆ 163ರ ಅಧ್ಯಕ್ಷರಾದ ಶ್ರೀ ಎನ್.ಎಲ್. ಶ್ರೀನಿವಾಸ್ ಪ್ರಸಿಸ್ ಅವರ ನಿವಾಸಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ಎನ್. ಮಹೇಶ್, ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಉಮೇಶ್, ಮುಖಂಡರಾದ ಶ್ರೀ ಅಶೋಕ್‌ಜಯರಾಮ್, ಡಾ. ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಮೈಸೂರು :** ಮೈಸೂರಿನಲ್ಲಿ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಮುಂಬರುವ ಲೋಕಸಭಾ ಚುನಾವಣೆಯು ವಿಶ್ವ ಮಟ್ಟದಲ್ಲಿ ಭಾರತವನ್ನು ಮುಂಚೂಣಿಗೆ ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ, ಈ ನಿಟ್ಟಿನಲ್ಲಿ ಮಾನ್ಯ ಶ್ರೀ ನರೇಂದ್ರ ಮೋದಿಯವರು ಮಗದೊಮ್ಮೆ ಪ್ರಧಾನಿಯಾದರೆ ಮಾತ್ರವೇ ದೇಶದ ಭವಿಷ್ಯ ಪ್ರಜ್ವಲಿಸಲು ಸಾಧ್ಯ, ಇದಕ್ಕಾಗಿ ರಾಜ್ಯದಲ್ಲಿ 28 ಲೋಕಸಭಾ ಸ್ಥಾನಗಳನ್ನು ಬಿಜೆಪಿ ಗೆಲ್ಲುವ ಸಂಕಲ್ಪ ನಮ್ಮದಾಗಿದೆ. ಆದ್ದರಿಂದ ಕಾರ್ಯಕರ್ತರು ವಿರಮಿಸದೆ ಸಮರ್ಪಣಾ ಮನೋಭಾವದಿಂದ ಯೋಧರಂತೆ ಇಂದಿನಿಂದಲೇ ಕಾರ್ಯೋನ್ಮುಖರಾಗಬೇಕೆಂದು ಕರೆ ನೀಡಿದರು.



21 ನವೆಂಬರ್ 2023 ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರು, ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಸಂಘಟನೆಗೆ ಚೈತನ್ಯ ತುಂಬಿದ ಶ್ರೀ ಕೃ. ನರಹರಿ ಅವರ ನಿವಾಸಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದರು. ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.42ರ ಬೂತ್ ಅಧ್ಯಕ್ಷರಾದ ಶ್ರೀ ಶಿವಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿ ಪಕ್ಷದ ಸಂಘಟನೆ ಕುರಿತು ಚರ್ಚಿಸಿದರು ಹಾಗೂ ಅವರಿಂದ ಮಾಹಿತಿ ಪಡೆದರು. ಬಳಿಕ ರಾಜ್ಯಾಧ್ಯಕ್ಷರು ಖ್ಯಾತ ಕಾದಂಬರಿಕಾರ ಡಾ. ಎಸ್.ಎಲ್. ಭೈರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಅವರ ಆಶೀರ್ವಾದ ಪಡೆದರು. ಈ ವೇಳೆ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಂ. ರಾಜೇಂದ್ರ, ಮೇಯರ್ ಶ್ರೀ ಶಿವಕುಮಾರ್, ಮಾಜಿ ಸಿಂಡಿಕೇಟ್ ಸದಸ್ಯರಾದ ಶ್ರೀ ಜಗದೀಶ್ ಮೊದಲಾದವರು ಉಪಸ್ಥಿತರಿದ್ದರು.

ರಾಜ್ಯಾಧ್ಯಕ್ಷರು ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿ ಮಠದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಮುಕ್ತಿದಾನಂದ ಸ್ವಾಮಿಯವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮಠದ ಅನುಯಾಯಿಗಳೂ ಆದ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಕುವೆಂಪು ರವರ ಅಳಿಯಂದಿರು, ವಿಶ್ರಾಂತ ಕುಲಪತಿಗಳಾದ ಡಾ. ಚಿದಾನಂದ ಗೌಡರು, ಪತ್ರಕರ್ತ ಡಾ. ಕೆ.ಬಿ. ಗಣಪತಿಯವರು, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು, ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಂ. ರಾಜೇಂದ್ರ, ಶಾಸಕರಾದ ಶ್ರೀ ಟಿ.ಎಸ್. ಶ್ರೀತ್ಸ, ಮಾಜಿ ಶಾಸಕರಾದ ಶ್ರೀ ಎನ್. ಮಹೇಶ್, ಶ್ರೀ ಎಲ್. ನಾಗೇಂದ್ರ, ಶ್ರೀ ನಿರಂಜನ್ ಕುಮಾರ್, ಸ್ಥಳೀಯ ಮುಖಂಡರು, ಮಠದ ಭಕ್ತರು ಹಾಗೂ ಪಕ್ಷದ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಂತರ ಮೈಸೂರಿನ ಬೂತ್ ಸಂಖ್ಯೆ 181ರ ಅಧ್ಯಕ್ಷರಾದ ಶ್ರೀ ರವಿಕುಮಾರ್ ಅವರ ಮನೆಗೆ ಭೇಟಿ ನೀಡಿ ಮುಂಬರುವ ದಿನಗಳಲ್ಲಿ ಪಕ್ಷವನ್ನು ಬೂತ್ ಮಟ್ಟದಿಂದಲೂ ಬಲಪಡಿಸುವ ನಿಟ್ಟಿನಲ್ಲಿ ಶ್ರಮಿಸಬೇಕು ಎಂದು ಕರೆ ನೀಡಿದರು. ಮೈಸೂರು ಭಾಗದಲ್ಲಿ ಬಿಜೆಪಿ

ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಸಾರ್ಥಕ ಸೇವೆ ಸಲ್ಲಿಸಿರುವ ಹಿರಿಯರು ಹಾಗೂ ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ತೋಂಟದಾರ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಆಶೀರ್ವಾದ ಪಡೆದರು. ನಂತರ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸೋಮೇಶ್ವರನಾಥ ಮಹಾಸ್ವಾಮಿಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ನವೆಂಬರ್ 21 ರಂದು ಬೆಂಗಳೂರಿನಲ್ಲಿ ಸಂಘಟನೆಯ ಹಿರಿಯರು ಹಾಗೂ ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ಪಿ.ವಿ. ಕೃಷ್ಣಭಟ್ ರವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಪ್ರೊ. ಪಿ.ವಿ.ಕೆ ರವರು ತಮ್ಮ ವಿದ್ಯಾರ್ಥಿ ದಿಸೆಯಿಂದಲೂ ವಿದ್ಯಾರ್ಥಿ ಪರಿಷತ್ತಿನ ನೇತೃತ್ವ ವಹಿಸಿ ತುರ್ತುಪರಿಸ್ಥಿತಿಯ ಕರಾಳ ದಿನಗಳಲ್ಲಿ ಜೈಲು ವಾಸ ಅನುಭವಿಸಿದ ಹಿರಿಯರು, ಶ್ರೀಯುತರು, ರಾಷ್ಟ್ರೀಯತೆ ಮತ್ತು ಸಂಘಟನೆಗೆ ನೀಡಿರುವ ಕೊಡುಗೆಗಳು ಅನನ್ಯ, ಅವರು ನಮಗೆ ಆದರ್ಶತೆಯ ಸಂಕೇತವಾಗಿದ್ದಾರೆಂದು ಅವರು ತಿಳಿಸಿದರು.



**ಮಂಗಳೂರು :**22 ನವೆಂಬರ್ 2023ರಂದು ರಾಜ್ಯ ಬಿಜೆಪಿ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್‌ಕುಮಾರ್ ಕಟೀಲ್ ಅವರ ನಿವಾಸಕ್ಕೆ ಭೇಟಿ ನೀಡಿದರು. ನಂತರ ಮಂಗಳೂರಿನ ಹೊಸದಿಗಂತ ಪತ್ರಿಕಾ ಕಾರ್ಯಾಲಯಕ್ಕೆ ಭೇಟಿ ನೀಡಿ ಹೊಸದಿಗಂತ ಸಿಇಒ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಪ್ರಾಂತದ ಕಾರ್ಯವಾಹಕರಾದ ಶ್ರೀ ಪಿ.ಎಸ್. ಪ್ರಕಾಶ್‌ರವರನ್ನು ಭೇಟಿ ಮಾಡಿದರು. ಅಲ್ಲಿಂದ ಪಕ್ಷದ ಹಿರಿಯರು ಹಾಗೂ ಮಾಜಿ ಶಾಸಕರಾದ ಶ್ರೀ ಯೋಗೀಶ್ ಭಟ್‌ರವರ ಮನೆಗೆ ಭೇಟಿ ನೀಡಿದರು.

'ನಮ್ಮ ಬೂತ್-ನಮ್ಮ ಶಕ್ತಿ' ಪ್ರಯುಕ್ತ ಮಂಗಳೂರು ನಗರ ದಕ್ಷಿಣ ವಿಧಾನಸಭಾ ಕ್ಷೇತ್ರದ ಕೋಡಿಯಾಲ್ ಬೈಲ್ 30ನೇ ವಾರ್ಡ್‌ನ ಬೂತ್ ಸಂಖ್ಯೆ 65ರ ಅಧ್ಯಕ್ಷರಾದ ಶ್ರೀ ಯಶವಂತ್ ಕುದ್ರೋಳಿ ಅವರ ನಿವಾಸಕ್ಕೆ ಭೇಟಿ ನೀಡಿದರು.

ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯಾಧ್ಯಕ್ಷರು ಆರಂಭದ ದಿನಗಳಿಂದಲೂ ಪಕ್ಷಕ್ಕೆ ಭದ್ರ ನೆಲೆ ಒದಗಿಸುವುದು ನಮ್ಮ ಕರಾವಳಿ ಕರ್ನಾಟಕ ಮಾತ್ರ, ಹಾಗಾಗಿ ಅಲ್ಲಿನ ಜನತೆಗೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸಿದರು. ಮುಂಬರುವ ಲೋಕಸಭಾ ಚುನಾವಣೆಗೆ ಸನ್ನದ್ಧರಾಗಲು ಕಾರ್ಯಕರ್ತರಿಗೆ ಕರೆ



ನೀಡಿದರು. ಹಗಲಿರುಳು ಶ್ರಮಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲು ಹುರಿದುಂಬಿಸಿದರು. ಈ ಸಂದರ್ಭದಲ್ಲಿ ಅವರೊಂದಿಗೆ ಶಾಸಕರುಗಳಾದ ಶ್ರೀ ವೇದವ್ಯಾಸ ಭಟ್, ಶ್ರೀ ಭರತ್‌ಶೆಟ್ಟಿ, ಶ್ರೀ ಉಮಾನಾಥ್ ಕೋಟ್ಯಾನ್, ಶ್ರೀ ರಾಜೇಶ್ ನಾಯಕ್, ಶ್ರೀ ಹರೀಶ್ ಪೂಂಜಾ, ಕು. ಭಾಗೀರಥಿ ಮುರುಳ್ಯ, ಜಿಲ್ಲಾಧ್ಯಕ್ಷರಾದ ಶ್ರೀ ಸುದರ್ಶನ್, ಮೇಯರ್ ಶ್ರೀ ಸುಧೀರ್ ಶೆಟ್ಟಿ, ಚಲನಚಿತ್ರ ನಟಿ ಶ್ರೀಮತಿ ತಾರಾ ಅನುರಾಧಾ, ಶ್ರೀ ಮೋನಪ್ಪಾ ಭಂಡಾರಿ, ಹಲವಾರು ಮುಖಂಡರು ಹಾಗೂ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**ಎಸ್ ಸಿ ಮೋರ್ಚಾದ ವಿಶೇಷ ಸಭೆ :** 23 ನವೆಂಬರ್ 2023ರಂದು ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ರಾಜ್ಯ ಎಸ್.ಸಿ. ಮೋರ್ಚಾದ ವಿಶೇಷ ಸಭೆಯನು ಉದ್ಘಾಟಿಸಿ ಮಾತನಾಡಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರ ಸಮಾನ ಆಶಯ, ಧ್ಯೇಯದೊಂದಿಗೆ ಸಾಗುತ್ತಿರುವ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಸರ್ಕಾರವು ಪರಿಶಿಷ್ಟ ಸಮುದಾಯಗಳಿಗೆ ರೂಪಿಸಿರುವ ಯೋಜನೆಗಳು ಸಾಮಾಜಿಕ ನ್ಯಾಯಕ್ಕೆ ನೀಡಿರುವ ಮಹತ್ವದ ಕೊಡುಗೆಗಳಾಗಿದ್ದು, ಬಿಜೆಪಿ ಮಾತ್ರ ದಮನಿತರ ದನಿಯಾಗಬಲ್ಲದೆಂದು ಸಾಬೀತು ಪಡಿಸಿದೆ, ಹಾಗಾಗಿ ಮತ್ತೊಮ್ಮೆ ಪ್ರಧಾನಿ ಶ್ರೀ ಮೋದಿಯವರನ್ನು ದೇಶದ ನಾಯಕರಾಗಿಸುವ ನಿಟ್ಟಿನಲ್ಲಿ ಶ್ರಮಿಸಬೇಕು ಎಂದು ಹೇಳಿದರು. ನಂತರ ಮಾಜಿ ಸಚಿವರು ಹಾಗೂ ಗೋಕಾಕ್ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ರಮೇಶ್ ಜಾರಕಿಹೊಳಿ ಅವರನ್ನು ಅವರ ಬೆಂಗಳೂರಿನ ನಿವಾಸದಲ್ಲಿ ಭೇಟಿ ಮಾಡಲಾಯಿತು.

24 ನವೆಂಬರ್ 2023ರಂದು ಬಿಜೆಪಿ ರಾಷ್ಟ್ರೀಯ ಪ್ರಧಾನ

ಕಾರ್ಯದರ್ಶಿಗಳಾಗಿದ್ದ ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿ ಅವರ ನಿವಾಸಕ್ಕೆ ಭೇಟಿ ನೀಡಿದರು. 25 ನವೆಂಬರ್ 2023ರಂದು ತೆಲಂಗಾಣ – ಕರ್ನಾಟಕ ಗಡಿ ಭಾಗವವಾದ ಮಕ್ತಾಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ನೇರಗಡಗಂ ಪಶ್ಚಿಮಾದ್ರಿ ಸಂಸ್ಥಾನ ವಿರಕ್ತ ಮಠಕ್ಕೆ ಭೇಟಿ ನೀಡಿ ಪರಮಪೂಜ್ಯ ಪಂಚಮ ಸಿದ್ದಲಿಂಗ ಮಹಾಸ್ವಾಮಿಗಳ ಆಶೀರ್ವಾದ ಪಡೆದರು. ನಂತರ ತೆಲಂಗಾಣ ರಾಜ್ಯ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಮಕ್ತಾಲ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀ ಜಲಂಧರ್ ರೆಡ್ಡಿರವರ ಪರವಾಗಿ ಮತಯಾಚನೆ ಮಾಡಿದರು. ಅವರೊಂದಿಗೆ ಕೋಲಾರದ ಸಂಸದರಾದ ಶ್ರೀ ಮುನಿಸ್ವಾಮಿ, ರಾಜ್ಯ ಉಪಾಧ್ಯಕ್ಷರಾದ ಶ್ರೀ ನಂದೀಶ್ ರೆಡ್ಡಿ, ಮಾನ್ವಿ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಬಸವನಗೌಡ ಹಾಗೂ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

26 ನವೆಂಬರ್ 2023 ರಂದು ರಾಜ್ಯಾಧ್ಯಕ್ಷರು ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವನರನ್ನು ಅವರ ಬಿಡದಿಯ ನಿವಾಸದಲ್ಲಿ ಭೇಟಿ ಮಾಡಿದರು.

**ಶಿವಮೊಗ್ಗ :** ರಾಜ್ಯಾಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡ ನಂತರ 27 ನವೆಂಬರ್ 2023ರಂದು ಮೊದಲ ಬಾರಿಗೆ ತಮ್ಮ ತವರು ಜಿಲ್ಲೆ ಶಿವಮೊಗ್ಗಕ್ಕೆ ಭೇಟಿ ನೀಡಿದರು. ಪಕ್ಷದ ಕಾರ್ಯಾಲಯ ದೀನದಯಾಳ ಉಪಾಧ್ಯಾಯ ಭವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತವನ್ನು ಕೋರಿದರು. ಪಕ್ಷದ ಹಿರಿಯ ಮುಖಂಡರು, ಕಾರ್ಯಕರ್ತರು ತಮ್ಮ ನೂತನ ರಾಜ್ಯಾಧ್ಯಕ್ಷರನ್ನು ಆದರದಿಂದ ಬರಮಾಡಿಕೊಂಡರು.



29 ನವೆಂಬರ್ 2023ರಂದು ಶಿವಮೊಗ್ಗದ ಪ್ರೇರಣಾ ಸಭಾಂಗಣದಲ್ಲಿ ಆಯೋಜಿಸಿದ್ದ ''ಮತ್ತೆ ಮೋದಿ ಜೀ ನಮ್ಮ ಸಂಕಲ್ಪ – 28ಕ್ಕೆ 28 ಬಿಜೆಪಿ ಗುರಿ'' ಅಭಿನಂದನಾ ಕಾರ್ಯಕ್ರಮದ ಬೃಹತ್ ಸಮಾರಂಭವನ್ನು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು. ಕಾರ್ಯಕರ್ತರು ಆಯೋಜಿಸಿದ್ದ ಬೃಹತ್ ರೋಡ್ ಶೋ ಹಾಗೂ ಬೈಕ್ ರ್‍ಯಾಲಿಯಲ್ಲಿ ನಾಯಕರು, ಮುಖಂಡರುಗಳು ಹಾಗೂ ಕಾರ್ಯಕರ್ತರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಮಾಜಿ ಶಾಸಕರಾದ ಶ್ರೀ ಕೆ.ಎಸ್. ಈಶ್ವರಪ್ಪ, ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರ, ಶಾಸಕರುಗಳಾದ ಶ್ರೀ ಅರಗ ಜ್ಞಾನೇಂದ್ರ, ಶ್ರೀ ಚೆನ್ನಬಸಪ್ಪ, ವಿಧಾನಪರಿಷತ್ ಸದಸ್ಯರುಗಳಾದ ಶ್ರೀ ರುದ್ರೇಗೌಡ, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಡಿ.ಎಸ್. ಅರುಣ್, ಮಾಜಿ ಶಾಸಕರಾದ ಶ್ರೀ ಕೆ.ಬಿ. ಅಶೋಕನಾಯ್ಕ್, ಶ್ರೀ ಹರತಾಳು ಹಾಲಪ್ಪ, ರಾಜ್ಯ ಪ್ರಕೋಷ್ಠಗಳ ಸಂಯೋಜಕರಾದ ಶ್ರೀ ಭಾನು ಪ್ರಕಾಶ್, ಜಿಲ್ಲಾಧ್ಯಕ್ಷರಾದ ಶ್ರೀ ಟಿ.ಡಿ. ಮೇಘರಾಜ್, ತಾಲ್ಲೂಕು ಅಧ್ಯಕ್ಷರಾದ ಶ್ರೀ ವೀರೇಂದ್ರ ಪಾಟೀಲ್, ಮುಖಂಡರಾದ ಶ್ರೀ ಗುರುಮೂರ್ತಿ ಪಕ್ಷದ ಹಿರಿಯ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ನಂತರ ಮಾಜಿ ಸಚಿವರು ಹಾಗೂ ಪಕ್ಷದ ಹಿರಿಯ ನಾಯಕರಾದ ಶ್ರೀ ಕೆ.ಎಸ್. ಈಶ್ವರಪ್ಪರವರ ಮನೆಗೆ ಹಾಗೂ ವಿಧಾನಪರಿಷತ್‌ನ ಮಾಜಿ ಸಭಾಪತಿಗಳಾದ ಹಿಂದೂ ಸಮಾಜದ ಶ್ರೇಷ್ಠ ಜ್ಞಾನಿಗಳು, ಹಿರಿಯ ಮುತ್ಸದ್ದಿ ರಾಜಕಾರಣಿ ಶ್ರೀ ಡಿ.ಹೆಚ್. ಶಂಕರಮೂರ್ತಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ನಂತರ ಶಿವಮೊಗ್ಗ ನಗರದ ವಾರ್ಡ್ ನಂ. 9ರ ಬೂತ್ ಸಂಖ್ಯೆ 282ರ ಅಧ್ಯಕ್ಷರಾದ ಶ್ರೀ ಎಸ್.ಕೆ. ಜಗನ್ ಅವರ ನಿವಾಸಕ್ಕೆ ಭೇಟಿ ನೀಡಿದರು.

ಶಿಕಾರಿಪುರದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ತಮ್ಮ ತಂದೆಯವರು ಬೆಳೆದುಬಂದ ಹೋರಾಟದ ಬದುಕೇ ತಮಗೆ ಪ್ರೇರಣೆ, ಕ್ಷೇತ್ರದ ಜನರ ಸಹಕಾರ, ಬೆಂಬಲವೇ ತಮಗೆ ಶ್ರೀರಕ್ಷೆ ಎಂದು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಹೇಳಿದರು.



30 ನವೆಂಬರ್ 2023ರಂದು ಶ್ರೀಮದ್ ಉಜ್ಜಯಿನಿ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಆಶೀರ್ವಾದ ಹಾಗೂ ಶಿಕಾರಿಪುರ ಶ್ರೀಶೈಲ ಜಗದ್ಗುರುಗಳಾದ ಪರಮಪೂಜ್ಯ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದ ಪಡೆದರು. ಶಿಕಾರಿಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.5, ಬೂತ್ ಸಂಖ್ಯೆ 148ರ ಅಧ್ಯಕ್ಷರಾದ ಶ್ರೀ ಗಜೇಂದ್ರ ಎಸ್. ಕೊರ್ಡೆಕರ್ ಅವರ ಮನೆಗೆ ಭೇಟಿ ನೀಡಿದರು.





# ಪ್ರಧಾನಮಂತ್ರಿ ಸ್ವ-ನಿಧಿಯಿಂದ ಸಮೃದ್ಧಿಯವರೆಗೆ

# ಜಾಗೃತಿ ಸಮಾವೇಶ

## ಪಿಎಂ ಸ್ವ-ನಿಧಿ



**ಸರಕಾರದ ಪ್ರತೀ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಬೇಕು.**

**ಪಂ. ದೀನ ದಯಾಳ್** ರವರ ಅಂತ್ಯೋದಯದ ಆಶಯವೂ ಇದೇ.

ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರದ ಅಡಿಯಲ್ಲಿ ರೂಪಿತವಾದ ಎಲ್ಲಾ ಯೋಜನೆಗಳೂ ಈ ಅಂತ್ಯೋದಯದ ಪರಿಕಲ್ಪನೆಯಲ್ಲಿ ಮೂಡಿ ಬಂದಿರುವಂತಹುದೇ. ಈ ಎಲ್ಲಾ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಸರ್ಕಾರದೊಂದಿಗೆ ಸಂಘಟನೆಯ ಸಹಭಾಗಿತ್ವವೂ ಮುಖ್ಯವಾದುದು.

ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಹುಟ್ಟು ಹಬ್ಬದ ಸಂದರ್ಭದಲ್ಲಿ ಸರ್ಕಾರದ ಹತ್ತು ಹಲವು ಯೋಜನೆಗಳ ಮಾಹಿತಿಗಳ ಜಾಗೃತಿ, ಪ್ರಚಾರ ಹಾಗೂ ಅಗತ್ಯ ವ್ಯಕ್ತಿಗಳಿಗೆ ನೆರವು ನೀಡಲು ಸೆಪ್ಟೆಂಬರ್ 16 ರಿಂದ ಅಕ್ಟೋಬರ್ 15ರ ವರೆಗೆ ಪಿ.ಎಂ. ಸ್ವನಿಧಿ ಮಾಸವನ್ನಾಗಿ ಆಚರಿಸಲಾಯಿತು.

ರಾಜ್ಯಮಟ್ಟದಲ್ಲಿ ಈ ಕಾರ್ಯ ಯೋಜನೆಗೆ ಮಾಜಿ ಸಚಿವ ಶ್ರೀ ಎಸ್.ಎ.ರಾಮದಾಸ್ ರವರನ್ನು ರಾಜ್ಯ ಸಂಚಾಲಕರನ್ನಾಗಿ ನಿಯುಕ್ತಿ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಆಯೋಜಿತವಾದ ಜಾಗೃತಿ ಸಭೆಗಳಲ್ಲಿ ಅಂತ್ಯೋದಯದ ಪರಿಕಲ್ಪನೆಯಲ್ಲಿ ಮೂಡಿ ಬಂದ ಎಲ್ಲಾ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು.

## ಪಿಎಂ ವಿಶ್ವಕರ್ಮ

ಪ್ರಧಾನಿ ಶ್ರೀ ನರೇಂದ್ರ ಮೋದಿಯವರು 17.09.2023 ರಂದು ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಗೆ ಚಾಲನೆಯನ್ನು ನೀಡಿದ್ದು, ಭಾರತದ ಸಾವಿರಾರು ವರ್ಷಗಳ ಇತಿಹಾಸದಂತೆ ವೃತ್ತಿಪರ ಜೀವನವನ್ನು ಮಾಡುವವರಿಗೆ ಪುನಶ್ಚೇತನ ನೀಡುವ ನಿಟ್ಟಿನಲ್ಲಿ 18 ವೃತ್ತಿಪರರಿಗೆ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಮರಗೆಲಸದವರು, ದೋಣಿ ಕಟ್ಟುವವರು, ಕಬ್ಬಿಣ ಕೆಲಸಗಾರರು, ಅಕ್ಕಸಾಲಿಗರು, ಕುಂಬಾರರು, ಮೂರ್ತಿ ತಯಾರಕರು ಮತ್ತು ಕಲ್ಲು ಕುಟ್ಟುವವರು, ಚಮ್ಮಾರರು, ಮನೆ ಕಟ್ಟುವರರು, ಚಾಪೆ/ಸೆಣಬಿನ ಕೆಲಸ/ಪೊರಕೆ ತಯಾರಕರು, ಸಾಂಪ್ರದಾಯಿಕ ಆಟಿಕೆ/ಗೊಂಬೆ ತಯಾರಕರು, ಕ್ಷೌರಿಕ ವೃತ್ತಿ /ಸವಿತಾ ಸಮಾಜ, ಹೂ, ಹಾರ ತಯಾರಕರು, ದೋಬಿ, ಟೈಲರ್, ಮೀನು ಬಲೆ ತಯಾರಕರು ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ.

**ಯೋಜನೆಯ ಲಾಭಗಳು:**

- ಫಲಾನುಭವಿಗಳಿಗೆ ಐದು ದಿನದಿಂದ ಏಳು ದಿನದ ತರಬೇತಿ. ಇಚ್ಛೆಪಟ್ಟವರಿಗೆ 15 ದಿನಗಳ ವಿಶೇಷ ತರಬೇತಿ ಮತ್ತು ಪ್ರತೀ ದಿನ 500ರೂ. ಪ್ರೋತ್ಸಾಹ ಧನ, ತರಬೇತಿ ನಂತರ ಪ್ರಮಾಣಪತ್ರ ಹಾಗೂ ಗುರುತಿನ ಚೀಟಿ ವಿತರಣೆ.
- ತರಬೇತಿ ಪಡೆದವರಿಗೆ 15,000 ರೂ. ಸಹಾಯ ಟೂಲ್ ಕಿಟ್. ಯಾವುದೇ ಗ್ಯಾರಂಟಿ ಇಲ್ಲದೇ 1 ಲಕ್ಷ ರೂ. ಅಭಿವೃದ್ಧಿ ಸಾಲ (18 ತಿಂಗಳಲ್ಲಿ ಈ ಹಣದ ಮರುಪಾವತಿ ಮಾಡುವುದು. ಶೇ. 5% ಬಡ್ಡಿ ಫಲಾನುಭವಿ ನೀಡಬೇಕು. ಕೇಂದ್ರ ಸರ್ಕಾರದಿಂದ 8% ಬಡ್ಡಿದರ ಫಲಾನುಭವಿಗಳ ಖಾತೆಗೆ ಉಚಿತ)
- 2ನೇ ಆವೃತ್ತಿಯಲ್ಲಿ 2 ಲಕ್ಷ ರೂ. ಸಾಲ ಸಹಾಯ, 30 ತಿಂಗಳುಗಳಲ್ಲಿ ಮರುಪಾವತಿ ಮಾಡಲು ಅವಕಾಶ. (ಕೇಂದ್ರ ಸರ್ಕಾರದಿಂದ 8% ಬಡ್ಡಿದರ ಫಲಾನುಭವಿಗಳ ಖಾತೆಗೆ ಉಚಿತ)
- ಡಿಜಿಟಲ್ ವ್ಯವಹಾರ ಉತ್ತೇಜನಕಾರಿಯಾಗಿ ತಿಂಗಳಿಗೆ 100 ರೂ. ಗಳನ್ನು ಫಲಾನುಭವಿಗಳ ಖಾತೆಗೆ.
- ತಯಾರಿಸಿದ ವಸ್ತುಗಳ ಮಾರುಕಟ್ಟೆ/ಬ್ರ್ಯಾಂಡಿಂಗ್/ಕ್ವಾಲಿಟಿಯ ಪ್ರಮಾಣಪತ್ರಕ್ಕೆ ಸಹಾಯ.



**ಮೈಸೂರು :** ಪಿಎಂ ಸ್ವನಿಧಿ ಹಾಗೂ ಪಂ. ದೀನದಯಾಳ್ ಉಪಾಧ್ಯಾಯ ಅಂತ್ಯೋದಯ ಯೋಜನೆ ಕುರಿತು ಮಂಗಳ ಮುಖಿ ಸಮೂಹದವರಿಗೆ ಮಾಹಿತಿ ನೀಡಲು ಸಭೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಮಂಗಳಮುಖಿ ಸಮುದಾಯವು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ನೀಡಿದ ಎಂಟು ಯೋಜನೆಗಳ ಪ್ರಯೋಜನ ಪಡೆದು ಸಮಾಜದ ಪ್ರತಿಯೊಂದು ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕೈಜೋಡಿಸಲು ತಿಳಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ, ಮೈಸೂರು ಸಿಟಿ ಕಾರ್ಪೊರೇಷನ್, ಗಾರ್ಡ್ ಸೊಸೈಟಿ ಮತ್ತು ಜಿಲ್ಲಾ ಏಡ್ಸ್ ನಿಯಂತ್ರಣ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

**ಹಾವೇರಿ :** ಪಿಎಂ ಸ್ವನಿಧಿ ಹಾಗೂ ಪಿಎಂ ವಿಶ್ವಕರ್ಮ ಯೋಜನೆಗಳ ಕುರಿತು ಜಿಲ್ಲಾಧ್ಯಕ್ಷರು, ಮಾಜಿ ಶಾಸಕರು, ಪದಾಧಿಕಾರಿಗಳು, ನಾಯಕರು ಹಾಗೂ ಕಾರ್ಯಕರ್ತರೊಂದಿಗೆ ಸಭೆ ನಡೆಸಿ ಚರ್ಚಿಸಲಾಯಿತು. ಈ ಯೋಜನೆಗಳ ಲಾಭವನ್ನು ಕಾರ್ಮಿಕರು ಮತ್ತು ವ್ಯಾಪಾರಿಗಳು ಪೂರ್ಣ ಪ್ರಮಾಣದಲ್ಲಿ ಪಡೆಯುವಂತೆ ಪ್ರತಿಯೊಬ್ಬರು ಸಹಕರಿಸಬೇಕೆಂದು ತಿಳಿಸಲಾಯಿತು.



**ಉತ್ತರ ಕನ್ನಡ :** ಪಿಎಂ ಸ್ವನಿಧಿ ಯೋಜನೆಯ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪದಾಧಿಕಾರಿಗಳು, ನಾಯಕರು ಹಾಗೂ ಸಿರ್ಸಿ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಉಪಸ್ಥಿತಿಯಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯ ನಂತರ ಸಿರ್ಸಿ ನಗರದ ಮಾರತಿಕೊಪ್ಪದಲ್ಲಿರುವ ಗಂಧದ ಹಾರದ ತಯಾರಕರು, ಹೂ ವ್ಯಾಪಾರಿಗಳು ಹಾಗೂ ಸ್ಥಳೀಯ ವ್ಯಾಪಾರಿಗಳನ್ನು ಭೇಟಿ ಮಾಡಿ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಪ್ರಯೋಜನ ಹಾಗೂ ರೂ. 100/-ನ್ನು ಡಿಜಿಟಲ್ ವ್ಯವಹಾರ ಮಾಡುವ ಮೂಲಕ ಹೇಗೆ ಪಡೆಯಬಹುದು ಎಂಬ ಮಾಹಿತಿಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಚಾಲಕರಾದ ಶ್ರೀಮತಿ ಉಷಾ ಹೆಗಡೆ ಉಪಸ್ಥಿತರಿದ್ದರು.

**ಶಿವಮೊಗ್ಗ :** ಶಿವಮೊಗ್ಗ ನಗರದ ಜಿಲ್ಲಾ ನ್ಯಾಯಾಧೀಶರ ಸೆನೆಟ್ ಹಾಲ್‌ನಲ್ಲಿ ಜಿಲ್ಲಾ ಉಪ ಮೇಯರ್ ಶ್ರೀಮತಿ ಲಕ್ಷ್ಮೀ ಶಂಕರ ನಾಯಕ್ ಹಾಗೂ ನಗರಸಭಾ ಪರಿಷತ್ ಸದಸ್ಯರ ಉಪಸ್ಥಿತಿಯಲ್ಲಿ ಪಿಎಂ ಸ್ವನಿಧಿ ಯೋಜನೆಯ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಎಂಟು ಪ್ರಯೋಜನ ಕುರಿತು ಚರ್ಚಿಸಲಾಯಿತು ಹಾಗೂ ಸ್ಥಳೀಯರು ಈ ಯೋಜನೆಗಳ ಫಲಾನುಭವಿಗಳನ್ನಾಗಿಸುವಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕೆಂದು ಕರೆ ನೀಡಲಾಯಿತು. ಅಂದು ಮಧ್ಯಾಹ್ನ

## ಯೋಜನೆಯ ಪ್ರಚಾರಕ್ಕೂ ಕೇಂದ್ರದ ನೆರವು




ಕೇಂದ್ರ ಸರ್ಕಾರದ ಯೋಜನೆಗಳ ಪ್ರಚಾರಕ್ಕೂ ಕೇಂದ್ರ ಸರ್ಕಾರವೇ ಹಣ ನೀಡುತ್ತಿದೆ. ಯೋಜನೆಗಳನ್ನು ಪ್ರಚಾರ ಮಾಡಲು ಫ್ಲೆಕ್ಸ್ ಅಳವಡಿಸಲು, ಹೋರ್ಡಿಂಗ್‌ಗಳನ್ನು ಹಾಕಲು, ರೇಡಿಯೋ ಜಿಂಗಲ್ಸ್‌ಗಳನ್ನು ರಚಿಸುವುದೂ ಸೇರಿದಂತೆ ಇನ್ನಿತರ ಪ್ರಚಾರ ಕಾರ್ಯಕ್ಕಾಗಿ ಪ್ರತೀ ಪಟ್ಟಣ ಪಂಚಾಯಿತಿಗಳಿಗೆ ರೂ 5 ಲಕ್ಷ, ಪ್ರತೀ ನಗರ ಸಭೆಗಳಿಗೆ ರೂ. 10 ಲಕ್ಷ ಹಾಗೂ ಪ್ರತೀ ನಗರ ಪಾಲಿಕೆಗಳಿಗೆ ರೂ. 25 ಲಕ್ಷ ಗಳನ್ನು ನೀಡುತ್ತಿದೆ.

ಪದಾಧಿಕಾರಿಗಳು, ಹಿರಿಯ ನಾಯಕರು ಹಾಗೂ ಕಾರ್ಯಕರ್ತರ ಉಪಸ್ಥಿತಿಯಲ್ಲಿ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

**ಚಿಕ್ಕಮಗಳೂರು :** ನಗರದ ಬೀದಿ ಬದಿ ವ್ಯಾಪಾರಿಗಳು, ದಿನಪತ್ರಿಕೆ ಹಾಗೂ ಹಾಲು ವಿತರಕರು, ಕೇಟರಿಂಗ್ ಮತ್ತು ಹೂ ವ್ಯಾಪಾರಿಗಳನ್ನು ಭೇಟಿ ಮಾಡಿ ಪ್ರಧಾನಮಂತ್ರಿ ಸ್ವ-ನಿಧಿಯ ಪ್ರಯೋಜನ ಕುರಿತು ಮಾಹಿತಿ ನೀಡಲಾಯಿತು. ದಿನಪತ್ರಿಕೆ ವಿತರಕರಿಗೆ ಈ ಸಂದರ್ಭದಲ್ಲಿ ಗುರುತಿನ ಚೀಟಿಯನ್ನು ನೀಡಲಾಯಿತು ಹಾಗೂ ಈ ಯೋಜನೆಯನ್ನು ಆ ಕ್ಷಣದಿಂದಲೇ ಕಾರ್ಯಗತಗೊಳಿಸುವುದಾಗಿ ತಿಳಿಸಲಾಯಿತು. ಈ ಸಂದರ್ಭದಲ್ಲಿ ನಗರಸಭಾ ಆಯುಕ್ತರು, ಪರಿಷತ್ ಸದಸ್ಯರು ಹಾಗೂ ಕೌಶಲ್ಯ ಅಭಿವೃದ್ಧಿ ವಿಭಾಗದ ಸದಸ್ಯರು ಉಪಸ್ಥಿತರಿದ್ದರು.



**ಮಂಗಳೂರು ನಗರ :** ನಗರದ ಮೇಯರ್ ಶ್ರೀ ಸುಧೀರ್ ಕಣ್ಣೂರು, ಪರಿಷತ್ ಸದಸ್ಯರು, ರಾಷ್ಟ್ರೀಯ ನಗರ ಜೀವನೋಪಾಯ ನಿಯೋಗದ ಅಧಿಕಾರಿಗಳು, ನಗರಸಭಾ ಸದಸ್ಯರ ಉಪಸ್ಥಿತಿಯಲ್ಲಿ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಪೂರ್ಣ ಮಾಹಿತಿ, ಪ್ರಕ್ರಿಯೆ ಕುರಿತು ಚರ್ಚಿಸಿ ತಕ್ಷಣವೇ ಕಾರ್ಯಗತಗೊಳಿಸುವಂತೆ ತಿಳಿಸಲಾಯಿತು. ನಂತರದಲ್ಲಿ ಮಂಗಳೂರು ನಗರ ಕಾರ್ಯಾಲಯದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಸುದರ್ಶನ್, ಪದಾಧಿಕಾರಿಗಳು, ನಾಯಕರು ಹಾಗೂ ಕಾರ್ಯಕರ್ತರ ಉಪಸ್ಥಿತಿಯಲ್ಲಿ ಪ್ರಧಾನಮಂತ್ರಿ ಸ್ವ-ನಿಧಿ ಹಾಗೂ ಇತರೆ ಎಂಟು ಯೋಜನೆಗಳ ಮಹತ್ವ ಕುರಿತು ಮಾಹಿತಿ ನೀಡಲಾಯಿತು.

**ಉಡುಪಿ :** ಪ್ರಧಾನಮಂತ್ರಿ ಸ್ವ-ನಿಧಿ ಯಿಂದ ಸಮೃದ್ಧಿಯವರೆಗೆ - ಸಂವಾದ ಕಾರ್ಯಕ್ರಮವನ್ನು ಮಾಜಿ ಶಾಸಕರು ಹಾಗೂ ಪಿಎಂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಸುರೇಶ್ ನಾಯಕ್, ಶ್ರೀ ಯಶ್‌ಪಾಲ್ ಸುವರ್ಣ, ಜಿಲ್ಲಾ ಪ್ರಭಾರಿಗಳಾದ ಶ್ರೀ ಉದಯ್‌ಕುಮಾರ್ ಶೆಟ್ಟಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಮಂಡ್ಯ :** ಮಾಜಿ ಶಾಸಕರು ಹಾಗೂ ಹಾಗೂ ಪಿಎಂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್

## ನಂ.1 ಸ್ಥಾನದ ಗುರಿ - ಶ್ರೀ ಎಸ್.ಎ.ರಾಮದಾಸ್

ಕೊಟ್ಟ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವುದೇ ಬದ್ಧತೆಯುಳ್ಳ ಬಿಜೆಪಿ ಕಾರ್ಯಕರ್ತನ ಕರ್ತವ್ಯ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಜಾಗೃತಿ ಮೂಡಿಲು ರಾಜ್ಯ ಸಂಚಾಲಕರಾಗಿ ನಿಯುಕ್ತಿಯಾದ ಮಾಜಿ ಸಚಿವ ಶ್ರೀ ಎಸ್.ಎ.ರಾಮದಾಸ್‌ರವರ ಪ್ರವಾಸ ಕಾರ್ಯಕರ್ತರಿಗೆ ಮಾದರಿ. ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಜನ್ಮ ದಿನದ ಅಂಗವಾಗಿ ಸೆಪ್ಟೆಂಬರ್ 16ರಿಂದ ಅಕ್ಟೋಬರ್ 16 ರವರೆಗೆ ಆಯೋಜಿತವಾದ **'ಜಾಗೃತಿ ಮಾಸ'**ದ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಕೈಗೊಂಡು ಸ್ಥಳೀಯ ಬಿಜೆಪಿ ಪದಾಧಿಕಾರಿಗಳ ಸಹಕಾರ ಹಾಗೂ ಜಿಲ್ಲಾಡಳಿತಗಳ ಸಹಭಾಗಿತ್ವದೊಂದಿಗೆ ಯೋಜನೆಗಳ ಬಗ್ಗೆ ಜಾಗೃತಿ ನಡೆಸುವಲ್ಲಿ ಯಶಸ್ವಿಯಾದರು.



ದೇಶದಲ್ಲಿ ಸ್ವನಿಧಿ ಯೋಜನೆಯ ಸಾಧನೆಯಲ್ಲಿ ರಾಜ್ಯ 6ನೇ ಸ್ಥಾನದಲ್ಲಿತ್ತು. ಶ್ರೀ ಎಸ್.ಎ. ರಾಮದಾಸ್‌ರವರ ಪ್ರವಾಸದ ಜಾಗೃತಿ ಸಭೆಗಳು ಆಯೋಜಿತವಾದ ನಂತರದಲ್ಲಿ ರಾಜ್ಯವು 4 ನೇ ಸ್ಥಾನದಲ್ಲಿದೆ. ಈ ಬಗ್ಗೆ ಕಮಲಪಥದೊಂದಿಗೆ ಮಾತನಾಡಿದ ಶ್ರೀ ರಾಮದಾಸ್‌ರವರು ಜಾಗೃತಿ ಸಮಾವೇಶಗಳಲ್ಲಿ ಫಲಾನುಭವಿಗಳೊಡನೆ ಸಂವಾದ, ಯೋಜನೆಯ ಫಲ ಪಡೆಯಲು ಅಗತ್ಯವಾದ ಮಾಹಿತಿ ಮತ್ತು ನೆರವನ್ನು ನೀಡಲಾಗುತ್ತಿದೆ. ಜೊತೆಗೆ ಸ್ವನಿಧಿ ಸೇರಿದಂತೆ ಕೇಂದ್ರ ಸರಕಾರದ ಯೋಜನೆಗಳಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯ ಕುಟುಂಬವನ್ನು ಸಮೃದ್ಧ ಮಾಡುವ ಬಗ್ಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಬರುವ ಡಿಸೆಂಬರ್ ಒಳಗೆ ರಾಜ್ಯವನ್ನು ಕೇಂದ್ರದ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಕ್ಕೆ ನಂಬರ್ 1 ಸ್ಥಾನ ದೊರಕಿಸಲು ಶ್ರಮಿಸಲಾಗುವುದು ಎಂದು ಹೇಳಿದರು.

ಈಗಾಗಲೇ ಅರ್ಹ ಫಲಾನುಭವಿ ಕುಟುಂಬದ ಪೂರ್ಣ ಮಾಹಿತಿ ಸಂಗ್ರಹ ಪ್ರಕ್ರಿಯೆ ಪ್ರಾರಂಭವಾಗಿದ್ದು, ಸಂಪರ್ಕಕ್ಕಾಗಿ ಜಿಯೋ ಟ್ರ್ಯಾಕಿಂಗ್ ವ್ಯವಸ್ಥೆಯನ್ನೂ ಬಳಸಲಾಗುತ್ತಿದೆ ಎಂದು ಹೇಳಿದರು. ಜಿಲ್ಲಾಡಳಿತದ ಸಹಯೋಗದೊಂದಿಗೆ ಪ್ರತೀ ಸ್ಥಳೀಯ ಸಂಸ್ಥೆಗಳಲ್ಲಿ ಒಬ್ಬ ಸ್ವಯಂಸೇವಕರ ನಿಯುಕ್ತಿಗೊಳಿಸಿದ್ದು, ಇವರು ಫಲಾನುಭವಿಗಳನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸಿ ಅರ್ಜಿ ಸಲ್ಲಿಸಲು ನೆರವಾಗುತ್ತಾರೆ ಎಂದು ಹೇಳಿದರು. ಯೋಜನೆಗಳನ್ನು ಜನರ ಮನೆ ಬಾಗಿಲಿಗೇ ತಲುಪಿಸಲು ಸಂಘಟನೆಯ ಕಾರ್ಯಕರ್ತರು ಮತ್ತು ಸರ್ಕಾರದ ಪ್ರತಿನಿಧಿಗಳ ನಡುವೆ ಸಮನ್ವಯದ ಕಾರ್ಯವೂ ಈ ಸಂದರ್ಭದಲ್ಲಿ ಆಗುತ್ತಿದೆ ಎಂದು ತಿಳಿಸಿದರು.

ಅವರ ನೇತೃತ್ವದಲ್ಲಿ ಪ್ರಧಾನಮಂತ್ರಿ ಸ್ವ-ನಿಧಿ ಯಿಂದ ಸಮೃದ್ಧಿಯವರೆಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರು, ಮಂಡಲ ಅಧ್ಯಕ್ಷರು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಉಪಸ್ಥಿತರಿದ್ದರು.

**ಬೆಂಗಳೂರು ಗ್ರಾಮಾಂತರ :** ಪ್ರಧಾನಮಂತ್ರಿ ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ ಯೋಜನೆ ಕುರಿತು ದೊಡ್ಡಬಳ್ಳಾಪುರದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಧೀರಜ್ ಮುನಿರಾಜು, ಹಿಂದುಳಿದ ಮೋರ್ಚಾಗಳ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬು, ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಕಾಂತರಾಜು, ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣಸ್ವಾಮಿ ಹಾಗೂ ಪಿ.ಎಂ. ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಉಪಸ್ಥಿತರಿದ್ದರು.

**ಬೆಂಗಳೂರು ಮಹಾನಗರ :** ಪ್ರಧಾನಮಂತ್ರಿ ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಕುರಿತು ತರಬೇತಿ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಹಮ್ಮಿಕೊಳ್ಳಾಗಿತ್ತು. ಈ ಸಂದರ್ಭದಲ್ಲಿ ಸಂಸದರಾದ ಶ್ರೀ ಪಿ.ಸಿ. ಮೋಹನ್, ಶಾಸಕರಾದ ಶ್ರೀ ಮುನಿರತ್ನ ನಾಯ್ಡು, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ವಿ. ರಾಜೇಶ್, ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಸುಬ್ಬನರಸಿಂಹ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು, ಜಿಲ್ಲಾಧ್ಯಕ್ಷರಾದ ಶ್ರೀ ಮಂಜುನಾಥ್ ಉಪಸ್ಥಿತರಿದ್ದರು.




**ಬೆಂಗಳೂರು:** ಪ್ರಧಾನಮಂತ್ರಿ ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಉತ್ತರ ಜಿಲ್ಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿಗಳು, ಸಂಸದರಾದ ಶ್ರೀ ಡಿ.ವಿ. ಸದಾನಂದ ಗೌಡ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ವಿ. ರಾಜೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿದ್ದರಾಜು, ಬಿಜೆಪಿ ಒಬಿಸಿ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬು, ಜಿಲ್ಲಾಧ್ಯಕ್ಷರಾದ ಶ್ರೀ ನಾರಾಯಣ್ ಹಾಗೂ ಮಂಡಲದ ಕಾರ್ಯಕರ್ತರು ಉಪಸ್ಥಿತರಿದ್ದರು. ಮಾಜಿ ಶಾಸಕರು ಹಾಗೂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ತರಬೇತಿ ಕುರಿತು ಸಂವಾದವನ್ನು ನಡೆಸಿದರು.

**ಚಿಕ್ಕಬಳ್ಳಾಪುರ :** ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಮಾಜಿ ಶಾಸಕರು ಹಾಗೂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ನಡೆಸಿದರು. ಈ ಸಂದರ್ಭದಲ್ಲಿ ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬು, ಜಿಲ್ಲಾಧ್ಯಕ್ಷರಾದ ಶ್ರೀ ರಾಮಲಿಂಗಪ್ಪ, ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಕಾಂತರಾಜು ಹಾಗೂ 300ಕ್ಕೂ ಹೆಚ್ಚು ಯೋಜನಾ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕೋಲಾರ :** ಪ್ರಧಾನಮಂತ್ರಿ ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಜಾಗೃತಿ ಮೂಡಿಸಲು ಜಿಲ್ಲೆಯಲ್ಲಿ ಮಾಜಿ ಶಾಸಕರು ಹಾಗೂ ಸ್ವನಿಧಿ ಯೋಜನೆಯ ಜಾಗೃತಿ ಮೂಡಿಸಲು ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ತರಬೇತಿಯನ್ನು ನೀಡಿದರು. ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬು,

## ಸವಾಲು, ಅಜ್ಜಿಯ ಕಣ್ಣೀರು




ಶ್ರೀ ರಾಮದಾಸ್‌ರವರ ಪ್ರವಾಸದ ವೇಳೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಜಿಲ್ಲಾಡಳಿತದ ಸಂಪೂರ್ಣ ಸಹಕಾರ ನೀಡಿದ್ದು ವಿಶೇಷ. ಆದರೆ ಇದಕ್ಕೆ ಅಪವಾದವೆಂಬಂತೆ ದಾವಣಗೆರೆ ಜಿಲ್ಲೆಯಲ್ಲಿ ಸ್ಥಳೀಯ ಸಚಿವರ ಒತ್ತಾಯದ ಮೇರೆಗೆ ಜಿಲ್ಲಾಧಿಕಾರಿಗಳು ನಿರ್ಧರಿತವಾಗಿದ್ದ ಸಭೆಯನ್ನೇ ರದ್ದು ಮಾಡಿದರು. ಇದನ್ನು ಸವಾಲೆಂಬಂತೆ ತೆಗೆದುಕೊಂಡ ಶ್ರೀ ರಾಮದಾಸ್‌ರವರು ಫಲಾನುಭವಿಗಳ ಮೊಹಲ್ಲಾಗಳಿಗೇ ಹೋಗಿ ಸಭೆಗಳನ್ನು ಆಯೋಜಿಸಿದರು. ಸರಕಾರದ ಯೋಜನೆಗಳು ಫಲಾನುಭವಿಗಳಿರುವಲ್ಲಿಗೇ ಬರುವಂತಾಗಿದ್ದು ಅಲ್ಲಿನ ಜನರ ಸಂತಸಕ್ಕೆ ಕಾರಣವಾಯಿತು. ಈ ಸಂದರ್ಭದಲ್ಲಿ ಸರ್ಕಾರದ ಯೋಜನೆಯನ್ನು ನಾವಿರುವಲ್ಲಿಗೇ ಬಂದು ತಲುಪಿಸಲು ಪ್ರಧಾನಿ ನೇರವಾಗಿ ಪ್ರತಿನಿಧಿಯೊಬ್ಬರನ್ನು ಕಳಿಸಿರುವುದನ್ನು ಉಲ್ಲೇಖಿಸಿ ಅಜ್ಜಿಯೊಬ್ಬರು ಆನಂದಿಂದ ಕಣ್ಣೀರಿಟ್ಟ ಪ್ರಸಂಗವೂ ಜರುಗಿತು.

ಜಿಲ್ಲಾಧ್ಯಕ್ಷರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಚಿತ್ರದುರ್ಗ :** ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರ ನೇತೃತ್ವದಲ್ಲಿ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ತಿಪ್ಪೇಸ್ವಾಮಿ, ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬು ಹಾಗೂ 300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಂಡಲ ಹಾಗೂ ಜಿಲ್ಲಾ ಕಾರ್ಯಕರ್ತರು ಭಾಗವಹಿಸಿದ್ದರು.



**ತುಮಕೂರು :** ಜಿಲ್ಲೆಯಲ್ಲಿ ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆಯ ಫಲಾನುಭವಿಗಳ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಬೀದಿ ಬದಿ ವ್ಯಾಪಾರಿಗಳು, ದಿನಪತ್ರಿಕೆ ಮತ್ತು ಹಾಲು ವಿತರಕರೊಂದಿಗೆ ಸಂವಾದವನ್ನು ನಡೆಸಿದರು. ಈ ವರೆಗೆ ಈ ಯೋಜನೆಯ ಪ್ರಯೋಜನವು ಶೇ 78ರಷ್ಟು ತಲುಪಿದ್ದು ಮುಂಬರುವ ದಿನಗಳಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯವರೆಗೂ ತಲುಪಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲೆಯ ಸಂಸದರಾದ ಶ್ರೀ ಬಸವರಾಜ್, ಶಾಸಕರಾದ ಶ್ರೀ ಗಣೇಶ್, ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬು, ಜಿಲ್ಲಾಧ್ಯಕ್ಷರಾದ ಶ್ರೀ ಸುರೇಶ್‌ಗೌಡ ಹಾಗೂ 500ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕಲಬುರ್ಗಿ :** ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಜಾಗೃತಿ ಹಾಗೂ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಸದರು, ಶಾಸಕರು, ಮಂಡಲ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಆತ್ಮನಿರ್ಭರ ಭಾರತ ಯೋಜನೆಯಡಿ ಮಹಿಳೆಯರು ಕೃತಕ ಬಂಗಾರದ ಬಳೆ ತಯಾರಿಸಿ ರಫ್ತು ಮಾಡುವ ಸ್ಥಳಕ್ಕೆ ಮಾಜಿ ಶಾಸಕರು ಹಾಗೂ ಪಿಎಂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಭೇಟಿ ನೀಡಿದರು. ಶ್ರೀ ರಾಮದಾಸ್ ಅವರು ಮಾತನಾಡಿ ಬೀದಿ ಬದಿ



ವ್ಯಾಪಾರಿಗಳು ಪ್ರಸ್ತುತ ಶೇ 68ರಷ್ಟು ಡಿಜಿಟಲ್ ವಹಿವಾಟನ್ನು ನಡೆಸುತ್ತಿದ್ದು ಮುಂಬರುವ ದಿನಗಳಲ್ಲಿ ಶೇ 100 ರಷ್ಟು ತಲುಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು.

**ಯಾದಗಿರಿ :** ಜಿಲ್ಲೆಯಲ್ಲಿ ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಜಾಗೃತಿ ಹಾಗೂ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಅಕ್ಕಸಾಲಿಗರ ಕಾರ್ಯಸ್ಥಳಕ್ಕೆ ಭೇಟಿ ನೀಡಲಾಯಿತು. ಯೋಜನೆಯ ಫಲಾನುಭವಿಗಳೊಂದಿಗೆ ಚರ್ಚೆ ಹಾಗೂ ದಿನಪತ್ರಿಕೆ ಮತ್ತು ಹಾಲು ವಿತರಕರು ಹಾಗೂ ಕೇಟರಿಂಗ್ ಸರ್ವೀಸ್ ಮಾಡುವವರಿಗೆ ಯೋಜನೆಯ ಪ್ರಯೋಜನ ಹಾಗೂ ನೋಂದಣಿ ಪ್ರಕ್ರಿಯೆಯ ಕುರಿತು ಮಾಹಿತಿ ನೀಡಲಾಯಿತು.

**ರಾಯಚೂರು :** ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮರಗೆಲಸ ಮಾಡುವವರ ಕಾರ್ಯಸ್ಥಳಕ್ಕೆ ಭೇಟಿ ನೀಡಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ 'ಸಬ್ ಕಾ ಸಾಥ್ – ಸಬ್ ಕಾ ವಿಕಾಸ್' ಕನಸಿನ ಯೋಜನೆಯ ಕುರಿತು ಮಾಹಿತಿ ನೀಡಲಾಯಿತು.



ಬಿದಿರಿನ ಬುಟ್ಟಿಗಳನ್ನು ತಯಾರಿಸುವ ಶ್ರೀಮತಿ ಭಾಗ್ಯಮ್ಮ ಅವರ ಕಾರ್ಯಸ್ಥಳಕ್ಕೆ ಭೇಟಿ ನೀಡಲಾಯಿತು. ಜಿ–20 ಶೃಂಗಸಭೆಯಲ್ಲಿ ಆಯೋಜಿಸಿದ್ದ ಪ್ರದರ್ಶಿನಿಯಲ್ಲಿ ಭಾಗವಹಿಸಿದ್ದ ಶ್ರೀಮತಿ ಭಾಗ್ಯಮ್ಮ ಅವರಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು.

**ವಿಜಯನಗರ :** ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ಶಾಸಕರು ಹಾಗೂ

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಯೋಜನೆಯ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಂಸದರಾದ ಶ್ರೀ ದೇವೇಂದ್ರಪ್ಪ, ಮಾಜಿ ಶಾಸಕರುಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕೊಪ್ಪಳ :** ವಿಶ್ವಕರ್ಮ ಮತ್ತು ಪಿ.ಎಂ. ಸ್ವನಿಧಿ ಇಂದ ಸಮೃದ್ಧಿ ಜಾಗೃತಿ ಯೋಜನೆ ಕುರಿತು ಆಯೋಜಿಸಲಾದ ಫಲಾನುಭವಿಗಳ ಸಭೆಯಲ್ಲಿ 1,200 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



ಈ ಯೋಜನೆಯ ಪ್ರಯೋಜನವನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಯ ವರೆಗೂ ತಲುಪಿಸುವುದಾಗಿ ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ತಿಳಿಸಿದರು.

**ಬಳ್ಳಾರಿ :** ವಿಶ್ವಕರ್ಮ ಮತ್ತು ಪಿಎಂ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಯೋಜನೆಯ ಮಾಹಿತಿ ನೀಡಿ ಚರ್ಚಿಸಿದರು. ಸಂಸದರಾದ ಶ್ರೀ ದೇವೇಂದ್ರಪ್ಪ, ವಿಧಾನಪರಿಷತ್ ಸದಸ್ಯರಾದ ಶ್ರೀ ವೈ. ಸತೀಶ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ದಾವಣಗೆರೆ :** ವಿಶ್ವಕರ್ಮ ಮತ್ತು ಪ್ರಧಾನಮಂತ್ರಿ ಸ್ವನಿಧಿ ಇಂದ ಸಮೃದ್ಧಿಯವರೆಗೆ – ಯೋಜನೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸೆಣಬಿನ ಬ್ಯಾಗ್ ತಯಾರಿಸುವ ಗುಡಿ ಕೈಗಾರಿಕೆಗೆ ಭೇಟಿ ನೀಡಿ ಯೋಜನೆಯ ಮಾಹಿತಿ ನೀಡಲಾಯಿತು. ಅಲ್ಲಿ ಕೆಲಸ ಮಾಡುವವರು ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಈ ಯೋಜನೆಯನ್ನು ಪ್ರಶಂಸಿಸಿದರು.





ಇದೇ ವೇಳೆ ದಿನಪತ್ರಿಕೆ ಮತ್ತು ಹಾಲು ವಿತರಕರು, ಬೀದಿ ಬದಿ ವ್ಯಾಪಾರಿಗಳು, ಹೂ ವ್ಯಾಪಾರಿಗಳು ಹಾಗೂ ಚಹಾ ಅಂಗಡಿಗಳಿಗೆ ಭೇಟಿ ನೀಡಿ ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಯೋಜನೆಯ ಕುರಿತು ತಿಳಿಸಿದರು. ಈ ಸಂದರ್ಭದಲ್ಲಿ ಸಂಸದರು, ಶಾಸಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ರಾಮನಗರ :** ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಕಾರ್ಮಿಕರು ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ಈ ಯೋಜನೆಯ ಪ್ರಯೋಜನ ಯಾವರೀತಿಯಲ್ಲಿ ಆಗಲಿದೆ ಎಂದು ಕಾರ್ಯಕರ್ತರಿಗೆ ತಿಳಿಸಿದರು ಹಾಗೂ ಈ ಯೋಜನೆಯನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿಯ ವರೆಗೂ ಹೇಗೆ ತಲುಪಿಸಬೇಕು ಎಂದು ಚರ್ಚಿಸಿದರು. ಈ ಸಂದರ್ಭದಲ್ಲಿ ರಾಮನಗರ ಜಿಲ್ಲಾಧ್ಯಕ್ಷರಾದ ಶ್ರೀ ದೇವರಾಜ್, ನಗರಸಭೆ, ಪುರಸಭೆ ಸದಸ್ಯರು, ಬಿಜೆಪಿ ಕಾರ್ಯಾಲಯದ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು, ಮಂಡಲ ಅಧ್ಯಕ್ಷರು, ಮೋರ್ಚಾ ಪದಾಧಿಕಾರಿಗಳು, ನಾಯಕರು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಕೊಡಗು :** ಪಿಎಂ ಸ್ವನಿಧಿ ಯೋಜನೆಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಜಿ ಶಾಸಕರು ಹಾಗೂ ಪಿಎಂ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಕುಶಾಲನಗರದ ಕರ್ನಾಟಕ ಒನ್ ಕಛೇರಿಗೆ ಭೇಟಿ ನೀಡಿದಾಗ ಅಲ್ಲಿನ ಸಿಬ್ಬಂದಿಗಳು ಯೋಜನೆಯ ಕುರಿತಾದ ಸರ್ವರ್ ಸಮಸ್ಯೆಯನ್ನು ತಿಳಿಸಿದರು. ಶ್ರೀ ರಾಮದಾಸ್ ಅವರು ತಕ್ಷಣವೇ ಸಮಸ್ಯೆಯನ್ನು ಸಂಬಂಧಪಟ್ಟವರಿಗೆ ತಿಳಿಸಿ ಬಗೆಹರಿಸಿದರು.




**ಹಾಸನ :** ಪಿಎಂ ಸ್ವನಿಧಿ ಯೋಜನೆಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾಜಿ ಶಾಸಕರು ಹಾಗೂ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ರಾಜ್ಯ ಸಂಚಾಲಕರಾದ ಶ್ರೀ ಎಸ್.ಎ. ರಾಮದಾಸ್ ಅವರು ಜಿಲ್ಲಾಧ್ಯಕ್ಷರಾದ ಶ್ರೀ ಹೆಚ್.ಕೆ. ಸುರೇಶ್, ಶಾಸಕರಾದ ಶ್ರೀ ಮಂಜುನಾಥ, ಕಾರ್ಯಾಲಯ ಹಾಗೂ ಮೋರ್ಚಾ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು, ಮಂಡಲ ಅಧ್ಯಕ್ಷರು ಹಾಗೂ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿದರು.








ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 28 ಸ್ಥಾನಗಳನ್ನು ಗೆಲ್ಲುವ ಗುರಿ ಹಾಕಿಕೊಳ್ಳುತ್ತೇವೆ. ಬಿ.ವೈ. ವಿಜಯೇಂದ್ರ ಮತ್ತು ನಾನು ಜೋಡೆತ್ತುಗಳಾಗಿ ಕೆಲಸ ಮಾಡುವ ಮೂಲಕ ನಮಗೆ ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸುತ್ತೇವೆ.

**– ಆರ್. ಅಶೋಕ , ವಿಪಕ್ಷ ನಾಯಕರು**

# ಬಿಜೆಪಿ ಶಾಸಕಾಂಗ ಸಭೆಯಲ್ಲಿ ವಿಪಕ್ಷ ನಾಯಕರಾಗಿ ಶ್ರೀ ಆರ್. ಅಶೋಕ

**ರಾ**ಜ್ಯ ಬಿಜೆಪಿಗೆ ನೂತನ ರಾಜ್ಯಾಧ್ಯಕ್ಷರಾಗಿ ಶ್ರೀ ಬಿ.ವೈ. ವಿಜಯೇಂದ್ರ ಅವರ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ವಿಪಕ್ಷ ನಾಯಕರ ಆಯ್ಕೆ ನಡೆದಿರುವುದು ಪಕ್ಷಕ್ಕೆ ಶಕ್ತಿ ಬಂದಿದ್ದು, ಇದು ಪಕ್ಷದ ಕಾರ್ಯಕರ್ತರಲ್ಲಿಯೂ ಉತ್ಸಾಹ ಮೂಡಿಸಿದೆ. ಕರ್ನಾಟಕ ವಿಧಾನಸಭೆ ವಿಪಕ್ಷ ನಾಯಕನನ್ನಾಗಿ ಪದ್ಮನಾಭನಗರದ ಶಾಸಕರಾದ ಶ್ರೀ ಆರ್. ಅಶೋಕ ಅವರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ಐಟಿಸಿ ಗಾರ್ಡೇನಿಯಾ ಹೋಟೇಲ್‌ನಲ್ಲಿ ಬಿಜೆಪಿಯ ನೂತನ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ವಿಪಕ್ಷದ ನಾಯಕರ ಆಯ್ಕೆ ನಡೆದಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರು ವಿಪಕ್ಷ ನಾಯಕರ ಸ್ಥಾನಕ್ಕೆ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಆರ್. ಅಶೋಕ ರವರ ಹೆಸರನ್ನು ಸೂಚಿಸಿದರು. ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ಅನುಮೋದಿಸಿದರು. ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರು ಶ್ರೀ ಆರ್. ಅಶೋಕ ರವರ ಹೆಸರನ್ನು ಘೋಷಿಸಿದರು.

**ರಾಜ್ಯದ 28 ಲೋಕಸಭಾ ಸ್ಥಾನಗಳಲ್ಲೂ ಗೆಲುವು:** ರಾಜ್ಯದ ಎಲ್ಲ 28 ಲೋಕಸಭಾ ಸ್ಥಾನಗಳಲ್ಲೂ ಬಿಜೆಪಿ ಗೆಲುವು ಸಾಧಿಸಲು ಶ್ರಮಿಸುವುದಾಗಿ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದ ಮಾಜಿ ಸಚಿವ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕರಾದ ಶ್ರೀ ಆರ್. ಅಶೋಕ ರವರು ತಿಳಿಸಿದರು. ಸಭೆಯ ನಂತರ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ನಮಗಿಂದು ಪ್ರಧಾನಿ ಶ್ರೀ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ಹಾಗೂ ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ರವರಂತಹ ಪ್ರಬಲ ನಾಯಕತ್ವವಿದೆ ಎಂದು ಹೇಳಿದರು. ಕಳೆದ 6 ತಿಂಗಳ ಕಾಂಗ್ರೆಸ್ ದುರಾಡಳಿತ, ಭ್ರಷ್ಟಾಚಾರ, ಸ್ವತಃ ಮುಖ್ಯಮಂತ್ರಿಗಳ ಮಗ ವರ್ಗಾವಣೆ ದಂಧೆಯಲ್ಲಿ ಪಾಲ್ಗೊಂಡಿದ್ದನ್ನು ಕಂಡು ಜನರೂ ಬೇಸತ್ತಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ, ಕನಕಪುರ ಸೇರಿದಂತೆ ರಾಜ್ಯದ 28ಕ್ಕೆ 28 ಸ್ಥಾನಗಳಲ್ಲಿ ನಾವು ಗೆಲ್ಲುತ್ತೇವೆ ಎಂದು ತಿಳಿಸಿದರು.

ಕಳೆದ ವಿಧಾನಸಭೆಯಲ್ಲಿ 66 ಶಾಸಕರು ಕೂಡ ವಿರೋಧ ಪಕ್ಷದ ನಾಯಕರಿಲ್ಲದೆ ಸಮರ್ಥ ವಿಪಕ್ಷವಾಗಿ ಕೆಲಸ ನಿರ್ವಹಿಸಿ ಪ್ರಬಲವಾದ ಹೋರಾಟವನ್ನು ಬಿಜೆಪಿ ಮಾಡಿದೆ ಎಂದು ಹೇಳಿದರು. ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ನಿರಂತರ ಹೋರಾಟ ಮಾಡುವುದಾಗಿ ತಿಳಿಸಿದ ವಿರೋಧ ಪಕ್ಷದ ನಾಯಕ ಶ್ರೀ ಆರ್. ಅಶೋಕ, ಪಕ್ಷ ನನಗೆ ಸ್ಥಾನ ಕೊಟ್ಟಿದೆ, ಪ್ರೀತಿ ವಿಶ್ವಾಸದಿಂದ ಸೋಲಿನ ಭಯ ಬಿಟ್ಟು, ಮತ್ತೆ ಸೂರ್ಯ ಉದಯಿಸುವ ಮತ್ತು ಕಮಲ ಅರಳುವ ವಿಶ್ವಾಸದೊಂದಿಗೆ ಮುನ್ನಡೆಯುವುದಾಗಿ ತಿಳಿಸಿದರು. ಲೋಕಸಭೆ, ಜಿಲ್ಲಾ ಪಂಚಾಯಿತಿ, ಬಿಬಿಎಂಪಿ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ತರುವ ಸವಾಲು ನಮ್ಮ ಮುಂದಿದ್ದು, ಈ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗೋಣ ಎಂದು ತಿಳಿಸಿದರು.



# ಬರ ಅಧ್ಯಯನ ಪ್ರವಾಸ

**ನಾವು ನಿಯಂತ್ರಿಸಲು ಸಾಧ್ಯವಾಗದ ವಿದ್ಯಮಾನಗಳು ಪ್ರಪಂಚದಾದ್ಯಂತ ಬಹಳಷ್ಟು ನಡೆಯುತ್ತದೆ. ನಾವು ಭೂಕಂಪಗಳನ್ನು ತಡೆಯಲು ಸಾಧ್ಯವಿಲ್ಲ, ಬರಗಾಲವನ್ನು ತಡೆಯಲು ಸಾಧ್ಯವಿಲ್ಲ ಮತ್ತು ಎಲ್ಲಾ ಸಂಘರ್ಷಗಳನ್ನು ನಾವು ತಡೆಯಲು ಸಾಧ್ಯವಿಲ್ಲ. ಆದರೆ ಹಸಿದವರು, ನಿರಾಶ್ರಿತರು ಮತ್ತು ರೋಗಿಗಳು ಎಲ್ಲಿದ್ದಾರೆ ಎಂದು ನಮಗೆ ತಿಳಿದಾಗ, ನಾವು ಧಾವಿಸಿ ಸಹಾಯ ಮಾಡಬಹುದು. ಹೀಗೆ ಒಬ್ಬ ತತ್ವಜ್ಞಾನಿ ಹೇಳುತ್ತಾರೆ.**




**ರತನ್ ರಮೇಶ್ ಪೂಜಾರಿ**
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


ಕರ್ನಾಟಕ ರಾಜ್ಯ ಈ ಬಾರಿ ಹೆಚ್ಚಿನ ಪ್ರಮಾಣದ ಬರಗಾಲವನ್ನು ಕಂಡಿತು. ಸರ್ಕಾರ ರಾಜ್ಯದ ಸುಮಾರು 28 ಜಿಲ್ಲೆ ಹಾಗೂ 223 ತಾಲೂಕುಗಳನ್ನು ಬರಗಾಲ ಪೀಡಿತ ತಾಲೂಕು ಎಂದು ಘೋಷಿಸಿತು. ಅದರಲ್ಲಿ 196 ತಾಲೂಕುಗಳಲ್ಲಿ ತೀವ್ರ ಬರ ಹಾಗೂ 27 ತಾಲೂಕುಗಳಲ್ಲಿ ಸಾಧಾರಣ ಬರ ಬಂದಿದೆ ಎಂದು ಘೋಷಿಸಿದ್ದಾರೆ. ಸರಕಾರವೇ ನೀಡಿದ ಮಾಹಿತಿಯಂತೆ ಆಗಸ್ಟ್ ತಿಂಗಳಲ್ಲಿ ಕಳೆದ 120 ವರ್ಷಗಳಲ್ಲಿ ಅತಿ ಕಡಿಮೆ ಮಳೆ ಬಿದ್ದಿದೆಯಂತೆ. ಈ ಪ್ರಮಾಣದ ಕಡಿಮೆ ಮಳೆ ಪಡೆದು ರಾಜ್ಯ ಹೆಚ್ಚಿನ ಬರಗಾಲಕ್ಕೆ ತುತ್ತಾಯಿತು.

ಕುಡಿಯುವ ನೀರಿಗೆ ತೊಂದರೆ, ಅಪಾರ ಪ್ರಮಾಣದ ಬೆಳೆ ಹಾನಿ, ಪಶುಗಳ ಮೇವಿಗೆ ಬರ ಹೀಗೆ ಹಲವು ಸಮಸ್ಯೆಗಳಿಗೆ ರಾಜ್ಯದ ವಿವಿಧ ಭಾಗ ತುತ್ತಾಯಿತು. ಇಂತಹ ಪರಿಸ್ಥಿತಿಯಲ್ಲಿ ಸಮರ್ಪಕವಾಗಿ ಹಾಗೂ ಸಕಾರಾತ್ಮಕವಾಗಿ ಸ್ಪಂದಿಸಬೇಕಾಗಿದ್ದ ಕರ್ನಾಟಕದ ಕಾಂಗ್ರೆಸ್ ಪಕ್ಷದ ಸರ್ಕಾರ ಸರಿಯಾಗಿ ಸ್ಪಂದಿಸದೆ ಇರುವುದು ಕೂಡ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಒಂದು ಸಮರ್ಥ ಹಾಗೂ ರಚನಾತ್ಮಕ ವಿರೋಧ ಪಕ್ಷವಾಗಿ ಭಾರತೀಯ ಜನತಾ ಪಕ್ಷದಿಂದ ಕರ್ನಾಟಕದಲ್ಲಿ ರಾಜ್ಯ ಸರ್ಕಾರದ ಬರ ನಿರ್ವಹಣೆಯ ವೈಫಲ್ಯವನ್ನು ಎತ್ತಿ ತೋರಿಸುವ ಕೆಲಸವನ್ನು ಮಾಡಲಾಯಿತು.

ಬರದಿಂದಾದ ಹಾನಿಯನ್ನು ಸರ್ಕಾರ ಸಮರ್ಪಕವಾಗಿ ಅಧ್ಯಯನ ಮಾಡದಿದ್ದರೂ ಕೂಡ ವಿರೋಧ ಪಕ್ಷವಾಗಿ ಭಾರತೀಯ ಜನತಾ ಪಕ್ಷ ಅಧ್ಯಯನ ಕೈಗೊಂಡು ಜನರ ಬವಣೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡುವ ಕೆಲಸವನ್ನು ಮಾಡಿತು. ಈ ಕುರಿತು ಭಾರತೀಯ ಜನತಾ ಪಕ್ಷದ ವಿರೋಧ ಪಕ್ಷ ನಾಯಕರಾದ ಮಾನ್ಯ ಶ್ರೀ ಆರ್. ಅಶೋಕ್ ರವರು ರಾಜ್ಯಾದ್ಯಂತ ಬರ ಅಧ್ಯಯನ



ಪ್ರವಾಸವನ್ನು ಕೈಗೊಂಡರು.ನವೆಂಬರ್ 21 ರಂದು ಕಲ್ಬುರ್ಗಿ ಜಿಲ್ಲೆಯ ಬರ ಅಧ್ಯಯನ ಪ್ರವಾಸ ಕೈಗೊಂಡರು. ಕಲಬುರಗಿ ಗ್ರಾಮೀಣ ಮತಕ್ಷೇತ್ರದ ಶ್ರೀನಿವಾಸ ಸರಡಗಿ ಗ್ರಾಮದ ಮೂಕ ತಾಂಡದ ತೊಗರಿ ಬೆಳೆಯುವ ಪ್ರದೇಶದಲ್ಲಿ ಬರ ಪರಿಸ್ಥಿತಿ ವೀಕ್ಷಣೆ ಮಾಡಿ, ರೈತರೊಂದಿಗೆ ಚರ್ಚೆ ನಡೆಸಿ, ಸಾಂತ್ವನ ಹೇಳಿದರು. ಕಲಬುರ್ಗಿಯ ಮುಖ್ಯ ಬೆಳೆ ತೊಗರಿ ಆಗಿದ್ದು ಸುಮಾರು ಎರಡು ಲಕ್ಷ ಹೆಕ್ಟೇರ್ ಪ್ರದೇಶದ ತೊಗರಿ ಬೆಳೆ ಹಾನಿಯಾಗಿದೆ. ಸಾಮಾನ್ಯವಾಗಿ 35 ಲಕ್ಷದಿಂದ 45 ಲಕ್ಷ ಕ್ವಿಂಟಲ್ ಬರುತ್ತಿದ್ದ ತೊಗರಿ ಇಳುವರಿ ಈ ಬಾರಿ 7 ರಿಂದ 8 ಲಕ್ಷ ಕ್ವಿಂಟಲ್ ಗೆ ಇಳಿದಿದೆ ಎಂದರೆ ಬರದ ಕೆಟ್ಟ ಪರಿಣಾಮವನ್ನು ಊಹಿಸಬಹುದು. ಸಾಮಾನ್ಯವಾಗಿ 6 ರಿಂದ 7 ಅಡಿ ಬರುತ್ತಿದ್ದ ತೊಗರಿ ಬೆಳೆ ಬರದ ಪರಿಣಾಮವಾಗಿ ಕೇವಲ 1.5 ಯಿಂದ 2 ಅಡಿ ಬಂದಿದೆ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಂಡರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಬಸವರಾಜ್ ಮತ್ತಿಮೂಡ, ಶ್ರೀ ಶರಣು ಸಲಗಾರ, ಮುಖಂಡರುಗಳು ಹಾಗೂ ಇತರರು ಜೊತೆಯಲ್ಲಿದ್ದರು. ನಂತರ ಅಳಂದದ ಕಡಗಂಚಿ ಗ್ರಾಮದಲ್ಲಿ ಬರ ವೀಕ್ಷಣೆ ಮಾಡಿ, ರೈತರೊಂದಿಗೆ ಸಂವಾದ ನಡೆಸಿ, ಧೈರ್ಯ ತುಂಬುವ ಕೆಲಸವನ್ನು ಮಾಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಶಾಸಕರುಗಳು, ಮುಖಂಡರು ಹಾಗೂ ಇತರರು ಜೊತೆಯಲ್ಲಿದ್ದರು.



ನವೆಂಬರ್ 22ರಂದು ಕರ್ನಾಟಕದ ತುತ್ತ ತುದಿಯ ಜಿಲ್ಲೆಯಾದ ಬೀದರ್ ಜಿಲ್ಲೆಯಲ್ಲಿ ಬರ ಅಧ್ಯಯನ ಪ್ರವಾಸ ಕೈಗೊಂಡರು. ಬೀದರ್ ಜಿಲ್ಲೆಯ ಚಾಂಬೋಳ ಗ್ರಾಮದಲ್ಲಿ ವಿಸ್ತೃತ ಬರ ವೀಕ್ಷಣೆ ನಡೆಸಿ, ರೈತರೊಂದಿಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಶಾಸಕರು, ಮುಖಂಡರು ಹಾಗೂ ಕಾರ್ಯಕರ್ತರು ಜೊತೆಯಲ್ಲಿದ್ದರು.ದಿನಾಂಕ 26ರಂದು ಮಧ್ಯ ಕರ್ನಾಟಕದ ಬರಪೀಡಿತ ಜಿಲ್ಲೆಗಳಾದ ತುಮಕೂರು, ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಬರ ಅಧ್ಯಯನ ಪ್ರವಾಸ ಕೈಗೊಂಡರು.ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ದೇವರಹಳ್ಳಿಯಲ್ಲಿ ಬರದಿಂದಾದ ಬೆಳೆಹಾನಿ ವೀಕ್ಷಣೆ ಮಾಡಿ, ರೈತರೊಂದಿಗೆ ಮಾತುಕತೆ ನಡೆಸಿ, ಧೈರ್ಯ ಹೇಳಿದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಜ್ಯೋತಿ ಗಣೇಶ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಚಿದಾನಂದ್ ಹಾಗೂ ಶ್ರೀ ಹೆಬ್ಬಾಕ ರವಿಶಂಕರ್ ಇತರರು ಜೊತೆಯಲ್ಲಿದ್ದರು.



ತದನಂತರ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಬುಡ್ನಹಟ್ಟಿಯಲ್ಲಿ ಬರದಿಂದ ಉಂಟಾದ ಬೆಳೆಹಾನಿ ವೀಕ್ಷಣೆ ಮಾಡಿ, ರೈತರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ಜಿ. ಹೆಚ್. ತಿಪ್ಪಾರೆಡ್ಡಿ ಹಾಗೂ ಮುಖಂಡರುಗಳು ಜೊತೆಯಲ್ಲಿದ್ದರು. ಬರದ ಪರಿಣಾಮವಾಗಿ 40 ರಿಂದ 50 ಕಾಳು ಬರುತ್ತಿದ್ದ ಶೇಂಗಾ ಬೆಳೆಯಲ್ಲಿ ಕೇವಲ 4 ರಿಂದ 5 ಕಾಳುಗಳು ಬರುತ್ತಿವೆ. ಈ ಪ್ರದೇಶದ ಶೇಂಗಾ ಬೆಳೆಗಾರರು ಶೇಂಗಾ ಬೆಳೆಯನ್ನು ತಮ್ಮ ಮನೆತನದ ಪ್ರತಿಷ್ಠೆಯ ಬೆಳೆಯಾಗಿ ಪರಿಗಣಿಸಿರುವುದರಿಂದ ಸರ್ಕಾರ ಈ ಕುರಿತು ಗಮನಹರಿಸಬೇಕು. ಶೇಂಗಾ ಅಭಿವೃದ್ಧಿ ಮಂಡಳಿಯನ್ನು ಕೂಡ ಸ್ಥಾಪಿಸಬೇಕು ಎಂಬ ವಿಚಾರ ಬರ ಅಧ್ಯಯನದ ಮೂಲಕ ಪ್ರತಿಪಾದಿಸಲಾಯಿತು.



ಅಲ್ಲಿಂದ ನೇರ ಬಳ್ಳಾರಿ ಜಿಲ್ಲೆಯ ಪ್ರವಾಸಗೈದು ಜಿಲ್ಲೆಯ ಸಂಡೂರು ತಾಲ್ಲೂಕಿನ ಅಂತಾಪುರ ಗ್ರಾಮದಲ್ಲಿ ಬರಗಾಲದಿಂದ ಬೆಳೆ ಹಾನಿ ಪ್ರದೇಶಗಳಿಗೆ ಭೇಟಿ, ರೈತರ ಅಹವಾಲು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಹಾಗೂ ರೈತರು ಜೊತೆಯಲ್ಲಿದ್ದರು. ಜಿಲ್ಲೆಯಲ್ಲಿ 1,73,897 ಹೆಕ್ಟೇರ್ ಪ್ರದೇಶದಲ್ಲಿ

ಕೃಷಿ ಚಟುವಟಿಕೆಯ ಗುರಿಯನ್ನು ಹೊಂದಲಾಗಿತ್ತು. ಇದರಲ್ಲಿ 64,593 ಹೆಕ್ಟೇರ್ ಪ್ರದೇಶ ಮಳೆಯಾಶ್ರಿತವಾಗಿದ್ದು ಜೋಳ, ಮೆಕ್ಕೆಜೋಳ, ಶೇಂಗಾ, ಸಜ್ಜೆ, ತೊಗರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಲಾಗಿತ್ತು. ಮುಂಗಾರು ಅಭಾವದಿಂದಾಗಿ ಈ ಎಲ್ಲಾ ಬೆಳೆಗಳು ಒಣಗುವ ಹಂತ ತಲುಪಿದೆ. ಎಕರೆಗೆ 15 ರಿಂದ 19 ಕ್ವಿಂಟಲ್ ಬರುತ್ತಿದ್ದ ಮೆಕ್ಕೆಜೋಳದ ಇಳುವರಿ 4 ರಿಂದ 5 ಕ್ವಿಂಟಲ್ ಬರುತ್ತಿದೆ. ನೀರಿನ ಮಟ್ಟ ಕುಸಿದಿರುವುದರಿಂದ ಹಸಿಮೆಣಸಿನಕಾಯಿ ಬೆಳೆದ ರೈತರ ಬೆಳೆ ಸಂಪೂರ್ಣವಾಗಿ ವಿಫಲವಾಗಿದೆ. ಸಂಡೂರು ತಾಲೂಕಿನಲ್ಲಿ ಜೋಳದ ಬೆಳೆ ಸಂಪೂರ್ಣ ನಾಶವಾಗಿರುತ್ತದೆ. ಸರ್ಕಾರವು ಮಧ್ಯರಾತ್ರಿ ಎರಡು ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿರುವ ಕಾರಣ ಹೊಲಗಳಿಗೆ ತೆರಳುವ ರೈತರು ಹಾವು ಕಡಿತ, ಕರಡಿ, ಚಿರತೆ ದಾಳಿಗಳಿಗೆ ಒಳಗಾಗುತ್ತಿರುವುದು ಕಂಡುಬಂತು.



ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಚಿಕ್ಕಪಟ್ಟಣಗೆರೆ ಗ್ರಾಮದಲ್ಲಿ ನವೆಂಬರ್ 30ರ ದಿನ ಬರದಿಂದ ಉಂಟಾದ ಬೆಳೆ ಹಾನಿ ಪರಿಶೀಲನೆ ಮಾಡಿ, ರೈತರ ಅಹವಾಲು ಆಲಿಸಿದರು. ಅಧ್ಯಯನದಲ್ಲಿ ನಿಕಟಪೂರ್ವ ಶಾಸಕರಾದ ಶ್ರೀ ಬೆಳ್ಳಿಪ್ರಕಾಶ್ ಹಾಗೂ ಮುಖಂಡರು, ಕಾರ್ಯಕರ್ತರು ಜೊತೆಯಲ್ಲಿದ್ದರು. ಚಿಕ್ಕಮಗಳೂರಿನಲ್ಲಿ ಹಲವೆಡೆ ಬೆಳೆದ ರಾಗಿ ಬೆಳೆಯು ಕೇವಲ ಒಂದು ಅಡಿಯಷ್ಟು ಮಾತ್ರ ಬೆಳೆದಿದ್ದು ಯಾವುದೇ ರಾಗಿ ತೆನೆಯು ಸರಿಯಾಗಿ ಬಂದಿರುವುದಿಲ್ಲ. ಡಿಸೆಂಬರ್ ಒಂದರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರವಾಸ ಕೈಗೊಂಡರು.

ಚಿಕ್ಕಬಳ್ಳಾಪುರ ಜಿಲ್ಲೆಯ ಮಂಡಿಕಲ್ಲು ಹೋಬಳಿ ಪಾತೂರು ಗ್ರಾಮದಲ್ಲಿ ಬರದಿಂದ ಬೆಳೆಹಾನಿಯಾದ ರೈತರ ಹೊಲಗಳಿಗೆ ಭೇಟಿ ನೀಡಿ, ರೈತರ ಅಹವಾಲು ಆಲಿಸಿ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಡಾ. ಸುಧಾಕರ್, ಮುಖಂಡರುಗಳು, ಕಾರ್ಯಕರ್ತರು ಜೊತೆಯಲ್ಲಿದ್ದರು. ಕಲಬುರಗಿ, ಬೀದರ್, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಆರ್. ಅಶೋಕ್ ರವರು ವಿಸ್ತೃತ ಬರ ಅಧ್ಯಯನ ಮಾಡಿ ರೈತರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದ್ದಲ್ಲದೆ ಇಲ್ಲಿನ ಹಾನಿಯ ಕುರಿತು ಸರ್ಕಾರದ ಗಮನ



ಸೆಳೆದು ಕಿವಿ ಹಿಂಡುವ ಕೆಲಸವನ್ನು ಮಾಡಿದರು.ಅಲ್ಲದೆ ಈ ಬರಪೀಡಿತ ಜಾಗಗಳಲ್ಲಿ ಬೇಸಿಗೆ ಆರಂಭಕ್ಕೂ ಮೊದಲೇ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಸರ್ಕಾರ ಕೇವಲ ಆದೇಶ ಹೊರಡಿಸಿ ಇಲಾಖೆ ಕೈಕಟ್ಟಿ ಕುಳಿತಿದೆ. 31 ಜಿಲ್ಲೆಗಳಲ್ಲಿ ಮೇವಿನ ಸಂಗ್ರಹ ಕೇವಲ 12 ರಿಂದ 15 ವಾರಕ್ಕೆ ಆಗುವಷ್ಟು ಮಾತ್ರ ಇದೆ. ಬರಗಾಲದ ಸಂದರ್ಭದಲ್ಲಿ ಅಲ್ಲಲ್ಲಿ ಜಾನುವಾರುಗಳನ್ನು ಕಾಲುಬಾಯಿ ರೋಗ, ಚರ್ಮಗಂಟು ರೋಗ, ಗಂಟಲು ಬೇನೆ, ತಪ್ಪಿ ರೋಗಗಳು ಕಾಡುತ್ತಿವೆ. ರೈತರಿಗೆ ಅಸಮರ್ಪಕ ವಿದ್ಯುತ್ ಪೂರೈಕೆಯಾಗುತ್ತಿದೆ. ಮೊದಲು ರೈತರಿಗೆ ಪ್ರತಿ ದಿನ 5 ಗಂಟೆ ಉಚಿತ ವಿದ್ಯುತ್ ನೀಡುತ್ತೇವೆ ಎಂದು ಹೇಳಿ ಸರ್ಕಾರ ಈಗ ಕೇವಲ ಪ್ರತಿದಿನ ರಾತ್ರಿ ಒಂದರಿಂದ ಎರಡು ಗಂಟೆ ವಿದ್ಯುತ್ ನೀಡುತ್ತಿದೆ. ಒಟ್ಟಿನಲ್ಲಿ ಸರ್ಕಾರ ಕರ್ನಾಟಕದ ವಿವಿಧ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಬಂದ ಭೀಕರ ಬರಗಾಲವನ್ನು ನಿರ್ವಹಿಸುವುದರಲ್ಲಿ ತೋರಿದ ನಿರ್ಲಕ್ಷ್ಯ, ಉದಾಸೀನತೆ ಹಾಗೂ ವೈಫಲ್ಯತೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ ರವರ ಬರ ಅಧ್ಯಯನ ಪ್ರವಾಸದಲ್ಲಿ ಢಾಳಾಗಿ ಕಂಡುಬಂತು.



**ನೀರಿನಲ್ಲಿ ಮೀನು ಸಾಗುವ ಹೆಜ್ಜೆ ಗುರುತು ಹೇಗೆ ಸಿಗಲ್ಲವೋ ಅದೇ ರೀತಿ ತನ್ನ ಹೆಸರನ್ನು ಎಲ್ಲಿಯೂ ತೋರಿಸದೇ ತನ್ನ ಪಾರ್ಟಿ,ಸಿದ್ಧಾಂತ ಒಂದೇ ನನ್ನ ಉಸಿರು ಅದರ ಧ್ವಜವೇ ಎಲ್ಲಕ್ಕಿಂತಲೂ ಮೇಲೆ ಹಾರಾಡಬೇಕು ಎನ್ನುವ ಮನೋಭಾವನೆ ಬಂದರೆ ನಾನು ನನ್ನದು ನನ್ನಿಂದಲೇ ಆಗೋದೂ ಎಂಬ ಆಯುಷ್ಯ ಇಲ್ಲದ ಮಾನಸಿಕತೆ ದೂರವಾಗುತ್ತದೆ.**



# ಬೆಳಗಾವಿ ಸುವರ್ಣ ಸೌಧದಲ್ಲಿ ವಿಧಾನಮಂಡಲ ಅಧಿವೇಶನ

## ಆಡಳಿತ ಪಕ್ಷ ಕಾಂಗ್ರೆಸ್‌ಗೆ ಇಲ್ಲಾ ಸದನ ನಡೆಸುವ ಉತ್ಸಾಹ; ಪ್ರತಿಪಕ್ಷ ಬಿಜೆಪಿ ಪ್ರಶ್ನೆಗಳಿಗೆ ಸರ್ಕಾರದಿಂದಿಲ್ಲಾ ಉತ್ತರ


(ವರದಿ)



ಮಹೇಶ್ ಹೆಗಡೆ
ಬಿಜೆಪಿ ಕಾರ್ಯಕರ್ತರು


ಉತ್ತರ ಕರ್ನಾಟಕ ಭಾಗಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮತ್ತು ಅಭಿವೃದ್ಧಿಗೆ ವೇಗ ನೀಡುವ ಸಲುವಾಗಿ ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ವಿಧಾನಮಂಡಲ ಅಧಿವೇಶವನ್ನು ನಡೆಸುವುದು ರೂಢಿ. ಅದರಂತೆ ಈ ಸಲದ ವಿಧಾನಮಂಡಲದ ಚಳಿಗಾಲದ ಅಧಿವೇಶನ ಡಿಸೆಂಬರ್3 ರಿಂದ ಬೆಳಗಾವಿಯಲ್ಲಿ ಆರಂಭವಾಗಿದೆ.

### ಆಡಳಿತ ಪಕ್ಷ ಕಾಂಗ್ರೆಸ್‌ಗಿಲ್ಲಾ ಸದನ ನಡೆಸುವ ಹಿತಾಸಕ್ತಿ

ಸದನ ನಡೆಸುವುದೆ ರಾಜ್ಯದ ಜನತೆಯ ಸಮಸ್ಯೆಗಳನ್ನು ಗಮನ ಸೆಳೆದು, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ. ಜೊತೆಗೆ ಪ್ರತಿಪಕ್ಷಗಳು ಹೇಳುವ ಸಲಹೆ ಸೂಚನೆಗಳನ್ನು ಪಡೆದು ಜನ ಪೂರಕವಾಗಿ ಆಡಳಿತ ನಡೆಸಲು. ಪ್ರತಿಪಕ್ಷಗಳು ಹಾಗೂ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಿ ಗೊಂದಲಗಳಿದ್ದರೆ ಪರಿಹರಿಸುವುದು ಸರ್ಕಾರದ ಜವಾಬ್ದಾರಿ. ಆದರೆ ಸರ್ಕಾರ ನಡೆಸುತ್ತಿರುವ ಕಾಂಗ್ರೆಸ್ ಇದಾವುದರ ಬಗ್ಗೆಯೂ ಕಾಳಜಿಯಾಗಲೀ, ಜವಾಬ್ದಾರಿಯಾಗಲೀ, ಕರ್ತವ್ಯವಾಗಲೀ ಇದ್ದಂತಿಲ್ಲ. ಬದಲಾಗಿ ಪಕ್ಕದ ತೆಲಂಗಾಣದಲ್ಲಿ ಅಧಿಕಾರ ರಚಿಸುವ ಉತ್ಸಾಹವೆ ಹೆಚ್ಚಾಗಿ ಕಾಂಗ್ರೆಸ್‌ನ ರಾಜ್ಯ ಸಚಿವರಲ್ಲಿ ಕಂಡು ಬಂದಿದೆ. ಅದಕ್ಕೆ ಈ ಒಂದು ವಾರದಲ್ಲಿ ಸಚಿವರು ಸದನದಲ್ಲಿ ಭಾಗಿಯಾಗಿದ್ದಕ್ಕಿಂತ ಗೈರಾಗಿದ್ದೆ ಹೆಚ್ಚು.

ರಾಜ್ಯದಲ್ಲಿ ಬರ ಸಮಸ್ಯೆ ಎದುರಾಗಿ, ಬಿಟ್ಟಿ ಭಾಗ್ಯದಿಂದ ಸರ್ಕಾರದ ಬೊಕ್ಕಸ ಖಾಲಿಯಾಗುತ್ತಿದೆ. ಸರ್ಕಾರದ ಆಸ್ತಿಗಳನ್ನು ಅಡ ಇಡುವ ಪರಿಸ್ಥಿತಿ ಎದುರಾಗಿದೆ. ಆದರೂ ಸರ್ಕಾರ ಜವಾಬ್ದಾರಿ ತೆಗದುಕೊಳ್ಳದೆ ಇರುವುದು ದುರದೃಷ್ಟಕರ. ಇನ್ನೂ ಉತ್ತರ ಕರ್ನಾಟಕದ ಭಾಗದ ಸಮಸ್ಯೆಗಳನ್ನು ಚರ್ಚಿಸುವ ಗೋಜಿಗೆ ಸರ್ಕಾರ ಇನ್ನೂ ಹೋಗಿಲ್ಲಾ. ಉತ್ತರ ಕರ್ನಾಟಕದ ಅಭಿವೃದ್ಧಿ ನಮ್ಮ ಗುರಿ ಎಂದು ಚುನಾವಣೆ ಸಂದರ್ಭದಲ್ಲಿ ಹೇಳಿದ್ದ ಕಾಂಗ್ರೆಸ್ ಈಗ ಅದನ್ನು ಮರೆತಿದೆ.

### ಸದನದಲ್ಲಿ ಬಿಜೆಪಿ-ಜನರ ಧ್ವನಿಯಾದ ಪ್ರತಿಪಕ್ಷ

ಸದನದ ಮೊದಲನೇ ದಿನದಿಂದಲೇ ಪ್ರತಿಪಕ್ಷ ಸರ್ಕಾರದ ತಪ್ಪುಗಳ ವಿರುದ್ಧ ವಾಗ್ದಾಳಿ ನಡೆಸಿದೆ. ರಾಜ್ಯದ ಜನತೆಯ ಕಷ್ಟಗಳ ಬಗ್ಗೆ ಧ್ವನಿ ಎತ್ತಿದ ಬಿಜೆಪಿ, ಗ್ಯಾರಂಟಿಗಳಿಂದ ಸರ್ಕಾರ ದಿವಾಳಿಯಾಗಿದ್ದು, ರೈತರ ಪಾಲಿಗೆ ಸತ್ತು ಹೊಗಿದೆ ಎಂದು ವಾಗ್ದಾಳಿ ನಡೆಸಿದೆ.

### ರೈತರ ಪಾಲಿಗೆ ಸರ್ಕಾರ ಸತ್ತು ಹೋಗಿದೆ

ರಾಜ್ಯದಲ್ಲಿ ಬರ ತಾಂಡವವಾಡುತ್ತಿದೆ. ರಾಜ್ಯದ ರೈತರು ಸಂಕಷ್ಟದಲ್ಲಿದ್ದಾರೆ. ಆದರೆ ಸರ್ಕಾರ ಇದರಬಗ್ಗೆ ಚಿಂತಿಸುತ್ತಿಲ್ಲ. ಇನ್ನೊಂದೆಡೆ ತಾವೇ ಕೊಟ್ಟ ಗ್ಯಾರಂಟಿ ಭ್ಯಾಗ್ಯಗಳನ್ನು ಸರಿಯಾಗಿ ಜನರಿಗೆ ತಲುಪಿಸುತ್ತಿಲ್ಲ. ಕೆಲವು ಭಾಗ್ಯ ಆರಂಭವೇ ಆಗಿಲ್ಲ. ಆರಂಭವಾಗಿದ್ದು ವೈಜ್ಞಾನಿಕವಾಗಿ ನಡೆಯುತ್ತಿಲ್ಲ ಮತ್ತು ಸರಿಯಾಗಿ ಜನರಿಗೆ ತಲುಪುತ್ತಿಲ್ಲ. ಸರ್ಕಾರ ಗ್ಯಾರಂಟಿಗಳಿಗೆ ಹಣ ಒದಗಿಸುವಲ್ಲಿ

ದಿವಾಳಿ ಎದ್ದಿದೆ. ಒಟ್ಟಾರೆ ಸರ್ಕಾರ ರೈತರ ಪಾಲಿಗೆ ಸತ್ತು ಹೋಗಿದೆ. ಸರ್ಕಾರ ಈ ತಕ್ಷಣ ರೈತರ ಪರವಾಗಿ ನಿಲುವುಗಳನ್ನು ತೆಗೆದುಕೊಂಡು ರೈತರ ಪರ ನಿಲ್ಲಬೇಕೆಂದು ಸಲಹೆ ಜೊತೆಗೆಎಚ್ಚರಿಕೆಯನ್ನು ನೀಡಿತು.

### ರಾಜ್ಯದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತ ಪತ್ರಕ್ಕೆ ಆಗ್ರಹ

ಬರದ ವಿಚಾರದಲ್ಲಿ ಸರ್ಕಾರ ರೈತರ ಜೀವನದ ಜೊತೆ ಆಟವಾಡುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ತನ್ನ ತಪ್ಪನ್ನು ಮುಚ್ಚಿ ಹಾಕಲು ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡುತ್ತಿದೆ. ಆದರೆ ಕೇಂದ್ರ ಸರ್ಕಾರ ಯಾವುದೇ ತಾರತಮ್ಯ ಮಾಡದೆ ಹಣವನ್ನು ಬಿಡುಗಡೆ ಮಾಡುತ್ತಿದೆ. ಸಿದ್ದರಾಮಯ್ಯ ಸುಮ್ಮನೆ ಕೇಂದ್ರ ಸರ್ಕಾರವನ್ನು ದೂರುವುದರಲ್ಲಿ ಕಾಲ ಕಳೆಯುತ್ತಿದ್ದಾರೆ. ಮೊದಲು ರಾಜ್ಯದ ಆರ್ಥಿಕ ಸ್ಥಿತಿಗತಿಯ ಬಗ್ಗೆ ತಕ್ಷಣ ಶ್ವೇತಪತ್ರವನ್ನು ಹೊರಡಿಸಬೇಕೆಂದು ಪ್ರತಿಪಕ್ಷದ ನಾಯಕರು ಆಗ್ರಹಿಸಿದರು.

### ಗ್ಯಾರಂಟಿ ಯೊಜನೆಗಳಿಗೆ ಕಾಂಗ್ರೆಸ್ ಎಸ್ಸಿ-ಎಸ್ಟಿ ಹಣ ಬಳಕೆ

ಕಾಂಗ್ರೆಸ್ ಸರ್ಕಾರ ತಾನು ಹಿಂದುಳಿದವರ ಪರ, ಅವರ ಅಭಿವೃದ್ಧಿ ನಮ್ಮ ಧ್ಯೇಯೊದ್ದೇಶ ಎಂದು ಕೊಚ್ಚಿಕೊಳ್ಳುತ್ತದೆ. ಎಸ್‌ಸಿ-ಎಸ್‌ಟಿ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಹೇಳಿಕೊಳ್ಳುತ್ತದೆ. ಆದರೆ ನಿಜವಾಗಿ ಸರ್ಕಾರ ಮಾಡುತ್ತಿರುವುದೇ ಬೇರೆ. ತನ್ನ ಭ್ಯಾಗಳನ್ನು ಅನುಷ್ಠಾನಗೊಳಿಸಲು ಎಸ್‌ಸಿ-ಎಸ್‌ಟಿ ಅಭಿವೃದ್ಧಿ ಯೋಜನೆಗಳಿಗೆ ಮೀಸಲಿರಿಸಿದ್ದ 11 ಸಾವಿರ ಕೋಟಿ ಹಣವನ್ನು ಬಳಸಿಕೊಂಡಿದೆ. ಇದರಿಂದ ಸರ್ಕಾರಕ್ಕೆ ಎಸ್‌ಸಿ-ಎಸ್‌ಟಿ ಸಮುದಾಯದವರ ಮೇಲೆ ಕಾಳಜಿ ಇಲ್ಲದೆ ಇರುವುದು ಗೊತ್ತಾಗುತ್ತದೆ. ಎಸ್‌ಸಿ-ಎಸ್‌ಟ್ಟಿ ಸಮುದಾಯದ ಅಭಿವೃದ್ಧಿ ಯೋಜನೆಗಳಿಗೆ ಮೀಸಲಿಟ್ಟಿರುವ ಹಣವನ್ನು ಕೂಡಲೆ ಹಿಂದಿರುಗಿಸಿ ಸಮುದಾಯದ ಅಭಿವೃದ್ಧಿಗೆ ಬಳಸಬೇಕೆಂದು ಬಿಜೆಪಿ ಸದಸ್ಯರು ಆಗ್ರಹಿಸಿದರು.

### ಉತ್ತರ ಕರ್ನಾಟಕದ ಸಮಸ್ಯೆ ಚರ್ಚೆಗೆ ಬಿಜೆಪಿ ಆಗ್ರಹ: ತುಷ್ಟೀಕರಣ ರಾಜಕಾರಣದ ವಿರುದ್ಧ ಬಿಜೆಪಿ ಗರಂ

ಉತ್ತರ ಕರ್ನಾಟಕ ಭಾಗದ ಸಮಸ್ಯೆಯನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುವುದಕ್ಕೆ ಬೆಳಗಾವಿಯಲ್ಲಿ ಅಧಿವೇಶನ ಕರೆದ ಸರಕಾರ ಚರ್ಚೆಗೆ ಅವಕಾಶ ನೀಡುತ್ತಿಲ್ಲ. ಸಮಯ ಕೊಡುವುದಾಗಿ ಭರವಸೆ ನೀಡಿದ್ದ ಸಭಾಧ್ಯಕ್ಷರು ಇಲ್ಲಿಯವರೆಗೆ ಯಾವುದೇ ಸಮಯವನ್ನು ನೀಡಿಲ್ಲ. ಈ ಬಗ್ಗೆ ಬಿಜೆಪಿ ಗಂಭೀರವಾಗಿ ಸ್ವೀಕರಿಸಿದ್ದು ಉತ್ತರಕರ್ನಾಟಕದ ಸಮಸ್ಯೆ ಚರ್ಚಿಸಲು ಹೋರಾಟ ಆರಂಭಿಸಿದೆ.

ಇನ್ನೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಯಕ್ರಮವೊಂದರಲ್ಲಿ ಮುಸ್ಲಿಂ ಸಮುದಾಯಕ್ಕೆ 10 ಸಾವಿರ ಕೋಟಿ ಅನುದಾನ ನೀಡುತ್ತೇವೆ ಎಂದು ಹೇಳಿರುವ ಬಗ್ಗೆ ತೀವ್ರ ಚರ್ಚೆ ಆಯಿತು. ಸರ್ಕಾರದ ಬಳಿ ಹಣವಿಲ್ಲದಿದ್ದರೂ ಹಣವನ್ನು ಹೊಂದಿಸುವುದರೆ ಬಗ್ಗೆ ಸ್ಪಷ್ಟಪಡಿಸಬೇಕೆಂದೂ, ಕಾಂಗ್ರೆಸ್ ಒಂದು ಸಮುದಾಯದ ಓಲೈಕೆ ರಾಜಕಾರಣ ಬಿಟ್ಟು ಬರ ಪರಿಹಾರ ನೀಡಿ



ಬರ ಸಂಕಷ್ಟಕ್ಕೆ ಮಿಡಿಯದ ಕಟುಕ ಹೃದಯಿ ಸರ್ಕಾರ.ಬರದಿಂದ ರೈತರು ದಯನೀಯ ಸ್ಥಿತಿಯಲ್ಲಿದ್ದು ಅವರ ಬಗ್ಗೆ ಸರ್ಕಾರ ಕಳಕಳಿ ವ್ಯಕ್ತಪಡಿಸಿ ಸಹಾಯಕ್ಕೆ ನಿಲ್ಲಬೇಕಾಗಿದೆ. ಆಡಳಿತ ಚುರುಕಾಗಬೇಕಾಗಿದೆ

**-ಆರ್.ಅಶೋಕ, ಪ್ರತಿಪಕ್ಷ ನಾಯಕ**

### ರೈತರ ಪರ ಸರ್ಕಾರಕ್ಕೆ ಬಿಜೆಪಿ ಸಲಹೆ

- 3-4 ವರ್ಷಗಳಿಗೊಮ್ಮೆ ಬರ ಬರುತ್ತಿದೆ. ಬರ ನಿರ್ವಹಣೆಗೆ ಶಾಶ್ವತ ಪರಿಹಾರಆಗಬೇಕಾಗಿದೆ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ದೀರ್ಘಾವಧಿಗೆ ಆಡಳಿತ ನಡೆಸಿದ್ದು, ಏನೂ ಮಾಡಿಲ್ಲ.
- ಎನ್‌ಡಿಆರ್‌ಎಫ್ ಪರಿಹಾರದ ಎರಡು ಪಟ್ಟು ಪರಿಹಾರವನ್ನು ನಮ್ಮ ಸರ್ಕಾರ ನೀಡಿತ್ತು. ನೀವು ಮೂರು ಪಟ್ಟಾದರೂ ಪರಿಹಾರ ಕೊಡಲೇ ಬೇಕು. ರೈತರು ಬೆಳೆ ಕಳೆದುಕೊಂಡು ತೀವ್ರ ಸಂಕಷ್ಟದಲ್ಲಿದ್ದಾರೆ. ಅವರಿಗೆ ನೆರವಾಗುವುದು ಸರ್ಕಾರದ ಕರ್ತವ್ಯ.
- ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆಂದು ಪಿಡಿ ಖಾತೆಯಲ್ಲಿ ಹಣ ಇದ್ದರೂ ಖರ್ಚು ಮಾಡುತ್ತಿಲ್ಲ. ಖರ್ಚು ಮಾಡಲು ಆದೇಶ ಬರಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಪ್ರತಿ ತಾಲೂಕಿಗೆ ಮೀಸಲಿಟ್ಟಿರುವ ಹಣ 2-3 ಪಂಚಾಯಿತಿಗಳಿಗಾಗುತ್ತದೆ. ಉಳಿದ ತಾಲೂಕುಗಳ ಸ್ಥಿತಿ ಬಗ್ಗೆ ಸರಕಾರದ ಉತ್ತರವಿಲ್ಲ.
- ಮೊಬೈಲ್ ಆಪ್ ಬಳಸಿ ಏಜೆಂಟ್ ಮೂಲಕ ಬೆಳೆ ಸರ್ವೆ ಮಾಡಿಸಲಾಗಿದ್ದು, ರೈತರಿಗೆ ಮಾಹಿತಿ ಇಲ್ಲ. ವಿವಿಧ ಮಾಹಿತಿ ಎಲ್ಲಿ ಕೊಡಬೇಕು ಎಂಬ ಸಮಸ್ಯೆ ಪರಿಹರಿಸಬೇಕಾಗಿದೆ.
- ಕಾರ್ಮಿಕರ ಗುಳೆ ತಪ್ಪಿಸಲು ಕಾರ್ಯಕ್ರಮ ರೂಪಿಸಬೇಕಿದೆ. ರೈತರಿಗೆ ಸರಕಾರದಿಂದ ಭರವಸೆ ತುಂಬುವ ಕೆಲಸ ಆಗಬೇಕಾಗಿದೆ. ಅಧಿಕಾರಿಗಳು ಕ್ರಿಯಾಶೀಲವಾಗಿ ಕರ್ತವ್ಯ ನಿರ್ವಹಿಸಲು ಸಿಎಂ ಆಡಳಿತವನ್ನು ಚುರುಕುಗೊಳಿಸಬೇಕು.
- ಪವರ್‌ಕಟ್ ವ್ಯಾಪಕವಾಗಿದೆ. ಬೆಳಗಿನ ಹೊತ್ತು ಆದ್ಯತೆ ಮೇಲೆ ವಿದ್ಯುತ್‌ಕೊಡಿ. ಪರಿವರ್ತಕ ರಿಪೇರಿ, ಅಳವಡಿಕೆಗೆ ಹಣ ವಸೂಲಿ ಮಾಡುತ್ತಿದ್ದು, ಅದಕ್ಕೆ ಬ್ರೇಕ್ ಹಾಕಲು ಕ್ರಮ ಆಗಬೇಕಾಗಿದೆ.
- ತಕ್ಷಣವೇ ಗೋಶಾಲೆಗಳನ್ನು ತೆರೆಯಬೇಕು. ಜಾನುವಾರುಗಳಿಗೆ ಮೇವು ಸಂಗ್ರಹ ಆಗಿಲ್ಲ. ಜನವರಿ ಬಳಿಕ ಸಮಸ್ಯೆ ಎದುರಾಗಲಿದ್ದು, ಕೂಡಲೇ ಅದರ ಬಗ್ಗೆ ಗಮನ ಕೊಡಬೇಕು. ಮೇವು ಬೆಳೆಯಲು ಪ್ರೋತ್ಸಾಹ ನೀಡಬೇಕು.

### ಸರ್ಕಾರಕ್ಕೆ ಸದನದಲ್ಲಿ ಬಿಜೆಪಿ ಬೇಡಿಕೆ

- ರೈತರ 2 ಲಕ್ಷರೂ.ವರೆಗಿನ ಸಾಲ ಮನ್ನಾ ಮಾಡಬೇಕು.
- ಬಡವರು, ಕೃಷಿಕಾರ್ಮಿಕರು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ಜನರು ವಾಸಿಸುವ ಪ್ರದೇಶಗಳಲ್ಲಿ ಆಹಾರ ಕಿಟ್ ತರಿಸಬೇಕು.
- ಈ ಮಳೆ ಆಶ್ರಿತ, ನೀರಾವರಿ ಮತ್ತು ಬಹು ವಾರ್ಷಿಕ ಬೆಳೆಗಳಿಗೆ ದುಪ್ಪಟ್ಟು ಪರಿಹಾರ ತರಿಸಬೇಕು.
- ಕೇಂದ್ರ ನೆರವಿನ ಕಿಸಾನ್ ಸಮ್ಮಾನ್ ಯೋಜನೆಯನ್ನು ಮತ್ತೆ ಆರಂಭಿಸಬೇಕು.
- ಬರಗಾಲದ ವೇಳೆ ಗರ್ಭಿಣಿಯರು, ಬಾಣಂತಿಯರು ಮತ್ತು ನವಜಾತ ಶಿಶುಗಳಿಗೆ ಪೌಷ್ಟಿಕ ಆಹಾರ ಒದಗಿಸಬೇಕು.
- ಜಾನುವಾರುಗಳಿಗೆ ಬರಗಾಲದಲ್ಲಿ ಬರಬಹುದಾದ ಕಾಯಿಲೆಗಳಿಂದ ರಕ್ಷಿಸಲು ಲಸಿಕೆ ಹಾಕಬೇಕು.
- ಶಾಸಕರ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್‌ಗಳಿಗೆ ಪರಮಾಧಿಕಾರ ನೀಡಿ ಪ್ರತಿ ತಾಲೂಕಿಗೆ ಐದು ಕೋಟಿರೂ ನೀಡಬೇಕು.
- ಸ್ಥಗಿತಗೊಳಿಸಿರುವ ವಿದ್ಯಾನಿಧಿ ಯೋಜನೆ ಮತ್ತೆ ಆರಂಭಿಸಬೇಕು. ಕುಡಿವ ನೀರು, ಮೇವು ಖರೀದಿ, ಗೋಶಾಲೆ ಆರಂಭಿಸಲು ಅನುದಾನ ನಿಗದಿ ಮಾಡಿ ತಕ್ಷಣವೇ ಆದೇಶ ಹೊರಡಿಸಬೇಕು.




# ಮೋದಿ ಸರ್ಕಾರದಿಂದ ಜಮ್ಮು ಕಾಶ್ಮೀರದ ವಿಶೇಷ ಅಧಿಕಾರ 370ನೇ ವಿಧಿ ರದ್ದು

## ಸರ್ಕಾರದ ಕ್ರಮ ಎತ್ತಿ ಹಿಡಿದ ಕೋರ್ಟ್ ಸರ್ವೋಚ್ಛ ತೀರ್ಪು



376 ಮತ್ತು 35(ಎ) ವಿಧಿಗಳು ಒಡೆಯಲಾಗದ ಜಮ್ಮು, ಕಾಶ್ಮೀರ ಮತ್ತು ಉಳಿದ ಭಾರತದ ನಡುವಿನ ಒಡೆಯಲಾರದ ಗೋಡೆಗಳಂತಿದ್ದವು. ಜಮ್ಮು ಮತ್ತು ಕಾಶ್ಮೀರದ ಜನತೆ ಇತರೆ ಸಹ ಭಾರತೀಯರು ಪಡೆದಂತಹ ಹಕ್ಕುಗಳು ಮತ್ತು ಅಭಿವೃದ್ಧಿಯನ್ನು ಎಂದಿಗೂ ಪಡೆಯದಂತೆ ಮಾಡಿದ್ದವು. ಈ ವಿಧಿಗಳಿಂದಾಗಿ ಒಂದೇ ರಾಷ್ಟ್ರಕ್ಕೆ ಸೇರಿದ ಜನರ ನಡುವೆ ಅಂತರವನ್ನು ಸೃಷ್ಟಿಸಲಾಗಿತ್ತು. **– ನರೇಂದ್ರ ಮೋದಿ, ಪ್ರಧಾನ ಮಂತ್ರಿ**

**ಕೇಂದ್ರದ ದುರುದ್ದೇಶ ಇಲ್ಲ ಎಂದ ನ್ಯಾಯಪೀಠ:** ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡಲಾಗಿದ್ದ ಸಂವಿಧಾನದ 110ನೇ ವಿಧಿ ರದ್ದುಗೊಳಿಸಲಾದ ಕೇಂದ್ರ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿದೆ. 370ನೇ ವಿಧಿಯನ್ವಯ ಈ ರಾಜ್ಯಕ್ಕೆ ವಿಶೇಷಾಧಿಕಾರ ನೀಡಿಕೆ ಕೇವಲ ತಾತ್ಕಾಲಿಕ ನಿರ್ಧಾರವಷ್ಟೇ ಆಗಿತ್ತು ಎಂದೂ ಪೀಠ ಮಹತ್ವಪೂರ್ಣ ತೀರ್ಪು ನೀಡಿದೆ.

**ಸರ್ಕಾರದ ದುರುದ್ದೇಶ ಕಾಣರು :** 370 ವಿಧಿ ರದ್ದತಿಗೆ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಯಾವುದೇ ಅಧಿಕಾರ ಇಲ್ಲ ಯುದ್ಧದ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಶೇಷಾಧಿಕಾರ ನೀಡಲಾಗಿತ್ತು. ಕೇಂದ್ರ ಸರ್ಕಾರಕ್ಕೆ, ರಾಷ್ಟ್ರಪತಿಗಳಿಗೆ 370ನೇ ವಿಧಿ ರದ್ಧತಿ ಅಧಿಕಾರ ಇದೆ. ವಿಶೇಷಾಧಿಕಾರವನ್ನು ರದ್ದುಪಡಿಸುವ ಸರ್ಕಾರದ ನಿರ್ಧಾರದ ಯಾವ ದುರುದ್ದೇಶವೂ ಕಡುಬಂದಿಲ್ಲ ಎಂದು ನ್ಯಾಯಪೀಠ ತನ್ನ ತೀರ್ಪಿನಲ್ಲಿ ಒತ್ತಿ ಹೇಳಿದೆ.

**ಕೇಂದ್ರ ಸರ್ಕಾರ ಮಂಡಿಸಿದ ವಾದ :** ಈ ಚರ್ಚೆಗಳ ವಿಚಾರಣೆ ವೇಳೆ ತನ್ನ ನಿಲುವು ಸಮರ್ಥಿಸಿಕೊಂಡಿದ್ದ ಕೇಂದ್ರ ಸರ್ಕಾರ , ತಾನು ಕೈಗೊಂಡ ನಿಲುವು ಸಂವಿಧಾನಬದ್ಧ. ಜಮ್ಮು ಮತ್ತು ಕಾಶ್ಮೀರವನ್ನು ಭಯೋತ್ಪಾದನೆಯಿಂದ ಮುಕ್ತಗೊಳಿಸಲು ಹಾಗೂ ಮುಖ್ಯ ವಾಹಿನಿಗೆ ತಂದು ಅಭಿವೃದ್ಧಿ ಕೈಗೊಳ್ಳಲು ಈ ನಿರ್ಧಾರ ಅತ್ಯಗತ್ಯವಾಗಿತ್ತು ಎಂದು ವಾದಿಸಿತ್ತು.

### ಸಂವಿಧಾನ ಪೀಠದ ಐತಿಹಾಸಿಕ ತೀರ್ಪು

- ಸಂವಿಧಾನದ 370ನೇ ವಿಧಿ ಕುರಿತಂತೆ ಕೇಂದ್ರ ಸರ್ಕಾರ ತೆಗೆದುಕೊಂಡ ನಿರ್ಧಾರ ಮಾನ್ಯ.
- ಜಮ್ಮು ಮತ್ತು ಕಾಶ್ಮೀರದಲ್ಲಿ ಘೋಷಿಸಿಲಾದ ರಾಷ್ಟ್ರಪತಿ ಆಳ್ವಿಕೆಯ ಸಿಂಧುತ್ವದ ಬಗ್ಗೆ ಅರ್ಜಿದಾರರು ಪ್ರಶ್ನಿಸದ ಹಿನ್ನೆಲೆ ಸುಪ್ರೀಂ ಕೋರ್ಟ್ ತೀರ್ಪು ನೀಡುವ ಅಗತ್ಯವಿಲ್ಲ.
- ಜಮ್ಮು ಮತ್ತು ಕಾಶ್ಮೀರವು ಭಾರತಕ್ಕೆ ಸೇರಿದ ನಂತರ ಅದರ ಪ್ರತ್ಯೇಕ ಸಾರ್ವಭೌಮತ್ವ ಉಳಿಯುವುದಿಲ್ಲ. ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗ.
- 370ನೇ ವಿಧಿ ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ಸಂವಿಧಾನದ 370 ನೇ ವಿಧಿಯು ಯುದ್ಧ ಪರಿಸ್ಥಿತಿಗಳಿಗಾಗಿರುವ ಮಧ್ಯಂತರ ವ್ಯವಸ್ಥೆಯಾಗಿದೆ.
- ಸಂವಿಧಾನ ರಚನಾ ಸಭೆಯು ಜಮ್ಮು ಕಾಶ್ಮೀರವನ್ನು ಎಂದಿಗೂ ಶಾಶ್ವತ ಸಂಸ್ಥೆಯಾಗಲು ಉದ್ದೇಶಿಸಿರಲಿಲ್ಲ. ಜಮ್ಮು ಕಾಶ್ಮೀರದ ಸಂವಿಧಾನ ಸಭೆಯು ಅಸ್ತಿತ್ವದಲ್ಲಿ ಇಲ್ಲದಿರುವಾಗ, 370ನೇ ವಿಧಿಯ ವಿಶೇಷ ಷರತ್ತು ಅಸ್ತಿತ್ವದಲ್ಲಿರುವುದಿಲ್ಲ.
- ಜಮ್ಮು-ಕಾಶ್ಮೀರದಲ್ಲಿ ರಾಜ್ಯ ಸ್ಥಾನಮಾನ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಆದೇಶ.
- 370ನೇ ವಿಧಿ ರದ್ದಾದ ಬಳಿಕ ಜಮ್ಮು ಕಾಶ್ಮೀರದ ಸಂವಿಧಾನವು ಕಾರ್ಯಾಚರಣೆಯಲ್ಲಿರುವುದಿಲ್ಲ ಹಾಗೂ ಅದನ್ನು ಉಳಿಸಿಕೊಳ್ಳುವುದರಲ್ಲಿ ಯಾವುದೇ ಉದ್ದೇಶವಿರುವುದಿಲ್ಲ.
- 370(1) (ಡಿ) ವಿಧಿಯ ಅನ್ವಯ ಭಾರತೀಯ ಸಂವಿಧಾನದ ಎಲ್ಲಾ ನಿಬಂಧನೆಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುತ್ತವೆ.
- ಜಮ್ಮು-ಕಾಶ್ಮೀರದಲ್ಲಿ ವಿಧಾನಸಭೆಗೆ 2024ರ ಸೆ.30ರ ಒಳಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಸೂಚನೆ.
- ಡಾಖ್ ಅನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸುವ ನಿರ್ಧಾರ ಎತ್ತಿಹಿಡಿದ ಸುಪ್ರೀಂ ಕೋರ್ಟ್.



# ಕಾರ್ಯಾಚರಣೆ, ಕಾರ್ಮಿಕರ ರಕ್ಷಣೆ

## ಹುಸಿಯಾಗಲಿಲ್ಲ ಮೋದಿಯವರ ಸರ್ಕಾರದ ಮೇಲಿನ ನಂಬಿಕೆ




ಅಜಿತ್ ಶೆಟ್ಟಿ ಹೆರಂಜೆ
ಸಹ ಸಂಚಾಲಕರು
ರಾಜ್ಯ ಪ್ರಕಾಶನ ಪ್ರಕೋಷ್ಠ


ಇಡೀ ಪ್ರಕರಣವನ್ನು ಪ್ರಧಾನಮಂತ್ರಿಯವರ ಕಛೇರಿಯಿಂದ ನೇರವಾಗಿ ಮಾನಿಟರ್ ಮಾಡಲಾಗುತ್ತಿತ್ತು. ಈ ಕಾರ್ಯಾಚರಣೆಯಲ್ಲಿ ಸುಮಾರು 400 ಕ್ಕೂ ಹೆಚ್ಚು ಸಿಬ್ಬಂದಿಗಳು ಸತತವಾಗಿ 17 ದಿನಗಳಕಾಲ ಕೆಲಸ ಮಾಡಿದರು. ನವಂಬರ್ 12 ಅತ್ಯಂತ ಕರಾಳ ದಿನವೇ ಆಗಿದ್ದರೂ ನಂತರ ಈ ಕಾರ್ಮಿಕರನ್ನು ರಕ್ಷಿಸುವಲ್ಲಿ ದೇಶವೇ ಒಂದಾಯಿತು. ಉತ್ತರಾಖಂಡದ ಮುಖ್ಯಮಂತ್ರಿ ಶ್ರೀ ಪುಷ್ಕರ್ ಧಾಮಿ, ಕೇಂದ್ರ ಸಚಿವ ಜನರಲ್ ವಿ.ಕೆ. ಸಿಂಗ್, ಕೇಂದ್ರ ಸಚಿವರಾದ ಶ್ರೀ ನಿತಿನ್ ಘಡ್ಕರಿ, ಭಾರತೀಯ ವಾಯು ಸೇನೆ, ಭೂ ಸೇನೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ, ಒಎನ್‌ಜಿಸಿ, ಎಸ್‌ಡಿಆರ್‌ಎಫ್, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೀಗೆ ಇಡೀ ಆಡಳಿತ ವರ್ಗವೇ ನಡೆಸಿದ ಈ ಕಾರ್ಯಾಚರಣೆಯನ್ನು ಇಡೀ ಜಗತ್ತೇ ಹಿಂದೆ ತಿರುಗಿ ನೋಡುವಂತಹ ರಕ್ಷಣಾ ಕಾರ್ಯವನ್ನು ಭಾರತ ಮಾಡಿತು.



**ಮೋ**ದಿ ಎಂದರೆ ನಂಬಿಕೆ, ಹೌದು ಕೆಲವೊಮ್ಮೆ ಇಂತಹ ಮಾತುಗಳು ಅತಿಶಯೋಕ್ತಿ ಅನಿಸಬಹುದು, ಅದರೆ ಇದು ವಾಸ್ತವ, ಇವತ್ತು 140 ಕೋಟಿ ಭಾರತೀಯರ ಜೊತೆ ವಿದೇಶದಲ್ಲಿರುವ ಲಕ್ಷಾಂತರ ಮಂದಿ ಭಾರತೀಯರು 2014 ರಿಂದ ತಾವು ಜಗತ್ತಿನ ಯಾವುದೇ ಮೂಲೆಯಲ್ಲಿದ್ದರು ಅವರಲ್ಲಿ ಸುರಕ್ಷತಾ ಭಾವ ಮೂಡಿದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಅವರು ಸಂಕಷ್ಟಕ್ಕೆ ಸಿಲುಕಿದರೂ ಅವರ ರಕ್ಷಣೆಗಾಗಿ ಭಾರತ ಸರಕಾರ ತನ್ನ ಅಧೀನದಲ್ಲಿರುವ ಎಲ್ಲಾ ಶಕ್ತಿ ಸಂಪನ್ಮೂಲಗಳನ್ನು ಪಣಕ್ಕಿಟ್ಟು ಕಾರ್ಯೋನ್ಮುಖವಾಗುತ್ತಿದೆ. 2014 ರಿಂದ ಈಚೆಗೆ ದೇಶದ ಒಳಗೆ ಹೊರಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಡೆಸಿದ ಅನೇಕ ಕಾರ್ಯಾಚರಣೆಗಳೇ ಇದಕ್ಕೆ ಸಾಕ್ಷಿ. ಅದು ಯುದ್ಧ ಪೀಡಿತ ಯಮನ್‌ನಿಂದ ನರ್ಸ್‌ಗಳನ್ನು ಕರೆ ತಂದಿರುವುದೇ ಇರಲಿ, ಕೋವಿಡ್ ಸಮಯದಲ್ಲಿ ವಿವಿಧ ದೇಶಗಳಿಂದ ಭಾರತೀಯರನ್ನು ರಕ್ಷಣೆ ಮಾಡಿದ್ದೇ ಇರಲಿ, ಯುಕ್ರೇನ್ ಯುದ್ಧದಲ್ಲಿ ಭಾರತೀಯರ ರಕ್ಷಣೆಯಾಗಲೀ, ಯುದ್ಧ ಪೀಡಿತ ಸೂಡಾನ್‌ನಿಂದ ಭಾರತೀಯರನ್ನು ರಕ್ಷಣೆ ಮಾಡಿದ 'ಆಪರೇಷನ್ ಕಾವೇರಿ' ಇರಲಿ ಅಥವಾ ಇತ್ತೀಚಿಗೆ ಇಸ್ರೈಲ್ ಪ್ಯಾಲಿಸ್ತೀನ್ ಗಲಭೆಯಲ್ಲಿ ಇಸ್ರೇಲಿನಿಂದ ಭಾರತೀಯರನ್ನು ರಕ್ಷಣೆ ಮಾಡಿದ ಸಂಗತಿಯೇ ಇರಲಿ, ಈ ಎಲ್ಲಾ ಘಟನೆಗಳಿಂದ ಕಳೆದ ಒಂದು ದಶಕದಲ್ಲಿ ಇಡೀ ವಿಶ್ವವೇ ಭಾರತದ ಬಗ್ಗೆ ಒಂದು ಧನಾತ್ಮಕ ಅಭಿಪ್ರಾಯ ಹೊಂದಿದೆ. ಅದೇ ರಿತಿ ಭಾರತೀಯರಿಗೂ ವರ್ತಮಾನದ ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೇಲೆ ಒಂದು ನಿಶ್ಚಿತ ನಂಬಿಕೆ ಬೆಳೆದಿದೆ. ಅಂತಹ ನಂಬಿಕೆಯನ್ನು ಮತ್ತೆ ಉಳಿಸಿ, ಬೆಳೆಸಿಕೊಳ್ಳುವಲ್ಲಿ ಉತ್ತರಖಂಡದ ಕುಸಿದ ಸುರಂಗದಲ್ಲಿ ರಕ್ಷಣೆಗೊಂಡ 41 ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ದೇಶದ 140 ಜನರ ಮನಸ್ಸಿನಲ್ಲಿ ಮತ್ತೆ ಸುರಕ್ಷತಾ ಭಾವವನ್ನು ಮರುಸ್ಥಾಪಿಸಿದೆ.


### ಯಾವುದಿದು ಉತ್ತರಖಾಂಡ ಸುರಂಗ ಮಾರ್ಗ?



ಇದು ಚಾರ್ ಧಾಮ್ ಸರ್ವಋತು ರಸ್ತೆ ಎಕ್ಸ್‌ಪ್ರೆಸ್‌ವೇ ಯೋಜನೆಯಾಗಿದ್ದು, ಪ್ರಸ್ತುತ ಹಿಮಾಲಯದ ಉತ್ತರಾಖಂಡ ರಾಜ್ಯದಲ್ಲಿ ಪ್ರಗತಿಯಲ್ಲಿದೆ. 899 ಕಿ.ಮೀ ಉದ್ದ ದ ರಸ್ತೆ ಪೂರ್ಣಗೊಂಡ ನಂತರ ಯಮುನೋತ್ರಿ, ಗಂಗೋತ್ರಿ, ಬದರಿನಾಥ್ ಮತ್ತು ಕೇದಾರ್ ನಾಥ್‌ಗಳನ್ನೊಳಗೊಂಡ ಚಾರ್‌ಧಾಮ್ ತೀರ್ಥ ಕ್ಷೇತ್ರಗಳಿಗೆ ವರ್ಷದ ಎಲ್ಲಾ ದಿನಗಳಲ್ಲೂ ಯಾತ್ರೆ ಮಾಡಲು ಸಾಧ್ಯವಾಗುತ್ತದೆ. ಈ ಯೋಜನೆಗೆ 'ಚಾರ್ ಧಾಮ್ ಮಹಾಮಾರ್ಗ್ ವಿಕಾಸ್ ಪರಿಯೋಜನಾ (ಚಾರ್‌ಧಾಮ್ ಹೆದ್ದಾರಿ ಅಭಿವೃದ್ಧಿ

ಯೋಜನೆ)' ಎಂದು ಕರೆದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಕಾಮಗಾರಿ ಪೂರ್ಣಗೊಂಡ ನಂತರ ಇದನ್ನು 'ಚಾರ್ ಧಾಮ್ ಮಹಾಮಾರ್ಗ್ (ಚಾರ್‌ಧಾಮ್ ಹೆದ್ದಾರಿ)' ಎಂದು ಕರೆಯಲಾಗುವುದು ಎಂದು ಹೇಳಿದ್ದಾರೆ. ಇದರ ಒಟ್ಟು ವೆಚ್ಚ 11,700 ಕೋ.ರೂ. 27 ಡಿಸೆಂಬರ್ 2016 ರಂದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಈ ಯೋಜನೆಗೆ ಅಡಿಗಲ್ಲು ಹಾಕಿದರು. ಈ ಯೋಜನೆಯು ಎರಡು ಸುರಂಗಗಳು, 15 ದೊಡ್ಡ ಮೇಲು ಸೇತುವೆಗಳು, 101 ಸಣ್ಣ ಸೇತುವೆಗಳು, 3,596 ಕಲ್ವರ್ಟ್‌ಗಳು ಮತ್ತು 12 ಬೈಪಾಸ್ ರಸ್ತೆಗಳ ನಿರ್ಮಾಣವನ್ನು ಒಳಗೊಂಡಿದೆ. ಈ ಯೋಜನೆಯ ಭಾಗವಾಗಿ ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್‌ಕ್ಯಾರ ಬಳಿ ನಿರ್ಮಾಣ ಹಂತದಲ್ಲಿದ್ದ ಸುರಂಗವೊಂದು ಕುಸಿದು ಸುರಂಗದೊಳಗೆ 41 ಕಾರ್ಮಿಕರು ಸಿಲುಕಿಕೊಂಡರು.

## ರಕ್ಷಣಾ ಕಾರ್ಯಾಚರಣೆ




ನವಂಬರ್ 12ರ ಬೆಳಿಗ್ಗೆ ಹಠಾತ್ ಭೂ ಕುಸಿತದಿಂದ ಸುರಂಗದಲ್ಲಿ ಕೆಲಸ ಮಾಡುತ್ತಿದ್ದ 41 ಕಾರ್ಮಿಕರು ಸಿಲುಕಿಕೊಂಡ ವಿಷಯ ತಿಳಿದುಬಂದ ಕ್ಷಣದಿಂದಲೇ ಕಾರ್ಮಿಕರ ರಕ್ಷಣಾ ಕಾರ್ಯದ ಪ್ರಯತ್ನಗಳು ಪ್ರಾರಂಭವಾದವು. ಹೊರಗಿನವರಿಗೆ ಒಳಗೆ ಸಿಲುಕಿಕೊಂಡವರಲ್ಲಿ ಎಷ್ಟು ಜನ ಬದುಕುಳಿದಿದ್ದಾರೆ ಅಥವಾ ಗಾಯಗಳಾಗಿವೆ ಎಂಬುದರ ಯಾವುದೇ ಮಾಹಿತಿ ಇರಲಿಲ್ಲ. ಹೊರಗಿನವರಿಗೆ ಅವರು ಜೀವಂತವಾಗಿದ್ದಾರೆ ಎನ್ನುವ ನಂಬಿಕೆ. ಒಳಗಿನವರಿಗೆ ಹೊರಗಿನವರು ನಮ್ಮನ್ನು ರಕ್ಷಣೆ ಮಾಡುತ್ತಾರೆ ಎನ್ನುವ ನಂಬಿಕೆ. ಈ ವಿಶ್ವಾಸ ಮತ್ತು ನಂಬಿಕೆಗಳೇ ಈ 17 ದಿನಗಳ ಸುದೀರ್ಘವಾದ ಕಾರ್ಯಾಚರಣೆಯನ್ನು, ಎಲ್ಲಾ ಅಡ್ಡಿ ಆತಂಕಗಳನ್ನು ಮೀರಿ ಯಶಸ್ವಿಯಾಗಿ ನಡೆಸಲು ಸಹಾಯವಾಯಿತು. ನವೆಂಬರ್ 12 ರಿಂದಲೇ ಕಾರ್ಮಿಕರನ್ನು ರಕ್ಷಣೆ ಮಾಡಲು ಸಿಬ್ಬಂದಿಗಳು ಬಿದ್ದಿರುವ ಬಂಡೆಗಳ ತೆರವು ಕಾರ್ಯಾಚರಣೆ ಮಾಡಿದರಾದರೂ ಬೃಹತ್ ಬಂಡೆಗಳು ಎದುರಾದ ಪರಿಣಾಮ ಯಾವುದೇ ಫಲಿತಾಂಶ ದೊರೆಯಲಿಲ್ಲ. ಆ ಕಾರಣ ನವೆಂಬರ್ 14ರಂದು ಡೆಹ್ರಾಡೂನ್‌ನಿಂದ ಬೃಹತ್ ಅಗರ್ ಡ್ರಿಲ್ಲಿಂಗ್ ಮೆಷಿನ್‌ನ್ನು ತಂದು ಬಂಡೆಗಳನ್ನು ಕೊರೆಯಲಾಯಿತು ಆದರೆ ಆ ಪ್ರಯತ್ನವೂ ವಿಫಲವಾಯಿತು. ಬಂಡೆಯನ್ನು ಕೊರೆದು ಈ ಮಧ್ಯೆ ಒಂದು ಚಿಕ್ಕ ಪೈಪ್ ಬಳಿಸಿ ಸುರಂಗದೊಳಗೆ ಇದ್ದ ಕಾರ್ಮಿಕರಿಗೆ ಆಮ್ಲಜನಕ ಮತ್ತು ದ್ರವ ರೂಪದ ಆಹಾರದ ಪೂರೈಕೆ ಮಾಡಲಾಯಿತು. ಯಾವಾಗ ರಕ್ಷಣಾ ಕಾರ್ಯದಲ್ಲಿ ವಿಳಂಬವಾಗುತ್ತಿದೆ ಎಂಬುದು ತಿಳಿದಾಗ ಇತರ ಮಾರ್ಗಗಳಿಂದಲೂ ರಂಧ್ರ ಕೊರೆದು ರಕ್ಷಣೆ ಮಾಡುವ ಪ್ರಯತ್ನಗಳು ಪ್ರಾರಂಭವಾಯಿತು. ಒಎನ್‌ಜಿಸಿ, ಎಸ್‌ಜೆವಿಎನ್, ಆರ್‌ವಿಎನ್‌ಎಲ್, ಎನ್‌ಹೆಚ್‌ಐಡಿಸಿ, ಟಿಹೆಚ್‌ಡಿಐ ತಂಡಗಳನ್ನು ಬಳಸಿಕೊಂಡು ಪ್ರತ್ಯೇಕವಾಗಿ 5 ಭಾಗದಲ್ಲಿ ಮಾರ್ಗಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ನವೆಂಬರ್ 20ಕ್ಕೆ ಸತತ ಪರಿಶ್ರಮದ ಮೂಲಕ ಸಿಲುಕಿಗೊಂಡ ಕಾರ್ಮಿಕರಿಗೆ ಔಷಧಿಗಳ ಪೂರೈಕೆ ಮಾಡಲಾಯಿತು. ನವೆಂಬರ್ 21ಕ್ಕೆ ಈ ಕೊಳವೆಯ ಮೂಲಕ ಮೊದಲ ಭಾರಿಗೆ ಎಂಡೋಸ್ಕೋಪಿಕ್ ಕ್ಯಾಮರಾ ಬಳಸಿ ಸಿಲುಕಿಕೊಂಡಿರುವ ಕಾರ್ಮಿಕರ ಸಂಪರ್ಕವನ್ನು ಸಾಧಿಸಲಾಯಿತು. ಈ ಮಧ್ಯೆ ಭಾರತ ಸರ್ಕಾರ ರಕ್ಷಣಾ ಕಾರ್ಯಕ್ಕೆ ನೆರವಾಗಲು ಅಮೇರಿಕಾದಿಂದ ಸುರಂಗ ಕೊರೆಯುವ ಯಂತ್ರವನ್ನು ಭಾರತೀಯ ವಾಯುಸೈನ್ಯದ ವಿಮಾನಗಳ ಮೂಲಕ ತುರ್ತು ಕಾರ್ಯಾಚರಣೆಗೆ ತಂದರು. ಈ ಯಂತ್ರವೂ ಕೂಡ ಕೆಲಸದ ಮಧ್ಯೆ ಹಾಳಾಗಿ ನಿಂತಿತು. ಆಗ ತಲೆಕೆಡಿಸಿಕೊಂಡ ಅಧಿಕಾರಿಗಳು ಇವರ ರಕ್ಷಣೆಗೆ ಹಿಂದೆ ಚಾಲ್ತಿಯಲ್ಲಿದ್ದ ಆದರೆ ಈ ನಿರ್ಬಂದಕ್ಕೆ ಒಳಗಾಗಿರುವ ರ್‍ಯಾಟ್ ಹೋಲ್ ಮೈನಿಂಗ್ ತಂತ್ರವನ್ನು ಬಳಸಿಕೊಂಡು ರಂಧ್ರ ಕೊರೆದು ಆ ಮೂಲಕ ಕಾರ್ಮಿಕರನ್ನು ಹೊರತೆಗೆಯುವ ಯೋಜನೆ ರೂಪಿಸಿ ನವಂಬರ್ 28ರಂದು ಕಾರ್ಮಿಕರನ್ನು ರಕ್ಷಿಸಲಾಯಿತು.

## ಕಾರ್ಮಿಕರ ಸುಕ್ಷತೆಯ ಬಗ್ಗೆ ಸರ್ಕಾರದ ಕಾಳಜಿ:

ರಕ್ಷಣಾ ಕಾರ್ಯವನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಮಿತಿ ಮೇಲುಸ್ತುವಾರಿ ವಹಿಸಿತ್ತು. ಭಾರತೀಯ ವಾಯು ಪಡೆ, ಭೂ ಸೇನೆ ಸೇರಿದಂತೆ ಒಟ್ಟು 25 ವಿವಿಧ ತಂಡಗಳು ಈ ರಕ್ಷಣಾ ಕಾರ್ಯದಲ್ಲಿ ಪಾಲ್ಗೊಂಡಿದ್ದವು. ಭಾರತ ಸರ್ಕಾರ ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿತು. ಅವಘಡದ ವಿಷಯ ತಿಳಿಯುತ್ತಿದ್ದಂತೆಯೇ ಆಸ್ಟ್ರೇಲಿಯಾದಿಂದ ಖ್ಯಾತ ಸುರಂಗ ತಜ್ಞ ಅರ್ನಾಲ್ಡ್ ಡಿಕ್ಸ್ ಅವರನ್ನು ಸಂಪರ್ಕಿಸಿ ಅವರ ಮಾರ್ಗರ್ಶನದಲ್ಲಿ ಈ






ತೆರವು ಕಾರ್ಯಾಚರಣೆಯನ್ನು ಮಾಡಲಾಯಿತು. ಸುರಂಗ ತೆರವು ಕಾರ್ಯಾಚರಣೆಗೆ ಅಮೇರಿಕಾದಿಂದ ಸುರಂಗ ಕೊರೆಯುವ ಯಂತ್ರವನ್ನು ತರಲು ತನ್ನ ವಾಯುಪಡೆಯ ವಿಮಾನವನ್ನೇ ಕಳುಹಿಸಿ ಕೊಟ್ಟಿತು. ಮೊದಲ ಬಾರಿಗೆ ಸುರಂಗದೊಳಗೆ ಸಂಪರ್ಕ ಸಾಧಿಸಿದ ನಂತರ ಸಿಲುಕಿಕೊಂಡವರ ಮನೋ ಸ್ಥೈರ್ಯ ಹೆಚ್ಚಿಸಲು ಅವರಿಗೆ ವೀಡಿಯೋ ಗೇಮ್, ಸಿನಿಮಾ, ವಿಡಿಯೋಗಳಿದ್ದ 41 ಮೊಬೈಲುಗಳನ್ನು ಪೈಪಿನ ಮೂಲಕ ಒಳಗೆ ಕಳುಹಿಸಿ ಅದನ್ನು ಬಳಸುವಂತೆ ನೋಡಿಕೊಳ್ಳಲಾಯಿತು. ಅವರನ್ನು ಹೊರಗೆ ತರುವ ಸಮಯದಲ್ಲಿ ಆ ಸುರಂಗ ಪ್ರದೇಶದ ಹೊರಗೆ 41 ಹಾಸಿಗೆಯ ತಾತ್ಕಾಲಿಕ ಆಸ್ಪತ್ರೆಯನ್ನೇ ನಿರ್ಮಾಣಮಾಡಿತ್ತು. ಅವರನ್ನು ಹತ್ತಿರದ ಸುರಕ್ಷಿತ ಪ್ರದೇಶಕ್ಕೆ ಕೊಂಡೊಯ್ಯಲು 41 ಪ್ರತ್ಯೇಕ ಆಂಬ್ಯುಲೆನ್ಸ್‌ಗಳಲ್ಲಿ ಗ್ರೀನ್ ಕಾರಿಡಾರ್ ಮಾಡಿ ಕಾರ್ಮಿಕರನ್ನು ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಯಿತು. ಜೊತೆಗೆ ಹೆಚ್ಚಿನ ತುರ್ತು ಚಿಕಿತ್ಸೆಗಾಗಿ ಡೆಹರಾಡೂನಿಗೆ ಕರೆದೊಯ್ಯಲು ಭಾರತೀಯ ವಾಯು ಸೇನೆಯ ಚಿನಾಕ್ ಹೆಲಿಕಾಪ್ಟರ್‌ಗಳನ್ನೂ ಸರ್ಕಾರ ಸನ್ನದ್ಧವಾಗಿರಿಸಿತ್ತು. ಇವರೆಲ್ಲರ ಆರೋಗ್ಯವನ್ನು ಋಷಿಕೇಷದ ಏಮ್ಸ್ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿ ಅವರಲ್ಲಿ ಯಾವುದೇ ಆರೋಗ್ಯ ಸಮಸ್ಯೆ ಇಲ್ಲದೆ ಇರುವುದು ಕಂಡುಬಂದ ಕಾರಣ ಆವರನ್ನು ಅವರವರ ಮನೆಗಳಿಗೆ ಕಳುಹಿಸಿಕೊಡಲಾಯಿತು.

ಈ ಇಡೀ ಪ್ರಕರಣವನ್ನು ಪ್ರಧಾನಮಂತ್ರಿಯವರ ಕಛೇರಿಯಿಂದ ನೇರವಾಗಿ ಮಾನಿಟರ್ ಮಾಡಲಾಗುತ್ತಿತ್ತು. ಈ ಕಾರ್ಯಚರಣೆಯಲ್ಲಿ ಸುಮಾರು 400 ಕ್ಕೂ ಹೆಚ್ಚು ಸಿಬ್ಬಂದಿಗಳು ಸತತವಾಗಿ 17 ದಿನಗಳಕಾಲ ಕೆಲಸ ಮಾಡಿದರು. ನವಂಬರ್ 12 ಅತ್ಯಂತ ಕರಾಳ ದಿನವೇ ಆಗಿದ್ದರೂ ನಂತರ ಈ ಕಾರ್ಮಿಕರನ್ನು ರಕ್ಷಿಸುವಲ್ಲಿ ದೇಶವೇ ಒಂದಾಯಿತು. ಉತ್ತರಾಖಂಡದ ಮುಖ್ಯಮಂತ್ರಿ ಶ್ರೀ ಪುಷ್ಕರ್ ಧಾಮಿ, ಕೇಂದ್ರ ಸಚಿವ ಜನರಲ್ ವಿ.ಕೆ. ಸಿಂಗ್, ಕೇಂದ್ರ ಸಚಿವರಾದ ಶ್ರೀ ನಿತಿನ್ ಘಡ್ಕರಿ, ಭಾರತೀಯ ವಾಯು ಸೇನೆ, ಭೂ ಸೇನೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ, ಒಎನ್‌ಜಿಸಿ, ಎಸ್‌ಡಿಆರ್‌ಎಫ್, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೀಗೆ ಇಡೀ ಆಡಳಿತ ವರ್ಗವೇ ನಡೆಸಿದ ಈ ಕಾರ್ಯಾಚರಣೆಯನ್ನು ಇಡೀ ಜಗತ್ತೇ ಹಿಂದೆ ತಿರುಗಿ ನೋಡುವಂತಹ ರಕ್ಷಣಾ ಕಾರ್ಯವನ್ನು ಭಾರತ ಮಾಡಿತು.

## ವೈಚಾರಿಕ ಉಪನ್ಯಾಸ ಮಾಲೆ - ಕುಟುಂಬ ಸಾಮರಸ್ಯ



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಜಗನ್ನಾಥ ಭವನದ ಸಿಬ್ಬಂದಿ ವರ್ಗದವರಿಗೆ ಪ್ರತಿ ತಿಂಗಳ ಕೊನೆಯ ಮಂಗಳವಾರದಂದು ವೈಚಾರಿಕ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ನವೆಂಬರ್ ತಿಂಗಳಿನಲ್ಲಿ ಬೆಂಗಳೂರು ಉತ್ತರ ಪ್ರಾಂತ್ಯದ ಕುಟುಂಬ ಪ್ರಭೋದನ್ ಸಂಯೋಜಕರಾದ ಶ್ರೀ ಕೆ.ಆರ್. ಚಂದ್ರಶೇಖರ್ ರವರು 'ಕುಟುಂಬ ಸಾಮರಸ್ಯ' ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

ಇಂದಿನ ಸಮಾಜದಲ್ಲಿ ಗಣನೀಯವಾಗಿ ಬದಲಾಗಿರುವ ಕುಟುಂಬ ವ್ಯವಸ್ಥೆ ಹಾಗೂ ವಿದೇಶದಲ್ಲಿ ವಾಸಿಸುತ್ತಿರುವ ಹಿಂದೂ ಕುಟುಂಬಗಳ ಮುಂದಿರುವ ಹಲವಾರು ಸವಾಲುಗಳು ಹಾಗೂ ಆಧುನಿಕ ಸಂದರ್ಭದಲ್ಲಿ ಈ ಸವಾಲುಗಳನ್ನು ಹೇಗೆ ಎದುರಿಸುತ್ತೇವೆ ಮತ್ತು ಕುಟುಂಬಗಳನ್ನು ಸಂತೋಷದಾಯಕ ಮತ್ತು ಆರೋಗ್ಯಕರವಾಗಿ ಮಾಡುವುದು ಹೇಗೆ? ನಾವು ನಮ್ಮ ಸಂಸ್ಕೃತಿಯಿಂದ ಕುಟುಂಬಗಳನ್ನು ಗಟ್ಟಿಯಾಗಿಸಲು ಹಾಗೂ ಮಕ್ಕಳು ಬೆಳೆಯಲು ಮತ್ತು ಸಮಾಜದ ಉತ್ತಮ ವ್ಯಕ್ತಿಯಾಗುವ ವಾತಾವರಣದ ಅನುಷ್ಠಾನದ ಕುರಿತಂತೆ ಹಲವಾರು ವಿಷಯಗಳನ್ನು ಚರ್ಚಿಸಿದರು.

ಈ ಸಂದರ್ಭದಲ್ಲಿ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಮಾಹಿತಿ ವಿಭಾಗದ ಸದಸ್ಯರು ಹಾಗೂ ಜಗನ್ನಾಥ ಭವನದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




# ರಾಜ್ಯ ಬಿಜೆಪಿ ಒಬಿಸಿ ಮೋರ್ಚಾ - ವಿಶೇಷ ಸಭೆ

(ವರದಿ)



ಜಯದೇವ
ರಾಜ್ಯ ಕಾರ್ಯಾಲಯ ಕಾರ್ಯದರ್ಶಿ
ಒಬಿಸಿ ಮೋರ್ಚಾ

**ಬಿ**ಜೆಪಿ ರಾಜ್ಯ ಒಬಿಸಿ ಮೋರ್ಚಾ ರಾಜ್ಯ ವಿಶೇಷ ಸಭೆಯು ದಿ. 22.11.2023ರಂದು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ನಡೆಯಿತು. ಈ ಸಭೆಯಲ್ಲಿ ಸ್ವಾಗತವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸುರೇಶ್‌ಬಾಬುರವರು ನೆರವೇರಿಸಿದರು. ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ಡಾ. ಶ್ಯಾಮಪ್ರಸಾದ್ ಮುಖರ್ಜಿ, ಪಂ. ದೀನದಯಾಳ ಉಪಾಧ್ಯಾಯ ಹಾಗೂ ಭಾರತಮಾತೆಗೆ ಪುಷ್ಪಾರ್ಚನೆಯನ್ನು ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು ಮತ್ತು ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬುರವರು ಭಾಗವಹಿಸಿದ್ದರು. ಶ್ರೀ ಎಸ್.ಎ. ರಾಮದಾಸ್ ಹಾಗೂ ಶ್ರೀ ನೆ.ಲ. ನರೇಂದ್ರಬಾಬುರವರು ಮುಖ್ಯ ಅತಿಥಿಗಳ ಭಾಷಣವನ್ನು ಮಾಡಿದರು.

ಸಭೆಯಲ್ಲಿ ಕಳೆದ ಸಾಲಿನ ಜವಾಬ್ದಾರಿಯ ಸಂದರ್ಭದಲ್ಲಿ ಮಾಡಿದಂತಹ ಕಾರ್ಯಕ್ರಮ, ಪ್ರವಾಸ, ಸಮಾವೇಶ ಮತ್ತು ಎಲ್ಲಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕಾರಿಣಿ ಸಭೆ ಹಾಗೂ ರಾಜ್ಯಾದ್ಯಂತ ಒಬಿಸಿ ಮೋರ್ಚಾವು 312 ಮಂಡಲಗಳ ಪೈಕಿ 210 ಮಂಡಲಗಳ ಒಬಿಸಿ ಪ್ರಮುಖರ ಪಟ್ಟಿಯನ್ನು ಸಂಗ್ರಹ ಮಾಡಿದಂತಹ ಕಾರ್ಯವನ್ನೊಳಗೊಂಡಂತೆ ಅವಲೋಕನ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಒಬಿಸಿ ಮೋರ್ಚಾದ ರಾಜ್ಯ ಉಸ್ತುವಾರಿಗಳಾದ ಶ್ರೀ ಸಿದ್ದರಾಜುರವರು ಭಾಗವಹಿಸಿದ್ದರು.

ಅದೇ ದಿವಸ ಬೆಳಿಗ್ಗೆ 11.00 ಗಂಟೆಯಿಂದ ಆಯೋಜಿಸಲಾಗಿದ್ದ ಒಬಿಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ರಾಜ್ಯದ ಪಧಾಧಿಕಾರಿಗಳು, ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು ಮತ್ತು ಜಿಲ್ಲಾ ಅಧ್ಯಕ್ಷರುಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ಒಬಿಸಿ ಮೋರ್ಚಾದ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರಬಾಬುರವರು, ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ಭಾಗವಹಿಸಿ,




ಪ್ರಧಾನಮಂತ್ರಿಗಳ ವಿಶ್ವಕರ್ಮ ಯೋಜನೆ ಹಾಗೂ ಪಿಎಂ ಸ್ವನಿಧಿ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿ, 18 ವರ್ಗದ ಕರಕುಶಲ ಕರ್ಮಿಗಳಿಗೆ ಈ ಯೋಜನೆಯಿಂದ ಸಿಗುವ ಸೌಲಭ್ಯ ಹಾಗೂ ಪ್ರಯೋಜನದ ಕುರಿತು ಜಾಗೃತಿ ಮೂಡಿಸುವಂತೆ ತಿಳಿಸಿದರು.

ಒಬಿಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿವೇಕಾನಂದ ಡಬ್ಬಿಯವರು ಈ ಕಾರ್ಯಕ್ರಮದ ನಿರೂಪಣೆಯನ್ನು ಹಾಗೂ ಒಬಿಸಿ ಮೋರ್ಚಾ ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಜಯದೇವ ರವರು ವಂದನಾರ್ಪಣೆಯನ್ನು ನೆರವೇರಿಸಿದರು.

# 'ಮಾಸದ ಮಾಧುರ್ಯ' 80ನೇ ಕಾರ್ಯಕ್ರಮದಲ್ಲಿ 'ಸ್ವರ ಲಯ ತರಂಗ'



ಧ್ವನಿ ಬಂದ ದಿಕ್ಕಿನತ್ತ ಆಲಿಸುವುದು, ಲಯಬದ್ಧವಾಗಿದ್ದರೆ ಆಸ್ವಾದಿಸುವುದು, ತಾಳ ಬದ್ಧವಾಗಿದ್ದರೆ ಇದ್ದಲ್ಲೆ ತಾಳ ಹಾಕುವುದು ಬಹುತೇಕ ಮನುಷ್ಯನ ಕ್ರಿಯೆ. 03 ಡಿಸೆಂಬರ್ 2023 ರಂದು ಮಾಸದ ಮಾಧುರ್ಯದ 80ನೇ ಕಂತಿನಲ್ಲಿ ಈ ತರಹದ ಒಂದು ಅನುಭೂತಿಯನ್ನು ಕೊಟ್ಟಿದ್ದು ಸತ್ಯ. ಬೆಂಗಳೂರಿನ ಲಯರ್ಣವ ತಾಳವಾದ್ಯ ತಂಡದವರಿಂದ 'ಸ್ವಯ ಲಯ ತರಂಗ' ಎಂಬ ಕಾರ್ಯಕ್ರಮವು ಆಗಮಿಸಿದ್ದ ಎಲ್ಲ ಶ್ರೋತೃರನ್ನು ಒಂದೂವರೆ ಗಂಟೆ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಯಿತು.

ಕಲಾವಿದ ಉದ್ಧವ ಶ್ರೀ ಕೃಷ್ಣ ಅವರ ಗಣಪತಿ ಸ್ತುತಿಯ ನಂತರ ವಿಧಾನಪರಿಷತ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ, ಕಲಾತಂಡದ ನಿರ್ದೇಶಕರಾದ ಶ್ರೀ ಸುನೀಲ್ ಸುಬ್ರಮಣ್ಯ ಅವರು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶ್ರೀಯುತ ದೀಪಕ್ ಹೆಬ್ಬಾರ್ ಅವರ ಕೊಳಲಿನ ನಾದ ಕಾರ್ಯಕ್ರಮದ ಬಹುಪಾಲು ಅವಧಿಯಲ್ಲಿ ಕಲಾಭಿಮಾನಿಗಳ ಸಂತೋಷಕ್ಕೆ ಕಾರಣವಾಗಿದ್ದು ಶ್ಲಾಘನೀಯ. ಮೃದಂಗದಲ್ಲಿ ಶ್ರೀ ಸುನೀಲ್ ಸುಬ್ರಮಣ್ಯ ಅವರು ಲಯಬದ್ಧವಾಗಿ, ತಾಳಬದ್ಧವಾಗಿ ನುಡಿಸಿದ್ದು ಅದ್ಬುತವಾಗಿತ್ತು. ವಯೋಲಿನ್‌ನಲ್ಲಿ ಶ್ರೀ ಜನಾರ್ಧನ್ ಎಸ್., ತಬಲದಲ್ಲಿ ಶ್ರೀ ಆದರ್ಶ ಶೆಣೈ, ಖಂಜರದಲ್ಲಿ ಶ್ರೀ ಕಾರ್ತಿಕ್ ಆರ್.,ಮೋರ್ಚಿಂಗ್‌ನಲ್ಲಿ ಶ್ರೀ ಲಕ್ಷ್ಮೀನಾರಾಯಣ, ಘಟಂನಲ್ಲಿ ಶ್ರೀ ಪಣೀಂದ್ರ, ತವಿಲ್‌ನಲ್ಲಿ ಶ್ರೀ ರಾಜಾ, ರಿಧಂಪ್ಯಾಡ್‌ನಲ್ಲಿ ಶ್ರೀ ಕಾರ್ತಿಕ್ ವೈದಾತ್ರಿ, ತಾಳದಲ್ಲಿ ಶ್ರೀ ಕೃಷ್ಣ ವೇದಾಂತ ಇವರೆಲ್ಲರ ತಾಳಮೇಳ ಸಮರ್ಪಕವಾಗಿತ್ತು.

ಒಂದೊಂದು ಸ್ವರ ಸಂವೇದಿ ತಾಳವಾದ್ಯ ಇಡಿಯಾಗಿ ನುಡಿಸಿದಾಗ ಸಿಗುವ ಆನಂದ, ರೋಮಾಂಚನದ ಅನುಭವವನ್ನು ಅಲ್ಲಿದ್ದೆ ಆಸ್ವಾದಿಸಬೇಕು, ಅನುಭವಿಸಬೇಕು, ರುಚಿ ಸವಿಯಬೇಕು. ಒಂದು ಬಾರಿ ಬಿಡಿ ಬಿಡಿಯಾಗಿ ನಂತರ ಇಡಿಯಾಗಿ ಹೊರಡಿಸಿದ ಧ್ವನಿ ತರಂಗ ಜಗನ್ನಾಥ ಭವನದ ಮಂಥನ ಸಭಾಂಗಣವನ್ನು ಆವರಿಸಿಕೊಂಡಿತ್ತು. ಕಾರ್ಯಕ್ರಮ ಆಯೋಜಿಸಿದ್ದಕ್ಕೆ ಧನ್ಯತಾ ಭಾವ ದೊರಕಿತು.







# ವಿಕಸಿತ ಭಾರತ ಸಂಕಲ್ಪ ಯಾತ್ರೆ

**ಕೇಂ**ದ್ರ ಸರಕಾರದ ಯೋಜನೆಗಳ ಜಾಗೃತಿ ಮೂಡಿಸುವ ಹಾಗೂ ಜನರ ಮನೆ ಬಾಗಿಲಿಗೆ ತಲುಪಿಸುವ ಯಾತ್ರೆ ಇದಾಗಿದೆ. ಸಮೃದ್ಧ ಭಾರತದ ಸಂಕಲ್ಪ ಈ ವಿಕಸಿತ ಭಾರತದ ಸಂಕಲವಾಗಿದೆ, ಇದು ವಿಕಾಸಶೀಲ ಭಾರತದ ಪರಿಕಲ್ಪನೆಗೆ ಪುಷ್ಟಿ ನೀಡಲಿದೆ ಎಂದು ಕೇಂದ್ರ ನಾಗರಿಕ ವಿಮಾನ ಯಾನ ಸಚಿವ ಶ್ರೀ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದರು.

ತಾಲೂಕಿನ ಆವತಿ ಗ್ರಾಮದಲ್ಲಿ ರವಾರ ಏರ್ಪಡಿಸಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಬಡತನ ಮುಕ್ತವಾಗಬೇಕು. ಸ್ವಚ್ಛ, ಆರೋಗ್ಯಯುಕ್ತ ಭಾರತ, ಬಡವರ, ಸಶಸ್ತೀಕರಣವಾಗಬೇಕು ಎನ್ನುವ ಸಂಕಲ್ಪಗಳನ್ನು ಹೊಂದಿರುವ ಪ್ರಧಾನಿ ಅವರ ಕನಸನ್ನು ನನಸು ಮಾಡಬೇಕಾಗಿರುವುದು ನಮ್ಮೆಲ್ಲರ ಹೊಣೆಯಾಗಿದ್ದು, ಕೇಂದ್ರದ ಜನಪರ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಮುನ್ನಡೆಯಾಗಬೇಕು ಎಂದು ಹೇಳಿದರು.

ಜಿ–20 ಶೃಂಗ ಸಭೆಯ ಅಧ್ಯಕ್ಷತೆವಹಿಸಿರುವ ಭಾರತ ವಿಶ್ವಗುರುವಾಗುವತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಜಗತ್ತಿನ ಮೂರನೇ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮುವ ಸಾಮರ್ಥ್ಯವನ್ನು ಭಾರತ ಹೊಂದಿದೆ. ಭಾರತದ ಸಂತುಷ್ಟೀಕರಣ ನೀತಿ, 19 ವರ್ಷಗಳಿಂದ ಪ್ರಧಾನಿ ಶ್ರೀ ಮೋದಿಯವರ ನಿರಂತರ ಪರಿಶ್ರಮ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ ಎಂದು ಶ್ರೀ ಜ್ಯೋತಿರಾದಿತ್ಯ ಸಿಂದಿಯಾ ತಿಳಿಸಿದರು.

ಉಜ್ವಲ ಯೋಜನೆ, ವಸತಿ ಯೋಜನೆಗಳು ಬಡವರಿಗೆ ನೆರವಾಗಿವೆ. ಡಿಜಿಟಲೀಕರಣ, ಯುಪಿಐ ಪಾವತಿ, ನೇರ ನಗದು ವರ್ಗಾವಣೆಯಿಂದ ಭ್ರಷ್ಟಾಚಾರಕ್ಕೆ ಆಸ್ಪದ ಇಲ್ಲದಂತಾಗಿದೆ. ಪಿಎಂ ಆವಾಸ್ ಯೋಜನೆಯಿಂದ ಲಕ್ಷಾಂತರ ಮಂದಿಗೆ ವಸತಿ ಸೌಲಭ್ಯ ಹಾಗೂ ಗ್ರಾಮೀಣರಿಗೆ 'ಜಲಜೀವನ್ ಮಿಷನ್' ನಿಂದ ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ ಎಂದು ಅವರು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಮಾತನಾಡಿ,



ಕೇಂದ್ರದ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರಕಾರ ಉತ್ಸಾಹ ತೋರುತ್ತಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಕೇಂದ್ರದ ಯೋಜನೆಗಳಿಗೆ ಹಿನ್ನಡೆಯಾಗಿದೆ. ರಾಜ್ಯ ಸರಕಾರದ ವಿರುದ್ಧ ಬೃಹತ್ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಕಾಂಗ್ರೆಸ್ ಮುಖಂಡರು ಕಳೆದ ಬಾರಿ ಬಿಜೆಪಿ ಸರಕಾರದ ವಿರುದ್ಧ 40% ಕಮೀಷನ್ ಆರೋಪ ಮಾಡಿದ್ದರು, ಜನರೂ ಅದನ್ನು ನಂಬಿ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತಂದರು. ಆದರೆ ನಿನ್ನೆ ಜಾರ್ಖಂಡ್‌ನ ಕಾಂಗ್ರೆಸ್ ರಾಜ್ಯಸಭೆ ಸದಸ್ಯ ಎಂ.ಪಿ. ಧೀರಜ್ ಸಾಹೋ ಮನೆ ಮೇಲೆ ಐಟಿ ದಾಳಿ ಆಗಿದೆ. ಅವರ ಮನೆಯಲ್ಲಿ 300ರಿಂದ 400 ಕೋ.ರೂ. ಜಪ್ತಿ ಮಾಡಿದ್ದಾರೆ. ಹಾಗೆಯೇ ಒರಿಸ್ಸಾದಲ್ಲೂ ನೂರಾರು ಕೋಟಿ ಹಣ ಜಪ್ತಿ ಆಗಿದೆ. ಇದು ಕಾಂಗ್ರೆಸ್ ಅಧಿಕಾರದಲ್ಲಿರುವ ಹೇಗೆ ಕೊಳ್ಳೆ ಹೊಡಿತಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ಕಿಡಿ ಕಾರಿದರು.

ಬಡವರ ಹಣವನ್ನು ಕಾಂಗ್ರೆಸ್ ಹೇಗೆ ಕಿತ್ತು ತಿನ್ನುತ್ತಿದೆ ಎಂಬುದು ರುಜುವಾತಾಗಿದೆ. ರಾಜ್ಯದಲ್ಲೂ ಕೋಟಿ ಕೋಟಿ ಹಣ ಜಪ್ತಿ ಆಗಿದ್ದು, ಕಾಂಗ್ರೆಸ್ ಲೂಟಿ ಜಗಜ್ಜಾಹೀರಾಗಿದೆ. ಲೂಟಿ ಮಾಡಿರುವ ಹಣವನ್ನು ಮರಳಿ ಬಡವರಿಗೆ ಕೊಡಿಸುವ ಕೆಲಸ ಮಾಡುತ್ತೇವೆ. ಸ್ವತಃ ಪ್ರಧಾನಿ ಶ್ರೀ ಮೋದಿ ಅವರೇ ಈ ಬಗ್ಗೆ ಪ್ರತಿಜ್ಞೆ ಮಾಡಿದ್ದಾರೆ ಎಂದು ಹೇಳಿದರು. ಎಂಎಲ್‌ಸಿ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಮುಖಂಡ ಎಂ.ನಾರಾಯಣಗೌಡ, ಜಿಲ್ಲಾಧ್ಯಕ್ಷ ಎ.ವಿ.ನಾರಾಯಣಸ್ವಾಮಿ, ವತಿ ಗ್ರಾಪಂ ಅಧ್ಯಕ್ಷೆ ಮುನಿರತ್ನಮ್ಮ, ಅಂಬರೀಶ್ ಗೌಡ, ಮಂಜುನಾಥ್, ರವಿಕುಮಾರ್, ವಿನಯ್‌ಕುಮಾರ್, ತಾಲೂಕು ಅಧ್ಯಕ್ಷ ಸುಂದರೇಶ್, ಭೂನ್ಯಾಯ ಮಂಡಳಿ ಸದಸ್ಯರಾದ ಆರ್.ಗಿರೀಶ್, ಮೋಹನ್ ಮತ್ತಿತರರು ಹಾಜರಿದ್ದರು.

22 ಹಿರಿಯ ಕಾರ್ಯಕರ್ತರ

## ಪರಿಚಯಮಾಲೆ

# ದಲಿತ ಸಮುದಾಯದ ಚಂದಪ್ಪಾ ಸಮಗಾರ





ಸೂರ್ಯಕಾಂತ ದೋಣಿ
ವಿಭಾಗ ಸಹ-ಸಂಘಟನಾ ಪ್ರಧಾನ ಕಾರ್ಯದರ್ಶಿ
ಕಲಬುರಗಿ

ಜನಸಂಘದ ಪ್ರಾರಂಭದ ದಿನಗಳಲ್ಲಿ ಇದೊಂದು ಬ್ರಾಹ್ಮಣರ ಪಾರ್ಟಿ ಎಂದು ಕರೆಸಿಕೊಳ್ಳುವ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಭಾರತೀಯ ಜನಸಂಘದ ಮೊದಲನೇ ಅಧ್ಯಕ್ಷರಾದವರು ದಲ್ಲಿತ (ಸಮಗಾರ) ಸಮುದಾಯದ ಚಂದಪ್ಪಾ ಸಮಗಾರ. ಇವರು ಮೂಲತಃ ಯಾದಗಿರಿ ಜಿಲ್ಲೆಯ ಗುರುಮಿಠ್‌ಕಲ್‌ನವರು. ಇವರ ತಂದೆ ಮೈಲಾರಲಿಂಗಪ್ಪ, ತಾಯಿ ಹುಸೇನಮ್ಮಾ ಇವರಿಗೆ ನಾಲ್ಕು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಇವರಲ್ಲಿ ಮೂರನೇ ಮಗನೇ ಚಂದಪ್ಪಾ. ಇವರು ಹುಟ್ಟಿದ್ದು 21 ಜೂನ್ 1935ರಲ್ಲಿ. ಕುಟುಂಬದ ನಿರ್ವಹಣೆಗಾಗಿ ವಲಸೆ ಬಂದ ಈ ಕುಟುಂಬ ಸೇಡಂಗೆ ಬಂದು ನೆಲೆಸಿತ್ತು.

ಸ್ವಾತಂತ್ರ್ಯದ ಹೋರಾಟ ಹಾಗೂ ಹೈದರಾಬಾದ್ ನಿಜಾಮರ ಹತ್ಯಾಕಾಂಡವನ್ನು ನೋಡಿ ಬೆಳೆದದ್ದು ಚಂದಪ್ಪಾ, ಈ ಸಂದರ್ಭದಲ್ಲಿ ಚಂದಪ್ಪಾ ಆರ್ಯ ಸಮಾಜದ ಪ್ರಭಾವಕ್ಕೆ ಒಳಗಾಗಿ ಆರ್ಯ ಸಮಾಜದ ಸಕ್ರಿಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರಾದ ಪ್ರಭಾಕರರಾವ ಕುಲಕರ್ಣಿ ಹಾಗೂ ಪರಿವಾರದ ಹಿರಿಯರ ಸಂಪರ್ಕದ ಪರಿಣಾಮವಾಗಿ ಸಂಘದ ಸ್ವಯಂಸೇವಕರಾದರು. ಸಂಘಪರಿವಾರದ ಜೊತೆಗಿನ ಒಡನಾಟ, ಹಿರಿಯರ ಜೊತೆಗಿನ ಸಂಬಂಧಗಳನ್ನು ಗಮನಿಸಿದ ಇವರ ಸಮುದಾಯದ ಹಲವು ಜನರ ವಿರೋಧದ ನಡುವೆಯೂ ಶ್ರದ್ಧೆಯಿಂದ ಕೆಲಸ ಮಾಡಿದರು.

ರಾಮ ಮಂದಿರದ ಹೋರಾಟ, ರಾಮ ರಥಯಾತ್ರೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಸಕ್ರಿಯರಾಗಿ ಭಾಗವಹಿಸಿದರು.ಕಡು ಬಡತನದಲ್ಲೂ ಕಡಿಮೆಯಾಗದ ಉತ್ಸಹದ ಹೋರಾಟ ಹಾಗೂ ದೇಶಭಕ್ತಿ ಇದೆಲ್ಲವನ್ನು ಗಮನಿಸಿದ ಹಿರಿಯರು ಇವರನ್ನು ಸೇಡಂ ತಾಲ್ಲೂಕಿನ ಭಾರತೀಯ ಜನಸಂಘದ ಮೊದಲನೇ ಅಧ್ಯಕ್ಷರಾಗಿ ಆಯ್ಕೆ ಮಾಡಿದರು.

ಜಾತಿ ಹೀನನ ಮನೆಯ ಜ್ಯೋತಿ ತಾ ಹಿನವೇ ಜಾತಿ ವಿಜಾತಿ
ಏನಬೇಡುದೇವನೋಲಿದಾತನೇ ಜಾತ ಸರ್ವಜ್ಞ॥

ಎನ್ನುವಂತೆ ಕಿತ್ತು ತಿನ್ನುವ ಬಡತನ, ಅಪಮಾನ, ಸಮಾಜಿಕ ಅಸಡ್ಡೆಯ ನಡುವೆಯೂ ಚಂದಪ್ಪಾ ನಿರಂತರವಾಗಿ ಪಕ್ಷ ಸಂಘಟನೆಗೆ ಸಮಯನೀಡಿ ಕೆಲಸ ಮಾಡುತ್ತಾರೆ.ಜನಸಂಘದ ಪ್ರಾರಂಭದ ಒಂದೇ ವರ್ಷದಲ್ಲಿ ಚುನಾವಣೆ ಜನಸಂಘ ಅಂದರೆ ಏನು ಅಂತ ಕೇಳುವ ಪರಸ್ಥಿತಿಯಲ್ಲಿ ಚುನಾವಣೆ ಎದುರಿಸಬೇಕಾಯಿತು. 1952 ರ ಚುನಾವಣೆ ಸೇಡಂ ವಿಧಾನಸಭಾ ಕ್ಷೇತ್ರ ಮೀಸಲು ವಿಧಾನಸಭಾ ಕ್ಷೇತ್ರವಾಗಿತ್ತು.

ಸೇಡಂ ಕ್ಷೇತ್ರ ಹೇಳಿ-ಕೇಳಿ ಕೃಷಿ ಪ್ರಧಾನವಾದ ಕ್ಷೇತ್ರವಾಗಿತ್ತು ಹೀಗಾಗಿ ರಾಜಕಾರಣ ಅಂದರೆ ಜನ ಮೂಗು ಮುರಿಯುವ ಸಂದರ್ಭದಲ್ಲಿ ಚಂದಪ್ಪಾ ಸಮಗಾರ ಅವರ ನೇತೃತ್ವದಲ್ಲಿ ಮೀನಾ ಹಾಬಾಳದ ಮಹಾದೇವಪ್ಪ ಗದ್ದುಗೆ ಎಂಬುವರನ್ನು ಚುನಾವಣೆಗೆ ನಿಲ್ಲಿಸಲಾಯಿತು. ಯಾವುದೇ ವ್ಯವಸ್ಥೆಗಳು ಇರಲಿಲ್ಲ, ಯಾರು ಇವರನ್ನು ಮಾತನಾಡಿಸುತ್ತಿರಲಿಲ್ಲ. ಇವರು ಪ್ರಚಾರಕ್ಕೆ ಬಂದರೆ ಇವರನ್ನು ನೋಡಿ ಜನ ಮನೆಯ ಬಾಗಿಲಗಳನ್ನು ಮುಚ್ಚಿಕೊಳ್ಳುತ್ತಿದ್ದರು ಇಂತಹ ಪರಸ್ಥಿಯಲ್ಲಿ ತಮ್ಮ ಪ್ರಖರವಾದ ಪ್ರಚಾರದ ಮೂಲಕ ಜನಸಂಘದ ವಿಚಾರಧಾರೆಗಳನ್ನು ಜನರ ಮನೆಗಳಿಗೆ ತಲುಪಿಸುವುದರ ಮೂಲಕ ಈ ಭಾಗದಲ್ಲಿ ಜನಸಂಘವನ್ನು ಕಟ್ಟಿ ಬೆಳೆಸಿದರು.

ಚಂದಪ್ಪಾ ಸಮಗಾರ ಅವರ ಬದುಕು ಹೇಗಿತ್ತು ಅಂದರೆ

**''ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು,ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ. ಬೆಲ್ಲ-ಸಕ್ಕರೆಯಾಗ ದೀನದುರ್ಬಲರಿಂಗೆ.ಎಲ್ಲರೊಳಗೊಂದಾಗು ಮಂಕುತಿಮ್ಮ'**

ಎಂಬುವಂತೆ ಇವರ ಜೀವನ.

# 'ಮನ್ ಕಿ ಬಾತ್'

# 'ವಿದೇಶಗಳಲ್ಲಿ ಮದುವೆ ಬೇಡ'



## ಭಾರತೀಯರಿಗೆ ಪ್ರಧಾನಿ ಶ್ರೀ ಮೋದಿ ಸಲಹೆ

**ಭಾ**ರತೀಯ ಕುಟುಂಬಗಳು ತಮ್ಮವರ ಮದುವೆಗಳನ್ನು ವಿದೇಶಗಳಲ್ಲಿ ಮಾಡುವುದೇಕೆ ಎಂದು ಪ್ರಶ್ನಿಸಿರುವ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು, ಭಾರತೀಯರು ತಮ್ಮವರ ಮದುವೆಗಳನ್ನು ಭಾರತದೊಳಗೇ ಆಯೋಜಿಸಲಿ ಎಂದು ಕರೆ ನೀಡಿದ್ದಾರೆ.

ಪ್ರತಿ ತಿಂಗಳ ಕೊನೆಯ ಭಾನುವಾರ ಪ್ರಸಾರವಾಗುವ ಮನ್ ಕಿ ಬಾತ್ ತಿಂಗಳ ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ಮೋದಿ ಈ ಆಶಯವನ್ನು ವ್ಯಕ್ತಪಡಿಸಿದರು. ಭಾರತ ದೇಶವು 'ಮೇಕ್ ಇನ್ ಇಂಡಿಯಾ ಅಭಿಯಾನ' ನಡೆಸುತ್ತಿದೆ. ಇದರೊಂದಿಗೆ 'ವೋಕಲ್ ಫಾರ್ ಲೋಕಲ್' ಎಂಬ ಘೋಷ ವಾಕ್ಯವನ್ನೂ ಅಳವಡಿಸಿಕೊಂಡಿದೆ. ಇದರ ಅಂಗವಾಗಿ ಸ್ಥಳೀಯ ಉದ್ಯಮಗಳನ್ನು ಪ್ರೋತ್ಸಾಹಿಸುವ, ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವ ಹಾಗೂ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯ ಆಶಯದ ಅನ್ವಯ ಪ್ರಧಾನಿ ಶ್ರೀ ಮೋದಿ ಅವರು ಈ ಕರೆ ನೀಡಿದ್ದಾರೆ. ಕೆಲವರು ವಿದೇಶಗಳಲ್ಲಿ ಮದುವೆ ಆಗಲು ಇಚ್ಛಿಸುತ್ತಾರೆ. ಆದರೆ, ನಾವು ಸ್ಥಳೀಯರಿಗಾಗಿ ಸ್ಥಳೀಯ ಉತ್ಪನ್ನಗಳ ಬಳಕೆಯನ್ನು ಪ್ರೋತ್ಸಾಹಿಸಬೇಕು. ಇದರ ಭಾಗವಾಗಿ ಮದುವೆಗಳೂ ಸ್ವದೇಶದಲ್ಲೇ ಆಗಲಿ. ಮದುವೆಯ ಹಂತಕ್ಕೂ ನಾವು 'ವೋಕಲ್ ಫಾರ್ ಲೋಕಲ್ ಅಭಿಯಾನ'ವನ್ನು ತರಬೇಕಿದೆ. ಸದ್ಯದ ಮಟ್ಟಿಗೆ ವಿದೇಶಗಳಲ್ಲಿ ಇರುವ ಕೆಲವು ಸೌಲಭ್ಯಗಳು ಭಾರತದಲ್ಲಿ ಇಲ್ಲ ಎಂದು ಒಪ್ಪುತ್ತೇನೆ. ಆದರೆ, ಭಾರತವೂ ಶೀಘ್ರದಲ್ಲೇ ಆ ಹಂತಕ್ಕೆ ಬೆಳೆಯಲಿದೆ ಎಂದು ಹೇಳಿದ್ದಾರೆ.


### 1949ರ ನವೆಂಬರ್ 26 ಮಹತ್ವದ ದಿನ



ಈ ದಿನವು ಭಾರತ ಸಂವಿಧಾನವನ್ನು ಅಳವಡಿಸಿಕೊಂಡ ದಿನ, 2015ರಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. 'ಅಂಬೇಡ್ಕರ್ ಅವರ 125ನೇ ಜನ್ಮ ದಿನ ಆಚರಣೆ ಮಾಡಿದ ವೇಳೆಯಲ್ಲೇ ನವೆಂಬರ್ 26 ರಂದು ಸಂವಿಧಾನ ದಿನ ಆಚರಿಸುವ ಸಂಕಲ್ಪ ಮಾಡಲಾಗಿತ್ತು. ಹೀಗಾಗಿ, ಸಂವಿಧಾನ ದಿನಕ್ಕೆ ಎಲ್ಲರಿಗೂ ಶುಭಾಶಯ ಕೋರುವೆ' ಎಂದು ಪ್ರಧಾನಿ ಶ್ರೀ ಮೋದಿ ಹೇಳಿದ್ದಾರೆ.

### ಮುಂಬೈ ದಾಳಿ ಮರೆಯಲಾಗದು

2008 ನವೆಂಬರ್ 26 ರಂದು ಮುಂಬೈ ಮೇಲೆ ನಡೆದ ಭಯೋತ್ಪಾದಕ ದಾಳಿ – 26/11 ಎಂದೇ ಕುಖ್ಯಾತವಾಗಿದ್ದು, ಅಂದು ಉಗ್ರರು ಮುಂಬೈ ಮಹಾನಗರ ಮಾತ್ರವಲ್ಲ, ಇಡೀ ದೇಶವನ್ನೇ ನಡುಗಿಸಿದರು. ಆದರೆ, ಭಾರತವು ತನ್ನ ಸಾಮರ್ಥ್ಯದಿಂದ ಚೇತರಿಕೆ ಕಂಡಿತು. ಭಾರತ ಈ ನಿಟ್ಟಿನಲ್ಲಿ ಭಯೋತ್ಪಾದನೆ ವಿರುದ್ಧ ಸಮಗ್ರ ಹೋರಾಟ ನಡೆಸುತ್ತಿದೆ ಎಂದು ಪ್ರಧಾನಿ ಶ್ರೀ ಮೋದಿ ಭರವಸೆ ನೀಡಿದರು.




**ಯುಪಿಐ ಬಳಕೆಗೆ ಕರೆ :** ಡಿಸೆಂಬರ್‌ನಲ್ಲಿ ದೇಶದ ಎಲ್ಲ ಜನರೂ ಯುಪಿಐ ಮೂಲಕವೇ ತಮ್ಮ ಎಲ್ಲ ಹಣಕಾಸು ವಹಿವಾಟು ನಡೆಸಲು ಪ್ರಧಾನಿ ಶ್ರೀ ಮೋದಿ ಕರೆ ನೀಡಿದ್ದಾರೆ. ಪ್ರತಿ ತಿಂಗಳು ಯುಪಿಐ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿದ್ದು, ಭವಿಷ್ಯದಲ್ಲಿ ಮತ್ತಷ್ಟು ಹೆಚ್ಚಾಗಲಿ ಎಂದು ಪ್ರಧಾನಿ ಶ್ರೀ ಮೋದಿ ಆಶಿಸಿದ್ದಾರೆ.



**ಚಾಮರಾಜನಗರ ಯುವತಿ ಸಾಧನೆಗೆ ಶ್ಲಾಘನೆ :** ಬಾಳೆದಿಂಡಿನಲ್ಲಿ ಕರಕುಶಲ ವಸ್ತು ತಯಾರಿಸುವ ಮೂಲಕ ಯಶಸ್ವೀ ಉದ್ಯಮಿ ಎನಿಸಿರುವ ಗುಂಡ್ಲುಪೇಟೆ ತಾಲೂಕಿನ ಆಲಹಳ್ಳಿಯ ಯುವತಿ, ಎಂ.ಟೆಕ್. ಪದವೀಧರೆ ಶ್ರೀಮತಿ ವರ್ಷಾ ಶ್ರೀಕಂಠಸ್ವಾಮಿ ಅವರ ಸಾಧನೆಯನ್ನು ಪ್ರಧಾನಿ ಶ್ರೀ ಶ್ಲಾಘಿಸಿದ್ದಾರೆ. ಕೊರೋನಾ ಸಮಯದಲ್ಲಿ ಉದ್ದುತ್ತೂರಿನ ಜಮೀನಿನಲ್ಲಿ ಉದ್ಯಮ ಆರಂಭಿಸಿ ಬಿದರಿಗೆ ಉದ್ಯೋಗವನ್ನೂ ನೀಡಿದ್ದಾರೆ. ಬಾಳೆದಿಂಡಿನಿಂದ ಆಲಂಕಾರಿಕ ವಸ್ತುಗಳು, ವ್ಯಾನಿಟಿ ಬ್ಯಾಗ್, ಚಾಪೆ, ಯೋಗ ಮ್ಯಾಟ್ ತಯಾರಿಸುವ ಮೂಲಕ ಮಾದರಿಯಾಗಿದ್ದಾರೆ ಎಂದು ಪ್ರಧಾನಿ ಶ್ರೀ ಮೋದಿ 'ಮನ್ ಕೀ ಬಾತ್'ನಲ್ಲಿ ಪ್ರಶಂಸೆಯ ಮಾತುಗಳನ್ನಾಡಿ 'ವೋಕಲ್ ಫಾರ್ ಲೋಕಲ್' ನಿಂದ ಇದು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ.



ಸಂಸತ್ ಭವನದ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಪುಷ್ಪಾರ್ಚನೆಯ ಮೂಲಕ ಮಹಾಪರಿನಿರ್ವಾಣ ದಿನಾಚರಣೆ



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳ ಸಭೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಕನಕದಾಸ ಜಯಂತಿ ಆಚರಣೆ

## ನಮ್ಮ ಸಂಕಲ್ಪ ವಿಕಸಿತ ಭಾರತ



ಯಾದಗಿರಿ



ದಾವಣಗೆರೆ




ಕಲಬುರ್ಗಿ



ಹಾವೇರಿ

## ಸಮಷ್ಟಿ




# ನಾನು ಸಂಘಟನೆಯೊಳಗಿದ್ದೇನೆ, ನನ್ನೊಳಗೆ ಸಂಘಟನೆಯ ವಿಚಾರಗಳಿವೆಯೇ?

ಪ್ರಸಕ್ತ ಕಾಲಘಟ್ಟದಲ್ಲಿ ರಾಜಕಾರಣದ ಅನೇಕ ಸಮಸ್ಯೆಗಳಿಗೆ ಉತ್ತರವೇ ಸಿಗದೆ ರಾಜಕಾರಣದ ಹಾದಿಯೇ ಮಸುಕಾದಾಗ ನಮ್ಮ ರಾಮಾಯಣ, ಮಹಾಭಾರತಗಳಲ್ಲಿಯೇ ಒಂದು ಉತ್ತಮ ಉತ್ತರವೂ ಸಿಗಬಲ್ಲದು, ಪರಿಹಾರವೂ ಲಭ್ಯವಾಗಬಹುದು. ಗಮನಿಸಬೇಕಾದ ಸೂಕ್ಷ್ಮತೆ, ಸೂಕ್ತವಾಗಿ ವಿಮರ್ಶಿಸಬೇಕಾದ ಹೊಣೆಗಾರಿಕೆ ನಮ್ಮಲ್ಲಿರಬೇಕು ಅಷ್ಟೇ.

ರಾಮಾಯಣದಲ್ಲಿನ ಒಂದು ಸುಂದರ ಘಟನೆ. ಹನುಮಂತನಿಲ್ಲದೆ ರಾಮಾಯಣ ಪರಿಪೂರ್ಣವೇ ಇಲ್ಲ. ಅಂದು ಶ್ರೀ ರಾಮನ ಪಟ್ಟಾಭಿಷೇಕದ ದಿನ. ಇಡೀ ಅಯೋಧ್ಯೆ ಸಂಭ್ರಮದಲ್ಲಿ ಮುಳುಗಿದೆ. ಗಣ್ಯರಿಗೆ, ಋಷಿ-ಮುನಿಗಳಿಗೆ, ಪ್ರಮುಖರಿಗೆ ಎಲ್ಲರೂ ಆಹ್ವಾನಿತರಾಗಿ ಆಗಮಿಸಿದ್ದಾರೆ. ಬಂದಂತ ಎಲ್ಲರಿಗೂ ಶ್ರೀ ಸೀತಾರಾಮರು ಉಡುಗೊರೆಗಳನ್ನು ನೀಡುತ್ತಿದ್ದಾರೆ. ಆದರೆ ರಾಮನ ಪರಮ ಭಕ್ತ, ಆಪ್ತ ಹನುಮಂತ ಮಾತ್ರ ಅಲ್ಲೆಲ್ಲೂ ಕಾಣುತ್ತಿಲ್ಲ. 'ಹನುಮಂತನೆಲ್ಲಿ?', ಸೀತೆ ರಾಮನ ಬಳಿ ಕೇಳುತ್ತಾಳೆ. ಅದಕ್ಕೆ ರಾಮ, 'ಮರದ ಮೇಲೋ, ಎಲ್ಲೊ ಇರ್ತಾನೆ' ಎನ್ನುತ್ತಾನೆ.

ಮಾತೃ ಹೃದಯಿ, ಸೀತೆಯ ಮನಸ್ಸು ತಡೆಯಲಿಲ್ಲ, ರಾಮನೊಂದಿಗೆ ಹನುಮಂತನನ್ನು ಹುಡುಕುತ್ತಾ ಹೋಗುತ್ತಾಳೆ, ಯಾವುದೋ ಒಂದು ಮರದ ಕೆಳಗೆ ಅವನ ಪಾಡಿಗೆ ಅವನು ಇರ್ತಾನೆ. 'ಪಟ್ಟಾಭಿಷೇಕ ನಡೆಯುತ್ತಿದೆ, ನೀನೇಕೆ ಬಂದಿಲ್ಲ, ಬರಲೇ ಬೇಕು' ಎಂದು ಕರೆದುಕೊಂಡು ಹೋಗಿ, ದೇವಾನುದೇವತೆಗಳು ಕೊಟ್ಟಿದ್ದ, ತನ್ನ ಕೊರಳೊಳಗಿದ್ದ ಅತ್ಯಂತ ಮೌಲ್ಯಯುತವಾದ ಮುತ್ತಿನ ಹಾರವನ್ನು ಹನುಮಂತನಿಗೆ ಉಡುಗೊರೆಯಾಗಿ ಕೊಡುತ್ತಾಳೆ.

ಆಗ ಹನುಮಂತ, ಹಾರದಲ್ಲಿರುವ ಮುತ್ತುಗಳನ್ನು ಒಂದೊಂದಾಗಿ ತೆಗೆದು ಕೆಲವನ್ನು ಹಲ್ಲುಗಳಿಂದ ಕಚ್ಚಿ, ಕೆಲವನ್ನು ಅಲ್ಲಿರುವ ಕಲ್ಲಿನಿಂದ ಒಡೆದು ನೋಡಿ ಬಿಸಾಕಲು ಪ್ರಾರಂಭಿಸುತ್ತಾನೆ. ಗಮನಿಸಿದ ಸೀತೆಗೆ ಹನುಮಂತನ ಮೇಲೆ ಸಿಟ್ಟು ಬರುತ್ತದೆ. 'ಅಷ್ಟು ಮೌಲ್ಯವಾದ ಮುತ್ತನ್ನು ಒಡೆದು ಏಕೆ ಹಾಳು ಮಾಡುತ್ತಿರುವೆ' ಎಂದು ಕೂಗುತ್ತಾಳೆ. ಆಗ ಹನುಮಂತ ' ತಾಯಿ, ಇದರಲ್ಲಿ ನನ್ನ ರಾಮನಿದ್ದಾನಾ ಎಂದು ನೋಡುತ್ತಿದ್ದೇನೆ, ಆದರೆ ಈ ಯಾವ ಮುತ್ತುಗಳಲ್ಲೂ ನನ್ನ ರಾಮ ಕಾಣುಸುತ್ತಿಲ್ಲ. ಅದಕ್ಕೆ ಇದು ನನಗೆ ಮೌಲ್ಯಯುತವಾದದ್ದು ಎಂದು ಅನಿಸುತ್ತಿಲ್ಲ, ಆದ್ದರಿಂದ ಇದನ್ನು ನಿಮಗೆ ಹಿಂತಿರುಗಿಸುತ್ತಿದ್ದೇನೆ. ಬೇಸರ ಮಾಡಿಕೊಳ್ಳಬೇಡಿ' ಎನ್ನುತ್ತಾನೆ. ಆಗ ಸೀತೆ, 'ಅವು ಭೌತಿಕ ವಸ್ತುಗಳು, ಅಲ್ಲಿ ರಾಮನಿರಲು ಹೇಗೆ ಸಾಧ್ಯ?, ಈಗ ನೀನು ರಾಮನ ಭಕ್ತ, ಆದರೆ ನಿನ್ನೊಳಗೆ ರಾಮನಿದ್ದಾನಾ?' ಎಂದು ಪ್ರಶ್ನಿಸುತ್ತಾಳೆ. ಆಗ ಹನುಮಂತ ನನ್ನ ರೋಮ ರೋಮಗಳಲ್ಲಿ ರಾಮನಿದ್ದಾನೆ ಎಂದು ಎದೆ ಬಗೆದು ಅಲ್ಲಿ ರಾಮ ಸೀತೆ ಇರುವುದನ್ನು ತೋರಿಸುತ್ತಾನೆ. ಅಂದರೆ ಹನುಮ, ಭೌತಿಕವಾಗಿ ಮಾತ್ರ ರಾಮನೊಂದಿಗೆ ಇರಲಿಲ್ಲ. ತನ್ನೊಳಗೂ ರಾಮನನ್ನು ಆವಾಹಿಸಿಕೊಂಡಿದ್ದ. ಅದಕ್ಕೆ ಹನುಮಂತನಿಗೆ ಭೌತಿಕವಾಗಿ ರಾಮ ಸದಾ ತನ್ನೊಡನೆ ಇರಬೇಕು ಎಂದೆನಿಸುತ್ತಿರಲಿಲ್ಲ. ಅಲ್ಲದೆ ರಾಮನಿಂದ, ತನಗೆ ಸ್ಥಾನ-ಮಾನ, ಗೌರವದ ಬೆಲೆ, ಉಡುಗೊರೆ ಇತ್ಯಾದಿ ಸಂಗತಿಗಳನ್ನು ಪಡೆದುಕೊಳ್ಳಬೇಕೆಂಬ ಆಸೆಯೇ ಇರಲಿಲ್ಲ, ಕೊಡದಿದ್ದರೆ ಕೊಡಲಿಲ್ಲವೆಂಬ ಕೊರಗು ಇರಲಿಲ್ಲ. ಅಗತ್ಯವೆನಿಸಿದರೆ ಶ್ರೀ ರಾಮನಿಗೆ ತನ್ನದೊಂದಿಷ್ಟು ಸೇವೆ, ಸಹಾಯ ಬೇಕೆಂದೇ ಯೋಚಿಸುತ್ತಿದ್ದ. ಅದರಲ್ಲಿಯೇ ಕೃತಾರ್ಥತೆಯನ್ನು ಕಾಣುತ್ತಿದ್ದ.

ವೈಚಾರಿಕವಾದ ಸಂಘಟನೆಯೊಳಗೆ ತೊಡಗಿಸಿಕೊಂಡ ನಾವೆಲ್ಲರೂ ಅವಲೋಕನ ಮಾಡಿಕೊಳ್ಳಬೇಕಿದೆ. ನಾನು ಭೌತಿಕವಾಗಿ ಈ ಸಂಘಟನೆಯೊಳಗಿದ್ದೇನೆ, ಆದರೆ ನನ್ನೊಳಗೆ ಸಂಘಟನೆಯ ಆಚಾರ, ವಿಚಾರಗಳಿದೆಯೇ?, ನಾನು ಸಂಘಟನೆಯೊಳಗಿದ್ದರೆ, ಸಿಗುವ ಅಧಿಕಾರ, ಗೌರವ, ಹುದ್ದೆ, ಸ್ಥಾನ-ಮಾನ, ಗೆಲುವು ಮಾತ್ರ ನನ್ನ ಗುರಿಯಾಗಿರುತ್ತೆ. ನನ್ನೊಳಗೆ ಸಂಘಟನೆಯಿದ್ದರೆ, ನಮಗೆ ಪಕ್ಷದ ಸಿದ್ಧಾಂತ, ಪಕ್ಷದ ನಿಲುವು, ದೇಶದ ಹಿತ ಮುಖ್ಯವಾಗುತ್ತದೆ. ಲಭ್ಯವಾದ ಹುದ್ದೆ, ಅಧಿಕಾರಗಳೆಲ್ಲವೂ ಜವಾಬ್ದಾರಿ ಎನಿಸುತ್ತದೆ. ಸೀತೆ ಕೊಟ್ಟ ಮುತ್ತಿನೊಳಗೆ ರಾಮನಿದ್ದಾನಾ ಎಂದು ಯೋಚಿಸಿದ ಹನುಮನ ರೀತಿ, ನಾನು ಒಂದು ವೈಚಾರಿಕವಾದ ಸಂಘಟನೆಯೊಳಗಿದ್ದೇನೆ, ನನ್ನೊಳಗೆ ಸಂಘಟನೆಯ ವಿಚಾರಗಳಿವೆಯಾ?

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 40

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**